ಬಸವರಾಜ ಬಳಿಗಾರ ಸಂಪಾದಕತ್ವದಲ್ಲಿ..

KARKAN/2021/27600

# ಕರುನಾಡ ಕಂದ

ಸಂಪುಟ-1 । ಸಂಚಿಕೆ-4 । ದಿನಾಂಕ:16-12-2021 । ಪುಟಗಳು: 16 ಬೆಲೆ: 20/-


ಪಾಕ್ಷಿಕ



## ಕಂಪನಿಯಲ್ಲಿ ಉದ್ಯೋಗದ ಹೆಸರಿನಲ್ಲಿ ಲಕ್ಷ-ಲಕ್ಷ ಹಣ ವಸೂಲಿ: ಮಾನಸಯ್ಯ

## ಭಾವೈಕ್ಯ ತಾಣ ಶ್ರೀ ಗೂಳಿ ಬಸವೇಶ್ವರ ದೇವಸ್ಥಾನ ಮುಷ್ಟಹಳ್ಳಿ





## ಹದಿನೆಂಟು ಹುತಾತ್ಮರ ನೆಲ ಕೋಗನೂರು

## ಹಿಂದುಳಿದ ವರ್ಗಗಳ ಆಯೋಗ ಯಾವಾಗ ಅಸ್ತಿತ್ವಕ್ಕೆ ಬಂತು ಗೊತ್ತೇ..?



## ಮೇಲು ಸೇತುವೆ ಕುಸಿತದಿಂದ ಹೈರಾಣಾದ ಜನರ ಬದುಕು

## ಆಮೆ ಗತಿಯ ಕೊಳಗೇರಿ ಅಭಿವೃದ್ಧಿ ಮಂಡಳಿ






## 40ನೇ ವರ್ಷದ ಜನುಮ ದಿನದ ಶುಭಾಶಯಗಳು ಯುವರಾಜ್‌ಸಿಂಗ್

## ನಾನು 101ನೇಯ ಕೌರವ...

## ವಾದಿರಾಜನೆಂಬ ಹಾಸ್ಯ ಪ್ರತಿಭೆ



ಕರುನಾಡ ಕಂದ
ಸಂಪುಟ-1 । ಸಂಚಿಕೆ-4
ದಿನಾಂಕ: 16-12-2021 । ಪುಟಗಳು: 16

# ಮೇಲು ಸೇತುವೆ ಕುಸಿತದಿಂದ ಹೈರಾಣಾದ ಜನರ ಬದುಕು




ಹುಬ್ಬಳ್ಳಿ ಲಕ್ಷ್ಮೇಶ್ವರ ಹೆದ್ದಾರಿ ಮಾರ್ಗ ಮಧ್ಯದಲ್ಲಿ ಶಿರೂರು ಗ್ರಾಮದ ಬಳಿ ಇರುವ ಮೇಲು ಸೇತುವೆ ಕಳಪೆ ಕಾಮಗಾರಿಯಿಂದ ಕುಸಿತಗೊಂಡು ಸುಮಾರು 8 ತಿಂಗಳು ಕಳೆದಿದೆ. 5 ಕೋಟಿ ವೆಚ್ಚದಲ್ಲಿ ದುರಸ್ತಿ ಕಾಮಗಾರಿ ಆರಂಭಗೊಂಡಿದೆ ಆದರೆ ದುರಸ್ತಿ ಕಾಮಗಾರಿ ಬಹು ಮಂದಗತಿ ಇಂದ ಸಾಗುತ್ತಿದೆ, ಇದರಿಂದ ಹುಬ್ಬಳ್ಳಿ ಲಕ್ಷ್ಮೇಶ್ವರ ನಗರಗಳಿಗೆ ಪ್ರಯಾಣಿಸುವ ಜನರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಅಷ್ಟೇ ಅಲ್ಲದೆ ಹುಬ್ಬಳ್ಳಿ ಇಂದ ಇದೇ ಮಾರ್ಗದಲ್ಲಿ ವಿವಿಧ ಹಳ್ಳಿಗಳಿಗೆ ಹೋಗುವ ಬಸ್ಸುಗಳು ಸ್ಥಗಿತಗೊಂಡು ತಿಂಗಳುಗಳೇ ಕಳೆದಿವೆ. ಆ ಗ್ರಾಮದ ಬಸ್ ನಿಲ್ದಾಣಗಳು ಬಸ್ ಗಳು ಬಾರದೆ ಬಿಕೋ ಅನ್ನುತ್ತಿರುವುದು ಸರ್ವೇ ಸಾಮಾನ್ಯವಾಗಿದೆ. ಹಳ್ಳಿಗಳಿಗೆ ಬಸ್ಸುಗಳು ಬಾರದ ಕಾರಣ ಶಾಲೆ ಕಾಲೇಜುಗಳಿಗೆ ಹೋಗುವ ವಿಧ್ಯಾರ್ಥಿಗಳ ಬಾಳು ಸಂಕಷ್ಟಕ್ಕೆ ಸಿಲುಕಿದೆ. ವಿದ್ಯಾರ್ಥಿಗಳು ರಸ್ತೆಯಲ್ಲಿ ಹೊಗುವ ಬೈಕು, ಟ್ರ್ಯಾಕ್ಟರ್,ಇರತೆ ವಾಹನಗಳಿಗೆ ಕೈ ಹೊಡೆದುಕೊಂಡು ಡ್ರಾಪ್ ತೆಗೆದುಕೊಳ್ಳುತ್ತಿದ್ದಾರೆ. ಕೆಲಸಕ್ಕೆ ಹೋಗುವವರು ತಮ್ಮ ಸ್ವಂತ ವಾಹನಗಳನ್ನು ಅವಲಂಬಿಸಿದ್ದಾರೆ.

ಕಾಮಗಾರಿ ನಡೆಯುತ್ತಿರುವ ಸೇತುವೆ ಮೇಲೆ ಇಲ್ಲಿಯವರೆಗೆ ಲಘು ವಾಹನಗಳು ಸಂಚ-ರಿಸುತ್ತಿದ್ದವು, ಆದರೆ ಈಗ ಸರಕಾರಿ ಸ್ವಾಮ್ಯದ ಬಸ್ಸುಗಳು ಹುಬ್ಬಳ್ಳಿ ಲಕ್ಷ್ಮೇಶ್ವರ ನಗರಗಳಿಗೆ ಸಂಪರ್ಕ ಕಲ್ಪಿಸಲು ಸಂಚಾರ ಆರಂಭಿಸಿವೆ. ಪ್ರಯಾಣಿಕರನ್ನು ಹೊತ್ತು ಬಂದ ಬಸ್ ಒಂದು ದಂಡೆಯ ವರೆಗೆ ಬಂದು ಜನರನ್ನು ಇಳಿಸಿ, ಸೇತುವೆಯನ್ನು ದಾಟಿ ಮತ್ತೆ ಜನರನ್ನು ಹತ್ತಿಸಿ ಕೊಂಡು ಹೊಗುವದು ದೊಡ್ಡಾಟ ನಡೆಸಿವೆ. ಇದ-ರಿಂದ ಜನಕ್ಕೆ ಅಲ್ಪ ಪ್ರಮಾಣದ ನೆಮ್ಮದಿ ಸಿಕ್ಕಂತಾಗಿದೆ.

ಇದರ ಬಗ್ಗೆ ಹೇಳಿದ ಸೈಟ್ ಇಂಜಿನಿಯರ್ ವೀರಯ್ಯ "ನಾವು ಕೆಳಗಡೆ ಕೆಲಸ ಮಾಡುವಾಗ ಮೇಲೆ ಗಾಡಿಗಳು,ಬಸ್ಸುಗಳು ಚಲಿಸುವುದರಿಂದ ನಮಗೆ ಭಯ ಆಗುತ್ತದೆ. ಆದರು ಸೇತುವೆ ದುರಸ್ತಿ ಸರಿಪಡಿಸುವ ಕೆಲಸವನ್ನು ಬೇಗನೆ ಮುಗಿಸಬೇಕು ಅನ್ನುವ ಕಾರಣಕ್ಕೆ



ಭಯದಿಂದಲೇ ಕೆಲಸ ಮಾಡುತ್ತಿದ್ದೇವೆ ಇನ್ನು ಒಂದು ತಿಂಗಳಲ್ಲಿ ಕೆಲಸವನ್ನು ಮುಗಿಸುತ್ತೇವೆ" ಎಂದರು. ಮೇಲು ಸೇತುವೆ ಈ ರೀತಿ ಕುಸಿತಗೊಡಿದ್ದಕ್ಕೆ ಕಾರಣ ತಿಳಿಸಿದ ಅವರು ಸೇತುವೆ ಕೊನೆಯಲ್ಲಿ ಸ್ಟೀಲಬಾರ್ ಹಾಕಿಲ್ಲ, ಅಲ್ಲಿ ಸರಿಯಾದ ಕ್ಲೋಸಿಂಗ್ ಮಾಡಿಲ್ಲ ಎಂದು ಹೇಳಿದರು. ಜನರಿಗೆ ಸಂಚಾರದ ತೊಂದರೆಗೆ ಮುಕ್ತಿ ದೊರಕಲು ಸುಮಾರು ಇನ್ನೂ 2 ತಿಂಗಳುಗಳು ಬೇಕಾಗಬಹುದು.

**-ಪ್ರವೀಣ್ ಎಸ್ ಕಾಲವಾಡಮಠ, ಕುಂದಗೋಳ**

## ಗೃಹರಕ್ಷಕರ ವಲಯ ಮಟ್ಟದ ಕ್ರೀಡಾಕೂಟ :

# ಸತತ 10ನೇ ಬಾರಿಗೆ ಶಿವಮೊಗ್ಗ ಜಿಲ್ಲೆಗೆ ಸಮಗ್ರ ಚಾಂಪಿಯನ್ ಶಿಪ್

ಭದ್ರಾವತಿ: ದಾವಣಗೆರೆಯಲ್ಲಿ ನಡೆದ ಗೃಹರಕ್ಷಕರ ವಲಯಮಟ್ಟದ ವೃತ್ತಿಪರ ವಾರ್ಷಿಕ ಕ್ರೀಡಾಕೂಟದಲ್ಲಿ ಶಿವಮೊಗ್ಗ ಜಿಲ್ಲೆಯ ಗೃಹರಕ್ಷಕರು ಅತ್ಯುತ್ತಮ ಸಾಧನೆ ತೋರುವ ಮೂಲಕ ಸತತ 10ನೇ ಬಾರಿಗೆ ಸಮಗ್ರ ಚಾಂಪಿಯನ್ ಶಿಪ್ ಪ್ರಶಸ್ತಿ ತಮ್ಮದಾಗಿಸಿಕೊಂಡಿದ್ದಾರೆ.

ಮೂರು ದಿನಗಳ ಕಾಲ ನಡೆದ ಕ್ರೀಡಾ ಕೂಟದಲ್ಲಿ ಪುರುಷರ 100 ಮೀ. ಓಟದಲ್ಲಿ ಪ್ರಥಮ, ಮಹಿಳೆಯರ 100 ಮೀ. ಓಟದಲ್ಲಿ ಪ್ರಥಮ ಮತ್ತು ದ್ವಿತೀಯ ಸ್ಥಾನ, ಪುರುಷರ 800 ಮೀ. ಓಟದಲ್ಲಿ ಪ್ರಥಮ ಮತ್ತು ದ್ವಿತೀಯ ಸ್ಥಾನ, ಮಹಿಳೆಯರ 400 ಮೀ. ಓಟದಲ್ಲಿ ಪ್ರಥಮ ಮತ್ತು ತೃತೀಯ ಸ್ಥಾನ, ಪುರುಷರ ಉದ್ದ ಜಿಗಿತದಲ್ಲಿ ಪ್ರಥಮ ಸ್ಥಾನ ಹಾಗೂ ಎತ್ತರ ಜಿಗಿತದಲ್ಲಿ ಪ್ರಥಮ ಮತ್ತು ತೃತೀಯ ಸ್ಥಾನ ಪಡೆದಿದ್ದಾರೆ.

ರೈಫಲ್ ಡ್ರಿಲ್ ಪ್ರಥಮ, ರೆಸ್ಕ್ಯೂ ಪ್ರಥಮ ಸ್ಥಾನ, ಪುರುಷರ ಮತ್ತು ಮಹಿಳೆಯರ 4*100 ರಿಲೇ ಪ್ರಥಮ, ಪುರುಷರ ವಾಲೀಬಾಲ್ ಪ್ರಥಮ ಹಾಗೂ ಕಬಡ್ಡಿಯಲ್ಲಿ ದ್ವಿತೀಯ ಸ್ಥಾನ ಪಡೆಯುವ ಮೂಲಕ ಮೇಲುಗೈ ಸಾಧಿಸುವ ಮೂಲಕ ಶಿವಮೊಗ್ಗ ಜಿಲ್ಲಾ ಗೃಹರಕ್ಷಕರು ಮತ್ತೊಮ್ಮೆ ವಲಯಮಟ್ಟದ ಕ್ರೀಡಾಕೂಟದಲ್ಲಿ ಸಮಗ್ರ ಚಾಂಪಿಯನ್ ಶಿಪ್ ಪ್ರಶಸ್ತಿ ತಮ್ಮದಾಗಿಸಿಕೊಂಡಿದ್ದಾರೆ.

ಸಮಗ್ರ ಚಾಂಪಿಯನ್ ಶಿಪ್ ಪ್ರಶಸ್ತಿ ಪಡೆದ ಕ್ರೀಡಾಪಟುಗಳಿಗೆ ಶಿವಮೊಗ್ಗ ಜಿಲ್ಲಾ ಸಮಾದೇಷ್ಟರು, ಜಿಲ್ಲಾ ಸಹಾಯಕ ಬೋಧಕರು, ಜಿಲ್ಲೆಯ ಎಲ್ಲಾ ಘಟಕಾಧಿಕಾರಿಗಳು, ಎನ್ ಸಿ ಓ ಅಧಿಕಾರಿಗಳು, ಜಿಲ್ಲಾ ಕಚೇರಿಯ ಅಧಿಕಾರಿಗಳು, ಸಿಬ್ಬಂದಿ ಹಾಗೂ ಶಿವಮೊಗ್ಗ, ಭದ್ರಾವತಿ ಸೇರಿದಂತೆ ಎಲ್ಲಾ ಘಟಕಗಳ ಗೃಹರಕ್ಷಕರು ಅಭಿನಂದನೆ ಸಲ್ಲಿಸಿದ್ದಾರೆ.



# ನಗರಕ್ಕೆ ಬೇಕು ಸುಸಜ್ಜಿತ ಬ್ಲಡ್ ಬ್ಯಾಂಕ್

ಭದ್ರಾವತಿ: ತಾಲ್ಲೂಕಿನ ಹಲವೆಡೆ ಪ್ರತಿದಿನ ರಸ್ತೆ ಅಪಘಾತ ಸೇರಿದಂತೆ ವಿವಿಧ ಕಾರಣಗಳಿಂದ ರಕ್ತಸ್ರಾವದಿಂದ ಉಂಟಾಗುತ್ತಿರುವ ಸಾವನ್ನು ತಡೆಗಟ್ಟಲು "ರಕ್ತ ಶೇಖರಣಾ ಕೇಂದ್ರ"(ಃಐಔಔಆ ಃಂಓಏ) ಅತ್ಯವಶ್ಯಕವಾಗಿದೆ.

ತರೀಕೆರೆ ರಸ್ತೆಯ ಮೀನ ನರ್ಸಿಂಗ್ ಹೋಂ ನ ಜೀವಧಾರ ಬ್ಲಡ್ ಬ್ಯಾಂಕ್ ತಾಂತ್ರಿಕ ಕೆಲವು ಕಾರಣಗಳಿಂದ ಮುಚ್ಚಲ್ಪಟ್ಟಿದೆ. ಪ್ರತಿನಿತ್ಯ ಸರ್ಕಾರಿ ಆಸ್ಪತ್ರೆಗೆ ರಕ್ತಸ್ರಾವದಿಂದ/ ರಕ್ತ ಸಂಬಂಧಿ ಕಾಯಿಲೆಗಳಿಂದ ಸರ್ಕಾರಿ ಆಸ್ಪತ್ರೆಗೆ ಬರುವ ರೋಗಿಗಳನ್ನು ರೋಗಿಗಳ ಸಂಬಂಧಿಕರು ಸೂಚಿಸುವ ಜಿಲ್ಲಾ ಮೆಗ್ಗಾನ್ ಆಸ್ಪತ್ರೆಗೆ ಅಥವಾ ಖಾಸಗೀ ಆಸ್ಪತ್ರೆಗಳಿಗೆ ಶಿಫಾರಸ್ಸು ಮಾಡಲಾಗುತ್ತಿದೆ. ಖಾಸಗೀ ಆಸ್ಪತ್ರೆಗಳಲ್ಲೂ ಸಹ ಪ್ರತಿ ದಿನ ರಕ್ತ ಸಂಬಂಧಿ ಕಾಯಿಲೆಗಳಿಂದ ಬಳಲುತ್ತಿರುವ ರೋಗಿಗಳಿಗೆ ರಕ್ತದ ಅವಶ್ಯಕತೆ ಅತಿ ಜರೂರಾಗಿ ಬೇಕಿರುತ್ತದೆ. ಆದರೆ ರಕ್ತ ಶೇಖರಣೆ, ರಕ್ತದ ವಿವಿಧ ಹಂತಗಳ ತಪಾಸಣೆ ನಡೆಸಲು ಯಾವುದೇ ಮೂಲಭೂತ ಅಗತ್ಯ ಸೌಲಭ್ಯಗಳನ್ನು ಒಳಗೊಂಡ ಬ್ಲಡ್ ಬ್ಯಾಂಕ್ ನಗರದಲ್ಲಿ ಇಲ್ಲದ ಕಾರಣ ಶಿವಮೊಗ್ಗ ಜಿಲ್ಲಾ ಕೇಂದ್ರದ ರೋಟರಿ ಹಾಗೂ ರೆಡ್ ಕ್ರಾಸ್ ಬ್ಲಡ್ ಬ್ಯಾಂಕ್ ಗಳಿಂದ ರೋಗಿಗೆ ಅಗತ್ಯ ರಕ್ತ ತರಲು ಶಿಫಾರಸ್ಸು ಮಾಡಲಾಗುತ್ತಿದೆ.

ರೋಗಿಯ ಸಂಬಂಧಿಕರು ರಕ್ತದಾನ ಮಾಡುವವರನ್ನು ಕರೆದುಕೊಂಡು ಹೋಗಿ ರಕ್ತ ಕೊಟ್ಟರೂ ಸಹ ವಿವಿಧ ಪರೀಕ್ಷೆಗಳ ನೆಪವೊಡ್ಡಿ ಬ್ಲಡ್ ಬ್ಯಾಂಕ್ ನವರು ಒಂದು ಯೂನಿಟ್ ರಕ್ತಕ್ಕೆ ಸಾವಿರಾರು ರೂಪಾಯಿ ವಸೂಲಿ ಮಾಡುತ್ತಿದ್ದಾರೆ ಎಂದು ಸಾರ್ವಜನಿಕರು ಆರೋಪಿಸುತ್ತಿದ್ದಾರೆ.

ಆದರೆ, ಬ್ಲಡ್ ಬ್ಯಾಂಕ್ ಸಿಬ್ಬಂದಿಗಳು " ನಾವು ವಿವಿಧ ಪರೀಕ್ಷೆಗಳನ್ನು ಮಾಡಿ ರಕ್ತ ಶುದ್ಧೀಕರಿಸುವ ಮೂಲಕ ಸಂಬಂಧಪಟ್ಟ ರೋಗಿಗಳ ರಕ್ತಕ್ಕೆ ಹೊಂದಿಕೊಳ್ಳುವ ನಿಯಮಗಳ ಪ್ರಕಾರ ರಕ್ತ ನೀಡಲಾಗುತ್ತದೆ. ಈ ರೀತಿಯ ಪ್ರಕ್ರಿಯೆಗಾಗಿ ತಗಲುವ ವೆಚ್ಚವನ್ನು ಪಡೆಯಲಾಗುತ್ತದೆ ಹೊರತು, ಯಾವುದೇ ಹೆಚ್ಚುವರಿ ಶುಲ್ಕ ಪಡೆಯುತ್ತಿಲ್ಲ" ವೆಂದು ಹೇಳುತ್ತಾರೆ.

ವಿಐಎಸ್ಎಲ್ ಆಸ್ಪತ್ರೆ ಸೂಕ್ತ ಸ್ಥಳ :

ನಗರದಲ್ಲಿ ರಕ್ತದಾನಿಗಳ ಸಂಖ್ಯೆ ಅಧಿಕವಾಗಿದೆ. ಆದರೆ, ರಕ್ತ ಪಡೆದು, ಶೇಖರಿಸಲು ಉತ್ತಮ, ಸುಸಜ್ಜಿತ ಬ್ಲಡ್ ಬ್ಯಾಂಕ್ ತೆರೆಯುವುದು ಅತ್ಯವಶ್ಯಕವಾಗಿದೆ. ರಕ್ತ ಶೇಖರಣಾ ಕೇಂದ್ರ ಸ್ಥಾಪನೆಗೆ ಪ್ರಮುಖವಾಗಿ ಬೇಕಿರುವುದು ಸೂಕ್ತ ಸ್ಥಳಾವಕಾಶ. ಪ್ರಸ್ತುತ ಸಂದರ್ಭದಲ್ಲಿ ವಿಐಎಸ್-ಎಲ್ ಆಸ್ಪತ್ರೆ ಸುಸಜ್ಜಿತ ಬ್ಲಡ್ ಬ್ಯಾಂಕ್ ತೆರೆಯಲು ಎಲ್ಲಾ ರೀತಿಯಲ್ಲೂ ಸಮರ್ಪಕವಾಗಿದೆ. ಈ ನಿಟ್ಟಿನಲ್ಲಿ ಕ್ಷೇತ್ರದ ಶಾಸಕರು, ಜನಪ್ರತಿನಿಧಿಗಳು, ಸೇವಾ ಮನೋಭಾವನೆಯ ಸಂಘಟನೆಗಳು ಸಂಬಂಧಪಟ್ಟವ ರೊಂದಿಗೆ ಹಾಗೂ ಸರ್ಕಾರದ ಗಮನ ಸೆಳೆಯುವ ಮೂಲಕ ಸುಸಜ್ಜಿತ ಬ್ಲಡ್ ಬ್ಯಾಂಕ್ ತೆರೆಯಬೇಕೆಂಬುದೇ ನಮ್ಮ ಆಶಯ.

**ವರದಿ-ಕೆ.ಆರ್.ಶಂಕರ್**

ವಿಶಾಲ ಹೋಮ್ ಫುಡ್ ಸರ್ವಿಸ್, ಗದಗ



ಶುದ್ಧ ಸಸ್ಯಾಹಾರಿ



ಊಟದ ವಿವರ

ರೊಟ್ಟಿ, ಚಪಾತಿ, ಎರಡು ತರಹದ ಪಲ್ಲೆ, ಮೊಸರು,ಚಟ್ನಿ, ಅನ್ನ,ಸಾಂಬಾರು,ಪ್ರತಿ ಅಮವಾಸ್ಯೆ ಹಾಗೂ ಹುಣ್ಣಿಮೆ ದಿನದಂದು ಹೋಳಿಗೆ ಊಟ ಸಿಗುತ್ತದೆ

(ವಿಶೇಷ ಸೂಚನೆ: ಗದಗ -ಬೆಟಗೇರಿಯವರಿಗೆ ಹೋಮ್ ಡೆಲಿವರಿ ಸೇವೆ ಸಿಗುತ್ತದೆ)

ಸಂಪರ್ಕಿಸಿ: 8861557691.

ಪ್ರತಿ ಊಟಕ್ಕೆ 70 ರೂಪಾಯಿಗಳು ಮಾತ್ರ.

ಕರುನಾಡ ಕಂದ
ಸಂಪುಟ–1 । ಸಂಚಿಕೆ–4
ದಿನಾಂಕ: 16–12–2021 । ಪುಟಗಳು: 16

# ವಾದಿರಾಜನೆಂಬ ಹಾಸ್ಯ ಪ್ರತಿಭೆ



ಪ್ರತಿಭೆಗಳಿಗೆ ಅವಕಾಶಗಳು ಕಡಿಮೆ ಇಲ್ಲ. ಸಾಮಜಿಕ ಜಾಲತಾಣಗಳ ಸಾಹಾಯದಿಂದ ಅನೇಕರು ತಮ್ಮ ಪ್ರತಿಭೆಯಿಂದ ಗುರುತಿಸಿಕೊಂಡಿದ್ದಾರೆ, ಸಾಹಿತ್ಯ ,ಸಂಗೀತ ,ನಟನೆ ,ಹಾಸ್ಯ, ನೃತ್ಯ ಯಾವುದಾದರೂ ಸರಿ ಜನರ ಮನ ಮುಟ್ಟಿದರೆ ಸಾಕು ಆ ವ್ಯಕ್ತಿ ಎಲ್ಲರ ಬಾಯಲ್ಲಿ ,ಮನದಲಿ, ಮನೆಯಲ್ಲಿರುತ್ತಾನೆ. ಹಾಗೆ ಮನೆ ಮಾತಾಗಿರುವ. ಜನರ ಮುಖದೊಳಗೇ ನಗು ತರಿಸುವ ಹುಡಗ ವಾದಿರಾಜ ಬಬಲಾದಿ.

ಮೂತಲಃ ಉತ್ತರ ಕರ್ನಾಟದ ಬೆಳಗಾವಿ ಜಿಲ್ಲೆಯಲ್ಲಿ; ಅಪ್ಪ ಅಮ್ಮ ತಮ್ಮ ಮತ್ತು ತಾನು ನಾಲ್ಕು ಜನರು ವಾಸವಾಗಿರುವ ಪುಟ್ಟ ಕುಟಂಬದ ಹಿರಿಯ ಮಗ ಈ ವಾದಿರಾಜ ರಾಘವೇಂದ್ರ ಬಬಲಾದಿ.

ಈಗಾಗಲೇ ತನ್ನ ಇನ್ಸ್ಟಾಗ್ರಾಮ ನಲ್ಲಿ ಲಕ್ಷಕ್ಕೂ ಅಧಿಕ ಬೆಂಬಲಿಗರನ್ನು ಹೊಂದಿರುವ ವಾದಿರಾಜ ಚಿಕ್ಕ ಚಿಕ್ಕ ಹಾಸ್ಯದ ಮಾತುಗಳಾಡಿ ಅವುಗಳನ್ನ ವಿಡಿಯೋ ಮುಖಾಂತರ ಜನರೆದುರಿಗೆ ಪ್ರಸ್ತುತ ಪಡಿಸುತ್ತಾರೆ. ಉತ್ತರ ಕರ್ನಾಟಕದ ಶೈಲಿಯಲ್ಲಿ ಮಾತಾಡುವ ಇವರು ಅದೇ ಮಾತಿನ ಶೈಲಿಯಲ್ಲಿಯೇ ಹಾಸ್ಯಮಾಡಿ ಜನಮಣ್ಣನೆ ಗಳಿಸಿದ್ದಾರೆ. ಕಾಲೇಜಿನ ಹುಡಗ ಹುಡುಗಿಯರಿಂದ ಹಿಡಿದು ಗೃಹಿಣಿಯರೂ ಕೂಡ ನೋಡುವ ಹಾಸ್ಯಗಳು ಇವರದ್ದಾಗಿರುತ್ತದೆ. ಈಗಲೂ ಎಲ್ಲ ವಯೋ ವರ್ಗದವರನ್ನು ಗಮನ ಸೆಳೆದದ್ದು ವಾದಿರಾಜ ಅವರ ತಿಳಿ ಹಾಸ್ಯ.

ಬೆಳಗಾವಿ ಜಿಲ್ಲೆಯಲ್ಲಿಯ ಕಾಲೇಜೊಂದರಲ್ಲಿ ಬಿಕಾಂ ಪದವಿ ಓದುವ ಇವರು ತಮ್ಮ ಬಿಡುವಿನ ಸಮಯದಲ್ಲಿ ಈ ರೀತಿಯಾಗಿ ಜನರ ಮೊಗದಲ್ಲಿ ನಗು ಮೂಡಿಸುವಂತಹ ಕೆಲಸ ಮಾಡುತ್ತಾರೆ.

ನಮ್ಮ ನಡುವೆ ನಡೆಯುವ ದೈನಂದಿನ ಬದುಕಿನ ಕ್ಷಣಗಳನ್ನ ಅವಲೋಕಿಸಿ ಅದರಲ್ಲೇ ಹಾಸ್ಯ ರೂಪವಾಗಿ ಮಾತಾಡುವುದು ಇವರ ಹವ್ಯಾಸ... ಪ್ರತ್ಯನಿತ್ಯದ ಜೀವನದ ಜಂಜಾಟದಿಂದ ಓಡಾಡುವ ನಮಗೆ ನಗುವೊಂದು ಅಪರಿಚಿತ ಭಾವ ಅನ್ನಿಸಿದಾಗಲೆಲ್ಲ. ಇಂತಹ ತಿಳಿ ಹಾಸ್ಯ ಮಾಡುತ್ತ ನಗಿಸುತ್ತ ಇರುವ ವಾದಿರಾಜ ಬಬಲಾದಿ ಅವರು ನಿಜಕ್ಕೂ ಇಷ್ಟವಾಗುತ್ತಾರೆ.

ತದನಂತರ ಇವರ ಮಾತುಗಾರಿಕೆ, ಪ್ರತಿ ಮಾತಿನಲ್ಲೂ ಇರುವ ಹಾಸ್ಯದ ಗುಣ, ಮುಖದ ಹಾವ ಭಾವ, ಎಲ್ಲವುಗಳನ್ನ ನೋಡಿದ ಕೆಲವು ಚಲನಚಿತ್ರಗಳ ತಂಡದಿಂದ ಇವರಿಗೆ ಅವಕಾಶಗಳು ಬರುತ್ತವೆ. ಯಾವುದೇ ಕ್ಷೇತ್ರದಲ್ಲಾಗಲಿ ಕರೆದು ಅವಕಾಶ ಕೊಡುವವರು ವಿರಳ ಒಂದು ವೇಳೆ ಹಾಗೆ ಕರೆದು ಅವಕಾಶ ನೀಡುತ್ತಿದ್ದಾರೆಂದರೆ ಅದಕ್ಕೆ ಅವನ ಇಷ್ಟು ವರ್ಷದ ಶ್ರಮ, ಶ್ರದ್ಧೆ, ನೀರಿಕ್ಷೆ ಇಲ್ಲದೆ ಮಾಡಿದ ಕೆಲಸ ಕಾರಣವಾಗುತ್ತದೆ. ಹಾಗೆಯೆ ವಾದಿರಾಜ ಅವರ ಪ್ರತಿಭೆಗಳಿಗೆ ಇವತ್ತು ಫಲಗಳು ಸಿಗುತ್ತಿವೆ. ಮತ್ತು ಹಲವು ಅವಕಾಶಗಳಿಗೆ ಪಾತ್ರರಾಗುತ್ತಾರೆ.

ಎಚ್ ಕೆ ಪ್ರಕಾಶ ಅವರ ನಿರ್ಮಾಣದ ,ಭರತ ಜಿ ಅವರ ನಿರ್ದೇನದಲ್ಲಿ ಮೂಡಿ ಬರುತ್ತಿರುವ ಸ್ಪೋಕೀ ಕಾಲೇಜ್ (ಠಿಠಾಇಥಿ ಛಿಂಟಟಜರಜ) ಎನ್ನುವ ಕನ್ನಡ ಚಲನಚಿತ್ರದಲ್ಲಿ ವಾದಿರಾಜ ಅವರುನಟಿಸಿದ್ದಾರೆ. ಚಿತ್ರೀಕರಣ ಮುಗಿದಿದ್ದು ಬಿಡುಗಡೆ ಹಂತದಲ್ಲಿದೆ. ಅವರ ಪ್ರತಿಭೆಗೆತಕ್ಕ ಫಲ ದೊರೆಯುತ್ತಿರುವುದು ಶ್ಲಾಘನೆಯ ವಿಚಾರ.


ಇನ್ನೂ ಅನೇಕ ಚಿತ್ರಗಳಿಂದ ಅವಕಾಶಗಳು ಬರುತಿದ್ದು ತಮ್ಮ ವಿಧ್ಯಾಭ್ಯಾಸದ ನಡುವೆ ಸಮಯ ಮಾಡಿಕೊಂಡು ಸದುಪಯೋಗವನ್ನು ಪಡೆದುಕೊಳ್ಳುತ್ತಾದ್ದಾರೆ.ಮತ್ತು ವಿಧ್ಯಾಭ್ಯಾಸದ ಕಾರಣದಿಂದ ಕೆಲವು ಚಿತ್ರಗಳ ಅವಕಾಶವನ್ನು ಕೈಬಿಡಲಾಗಿದ್ದು ಇದೆ. ಈಗಾಗಲೇ ಅವರು ತಮ್ಮಂತೆಯೇ ಹಾಸ್ಯದ ಮನೋಭಾವವಿರುವ ಯುವತಂಡದಲ್ಲಿ ಸೇರಿಕೊಂಡು 'ಕನ್ನಡ ಸ್ಟ್ಯಾಡಪ್ ಕಾಮಿಡಿ' ಶೀರ್ಷಿಕೆ ಅಡಿಯಲ್ಲಿ ಬೆಂಗಳೂರಿನ ಅನೇಕ ಕಡೆಗೆ ವೇದಿಕೆಗಳ ಮೇಲೆ ನಿಂತು ತಮ್ಮ ಹಾಸ್ಯ ಚಟಾಕಿಯ ಮುಖಾಂತರ ಜನರನ್ನು ನಗೆಗಡಲಲ್ಲಿ ತೇಲಿಸಿಬಿಡುತ್ತಿದ್ದಾರೆ.

ಗೂಗಲ್ ಮಿಟ್, ಜೂಮ್, ನಂತಹ ಜಾಲತಾಣ ಬಳಸಿಕೊಂಡು ಅಲ್ಲಿಯೂ ಸ್ಟ್ಯಾಂಡಪ್ ಕಾಮಿಡಿ ಮಾಡುವ ಮುಖಾಂತರವಾಗಿ ಜನರ ಮನದಲ್ಲಿ ನೆಲೆಯೂರಿದ್ದಾರೆ.

ಉತ್ತರಕರ್ನಾಟಕದ ಹದಿಹರೆಯದವರು ಈ ರೀತಿ ಎತ್ತರಕ್ಕೆ ಬೆಳೆಯುವುದನ್ನು ನೋಡಿದಾಗ ಹೆಮ್ಮೆ ಅನ್ನಿಸುತ್ತದೆ. ಹೀಗೆ ವಾದಿರಾಜ ಅವರಿಗೆ ಇನ್ನಷ್ಟು ಅವಕಾಶಗಳು ದೊರೆಯಲಿ ಮತ್ತು ಅವರ ಹಾಸ್ಯದ ವಿಡಿಯೋ ತುಣುಕುಗಳು ಇನ್ನಷ್ಟು ಜನರಿಗೆ ತಲುಪಲಿ.

**–ರವಿ ಶಿವರಾಯಗೊಳ**

# ನೀಲ ಪ್ರಭೆ




ಭೀಮಾತೀರದ ಸಾಹಿತ್ಯಗಳು ನಾಡಿಗೆ ಮರೆಯಲಾಗದ ಕೊಡುಗೆ ನೀಡಿದ್ದಾರೆ, ಪ್ರಮುಖವಾಗಿ ಮಧುರಚೆನ್ನ ಸಿಂಪಿ ಲಿಂಗಣ್ಣ ಹಲಸಂಗಿ ಗೆಳೆಯರ ಬಳಗ ಸಾಹಿತ್ಯಕೃಷಿಯಲ್ಲಿ ತನ್ನದೇ ಆದ ವಿಶಿಷ್ಟತೆಯನ್ನು ಪಡೆದುಕೊಂಡಿದ ಭೀಮಾತೀರ ಅಂದರೆ ತಪ್ಪಾಗಲಾರದು, ವಿಜಯಪುರ ಜಿಲ್ಲೆಯ ಸಾಹಿತಿಗಳಲ್ಲಿ ಕಂಡುಬರುವ ಶಂಭು ಬಿರಾದಾರ್ ಪಗು ಸಿದ್ದಾಪುರ ಎಂಕೆ ಶೇಖ ವೈಶಾಲಿ ಬೆಳ್ಳೂರ ಗಿರಿಜಾ ಮಾಲಿಪಾಟೀಲ ಹೀಗೆ ಹಲವಾರು ಸಾಹಿತಿಗಳು ಸಾಹಿತ್ಯ ಕ್ಷೇತ್ರ ಕೆ ನೀಡಿದ್ದಾರೆ, ನೀಡುತ್ತಿದ್ದಾರೆ ಇವರ ಸಾಲಿಗೆ ಉದ್ಯೋನ್ಮುಖ ಯುವ ಪ್ರತಿಭೆ ಭೀಮಾ ತೀರದ ಮಗಳು ಸಹೋದರಿ ನೀಲಮ್ಮ, ಬಿ ಶಿರ ಗಾನ ವರ, ಅವರು ಒಬ್ಬರು ಬಡತನದಲ್ಲಿ ಹುಟ್ಟಿ ಬೆಳೆದು ಭಾವನೆ ಬರಹ ರೂಪದಲ್ಲಿ ಬ0ದಿದೆ, ಅಂದರೆ ತಪ್ಪಾಗಲಾರದು ಸಾಹಿತ್ಯ ಶ್ರೀಮಂತರ ಮನೆಯಲ್ಲಿ ಹುಟ್ಟೋದಿಲ್ಲ ಹುಟ್ಟೋದು ಬಡವರ ಮನೆ ಯಲ್ಲಿ ಇದಕ್ಕೆ ಸಾಕ್ಷಿ ನೀಲಮ್ಮ ಅಂದರೆ ತಪ್ಪಾಗಲಾರದು, ನೀ ಲ ಪ್ರಭೆ ಕವನ ಸಂಕಲನ ಓದಿದರೆ ಜೀವನದ ಅರ್ಥ ತಿಳಿಯಬಹುದಾಗಿದೆ:

ಅವಮಾನ ಅಪಮಾನ ಇರಬೇಕು ಮುಂದೆ ಹೊಗಳಿಕೆಯ ಮಾತುಗಳು ಹಿಂದೆ ಹಾಕು ಇಂ ದೆಜ

ಸಮಾಜದಲ್ಲಿ ಅವಮಾನ ಮಾಡುವುದು ನಡೆದು ಬಂದ ಪದ್ಧತಿ ಗುಣವಂತ ಇರಲಿ ಅಥ–ವಾ ಹೃದಯವಂತ ಇರಲಿ ಅವರ ಬಗ್ಗೆ ಹಿ ಜ ಯಾಳಿಸುವುದು ಆವರ ಚಟ ಏಕೆಂದರೆ ತಮ್ಮ ಬಗ್ಗೆ ವಿಚಾರ ಮಾಡದೇ ಬೇರೆಯವರ ಬಗ್ಗೆ ಕಾಲಹರಣ ಮಾಡುತ್ತಾರೆ ಮಾತನಾಡುವಾಗ ಬೆನ್ನಿ ಅಂತಹ ಮಾತುಗಳು ಹಿಂದೆ ಚೂರಿ ಹಾಕುವ ಮಾತುಗಳು ಇಂಥವರಿಂದ ದೂರ ಇರುವುದು ಒಳ್ಳೆಯದು ಇಂಥ ಮಾತುಗಳನ್ನು ಬದಿಗೆ ಸರಿಸಿ ಸಾಧನೆ ಕಡೆಗೆ ಗಮನ ನೀಡಬೇಕು ಅಂದಾಗ ಮಾತ್ರ ಮುಂದೆ ಬರಲು ಸಾಧ್ಯ ಇಂಥ ಮಾತುಗಳು ಸುಗಮವಾಗಲು ಸಾಧ್ಯ ಇಂಥವರನ್ನು ಮನೆ ಹತ್ತಿರ ಇರಬೇಕು ದಾಸರು ಒಂದು ಕಡೆ ಹೇಳಿದ್ದಾರೆ*

ಈಸಬೇಕು ಇದ್ದು ಸಮಸ್ಯೆಗಳ ಜಯಿಸಬೇಕು ಜಗದಲ್ಲಿ ಸಮಸ್ಯೆಗಳ ಆಂಜಿ ಸಾವೇ ತಂದುಕೊಳ್ಳಬಾರದು ಇಲ್ಲಿ"

ತೊಂದರೆಗಳು ಹೆಜ್ಜೆಹೆಜ್ಜೆಗೂ ಕಾಡುತ್ತದೆ ವೈ–ರಿಗಳ ಕಾಟ ಮತ್ತೊಂದು ಕಡೆ ವಿಧಿಯ ಕಾಟ ಇದರ ನಡುವೆ ಜೀವನ ಆತ್ಮಹತ್ಯೆ ಕಡೆಗೆ ಕರೆದುಕೊಂಡು ಹೋಗುತ್ತದೆ ಆದರೆ ದಾಸರು ಸಮಸ್ಯೆಯನ್ನು ಬದಿಗೆ ಸರಿಸಿ ಮುಂದೆ ಸಾಗುವುದೇ ಜೀವನ ಕೆಲವು ವರ್ಷಗಳಿಂದ ಸಣ್ಣಪುಟ್ಟ ಸಮಸ್ಯೆ ನಿವಾರಣೆ ಮಾಡದೆ ಅದರಲ್ಲಿ ಒದ್ದಾಡಿ ಆತ್ಮಹತ್ಯೆಯ ದಾರಿ ಹಿಡಿದಿದ್ದಾರೆ ಇದು ನಿಜಕ್ಕೂ ಕಳವಳಕಾರಿ ವಿಷಯ ಜಂಟಿ ಕುಟುಂಬಗಳಲ್ಲಿ ಉತ್ತಮ ಬಾಂಧವ್ಯದ ನಂಟು ಅಡಕವಾಗಿತ್ತು ಇದರಿಂದ ಆತ್ಮಹತ್ಯೆ ಪ್ರಮಾಣ ಕಡಿಮೆ ಇತ್ತು ಆದರೆ ದಿನಗಳು ಕಳೆದಂತೆ ವಯಸ್ಕರು ಸೇರಿದಂತೆ ಸಣ್ಣ ಮಕ್ಕಳು ಮನೆಯ ಮೇಲಿಂದ ಜಿಗಿದು ಸಾಯುವುದು ಆತ್ಮಹತ್ಯೆ ಮಾಡಿಕೊಳ್ಳುವುದು ವಿಷ ಕುಡಿಯುವುದು ಇಂತಹ ಘಟನೆಗಳು ನಡೆಯುತ್ತಿರುವುದು ವಿಷಾದನೀಯ ದಯವಿಟ್ಟು ಸಮಸ್ಯೆಯನ್ನು ಬಗೆಹರಿಸಿ ಮುಂದೆ ಸಾಗುವುದೇ ಜೀವನದ ಅವಿಭಾಜ್ಯ ಅಂಗ ಆತ್ಮಹತ್ಯೆ ಮಾಡಿಕೊಳ್ಳುವುದು ಹೇಡಿಗಳ ಲಕ್ಷಣ ಕವಿತ್ರಿ ತಮ್ಮ ಕವನದಲ್ಲಿ ವಿವರಿಸಿದ್ದಾರೆ*

ಹುಟ್ಟು–ಸಾವು ನಡುವಣದ ಈ ಮೂರು ದಿನದ ಜೀವನದಲ್ಲಿ ಬಿಟ್ಟು ಹೋಗಬೇಕು ನೀನು ಮಾನವ ಶ್ರೇಷ್ಠ ವ್ಯಕ್ತಿತ್ವ ದ ಉಳ್ಳೆತನ"

ಹುಟ್ಟು–ಸಾವು ನಾಣ್ಯದ ಎರಡು ಮುಖಗಳು ಅದೇ ರೀತಿ ಜೀವನದಲ್ಲಿ ಮೂರು ದಿನದ ಸಂತೆ ಪ್ರತಿಯೊಬ್ಬರು ಉತ್ತಮವಾದ ಕೆಲಸ ಮಾಡಬೇಕು ಆದರೆ ಕೆಡುಕು ಮಾಡಬಾರದು ಸಮಾಜಕ್ಕೆ ಉತ್ತಮ ಕೊಡುಗೆ ನೀಡಬೇಕು ನಾವು ಮಾಡಿದ ಸೇವೆಯನ್ನು

ಜನರು ಅಲ್ಲದೆ ಸ್ಮಶಾನವು ಸಹ ಅಳಬೇಕು ಅಂದಾಗ ಮಾತ್ರ ನಮ್ಮ ಜೀವನ ಪರಿಪೂರ್ಣ ಆಗುವುದರಲ್ಲಿ ಸಂಶಯವಿಲ್ಲ ಉಳಿಯುವುದು ಒಳ್ಳೆಯತನ ವನ್ನು ಜೀವನದಲ್ಲಿ ಅಳವಡಿಸಿಕೊಂಡು ಸಮಾಜಕ್ಕೆ ನೀಡಿ ಜೀವನ ಅಂತ್ಯ ಕಾಣಬೇಕು ನಮ್ಮ ಸಂಗಡ ಬರುವುದು ಸತ್ಯ ಮಾನವೀಯತೆ ಪ್ರೀತಿ ವಿಶ್ವಾಸ ಜೀವನದ ಮುನ್ನುಡಿ ಆಗಬೇಕು *

ಬಡತನದಲ್ಲಿ ಕನಸು ಕಂಡವರು ಗುರಿ ಮುಟ್ಟುವ ಛಲ ವ ಹೊಂದಿದವರು ಅಪ್ಪನ ಮಾತಿಗೆ ಸ್ಫೂರ್ತಿಯೇ ತುಂಬಿದವರು ನೆಚ್ಚಿನ ಹುದ್ದೆಯ ಪಡೆಯುವ ಮೂಲಕ ಜನಸೇವೆಗೆ ಇಳಿದವರು ಸಿಔ ಗಮ್

ನಾನು ಪೊಲೀಸ್ ಅಧಿಕಾರಿ ಕರ್ನಾಟಕ ಸಿಂಗಂ ನಾಡಿನ ಕೆಲವೇ ಕೆಲವು ಅಧಿಕಾರಿಗಳಲ್ಲಿ ಮಲ್ಲಿಕಾರ್ಜುನ ಬಂಡೆ ಅವರು ಒಬ್ಬರು ಬಡತನದಲ್ಲಿ ಆರ್ಥಿಕ ಸಮಸ್ಯೆ ದುಃಖ ನಿರಾಸೆ ತೊಂದರೆಗಳನ್ನು ಎದುರಿಸಿ ಸಾಧನೆಯ ಮಜಲು ಮೀರಿದ ಮೇಧಾವಿ ಬಂಡೆಯವರು ಸಮಾಜಕ್ಕೆ ನೀಡಿದ ಕೊಡುಗೆ ಮರೆಯುವಂತಿಲ್ಲ ಆದರೆ ಸಾವು ಹಂತಕರ ಕೈಯಲ್ಲಿ ಮರಣ ಹೊಂದಿರುವುದು ಸಾವು ನ್ಯಾಯವೇ ಎಂಬ ಪ್ರಶ್ನೆ ಸದಾ ಕಾಡುತ್ತಿದೆ ಅಪ್ಪನ ಆಸೆಯಂತೆ ಪೊಲೀಸ್ ಅಧಿಕಾರಿಯಾಗಿ ನಿಷ್ಠಾವಂತ ದೇಶಭಕ್ತನಾಗಿ ಅವರ ಸಾಧನೆ ಇನ್ನು ಕನ್ನಡಿಗರ ಹೃದಯದಲ್ಲಿ ಅಜರಾಮರರಾಗಿದ್ದಾರೆ ಮೈಸೂರು ಹುಲಿ ಟಿಪ್ಪು ಸುಲ್ತಾನ್ ಹೇಳುವಂತೆ ನೂರು ವರ್ಷ ಇಲಿಯಾಗಿ ಬಾಳುವುದಕ್ಕಿಂತ ಮೂರು ದಿನ ಹುಲಿಯಾಗಿ ಬಾಳುವುದೇ ಲೇಸು ಇದು ಬಂಡೆ ಅವರಿಗೆ ಸಲ್ಲುತ್ತದೆ ರಾಜಕಾರಣಿಗಳ ಮೋಸಕ್ಕೆ ಬಲಿಯಾದ ಕರ್ನಾಟಕದ ಮರೆಯಲಾಗದ ಮುತ್ತು ಸಾವಿರ ಹಳ್ಳಿಯ ಸರದಾರ ಬಂಡೆಯವರು ಅವರ ಹೋರಾಟ ಯುವಜನಾಂಗಕ್ಕೆ ಮಾದರಿಯಾಗಲಿ ಕವಿತ್ರಿ ಇವರ ಬಗ್ಗೆ

## ಬರೆದಿರುವುದು ಶ್ಲಾಘನೀಯ

**ಅಂಜಿದರೆ ಅಳುಕಿದರೆ ಬೆಲೆ ಇಲ್ಲ ಜಗದಲ್ಲಿ ಬಾಗಬೇಕು ನಮಿಸಬೇಕು ದೇವರಿಗೆ ಮಾತ್ರ ಅಲ್ಲಿ ಶತ್ರುಗಳು ಹಿತಶತ್ರುಗಳು ತುಂಬಿರುವ ಪ್ರಪಂಚ**

ಹಿಂದಿನ ದಿನಗಳಲ್ಲಿ ಗುರುಹಿರಿಯರಿಗೆ ಉನ್ನತ ಸ್ಥಾನಮಾನ ನೀಡಿದ ಶರಣರು ದಾಸರು ದಾರ್ಶನಿಕರು ಸೂಫಿಸಂತರು ನಡೆದಾಡುವ ಪುಣ್ಯಭೂಮಿಯಲ್ಲಿ ಮೋಸ ವಂಚನೆ ಆಸ್ತಿಗಾಗಿ ಕೊಲೆ ಹೀಗೆ ಹತ್ತಾರು ಕಾರಣ ನೀಡಬಹುದು ಅನಿಷ್ಟ ಪದ್ಧತಿಗಳು ಕಡಿಮೆಯಾಗಲಿಲ್ಲ ಮನೆ ಮನೆಯಲ್ಲಿ ಜಗಳ ಲಕ್ಷಾಂತರ ರೂಪಾಯಿ ಸಾಲ ಮಾಡಿ ನಂಬಿದವರನ್ನು ಬೀದಿಗೆ ನಿಲ್ಲಿಸುವುದು ಏನಾದರೂ ವಿಚಾರ ಮಾಡಿ ಹೊರಗಿನ ಜಗತ್ತು ನೋಡಿ ಯಾರು ಅನ್ಯಾಯದ ವಿರುದ್ಧ ಹೋರಾಟ ಮಾಡಬೇಕು ಹೊರಗಿನ ಶತ್ರು ಗಳ ಕ್ಕಿಂತ ಒಳಗಿನ ಶತ್ರುಗಳು ಅಪಾಯಕಾರಿ ಯಾವ ವೇಳೆಯಲ್ಲಿ ಯಾವಾಗ ಏನು ಮಾಡುತ್ತಾರೆ ಸಂಶಯವಿಲ್ಲ ದೆ? ಕೆಲಸ ಮಾಡುತ್ತಾರೆ ಇಂಥವರನ್ನು ನಂಬಿಕೆ ದ್ರೋಹಿಗಳು ಮಾನವೀಯತೆಯ ಕಟುಕರು ಇಂಥವರನ್ನು ದೇವರು ಸಹ ಕ್ಷಮಿಸಲಾರ ಶತ್ರುಗಳ ಮೇಲೆ ಎಚ್ಚರಿಕೆಯ ಕಣ್ಣು ಇರಬೇಕು ಆದರೆ ಎಲ್ಲರನ್ನೂ ಸಂಶಯ ಯಿಂದ ನೋಡಬಾರದು ಕೆಟ್ಟವರನ್ನು ಕಾಲಕೆಳಗೆ ಇಡಬೇಕು ಅಂದಾಗ ಮಾತ್ರ ಮೋಸ ವಂಚನೆ ಗಳಿಂದ ದೂರ ಇರಲು ಸಾಧ್ಯ*

ಸಹೋದರಿ ನೀಲಮ್ಮ ಅವರ ಸಾಹಿತ್ಯ ಸೇವೆ ನಿರಂತರವಾಗಿ ಸಾಗಲಿ ಹರಿಯುವ ನದಿಯಾಗಿ ಕೂಗುವ ಕೋಗಿಲೆಯಾಗಿ ಮಿನುಗುವ ತಾರೆಯಾಗಿ ಬೆಳಗಲಿ*

**–ದಯಾನಂದ ಪಾಟೀಲ ಅಧ್ಯಕ್ಷರು ಭಾರತೀಯ ಕನ್ನಡ ಸಾಹಿತ್ಯ ಬಳಗ ರಾಜ್ಯ ಘಟಕ ಮಹಾರಾಷ್ಟ್ರ**

ಕರುನಾಡ ಕಂದ
ಸಂಪುಟ–1 । ಸಂಚಿಕೆ–4
ದಿನಾಂಕ: 16–12–2021 । ಪುಟಗಳು: 16

# 8ನೆ ಪುಣ್ಯ ಸ್ಮರಣೆ:ನೇರ ನುಡಿ ವಿಠ್ಠಲ್ ಹೇರೂರ ಸಾಹೇಬ

"ಪುಟ್ಟ ವಯಸ್ಸಿನಲ್ಲೇ ಶೋಷಣೆ ದಬ್ಬಾಳಿಕೆ ಮೂಢನಂಬಿಕೆ ಕಂದಾಚಾರ ವಿರೋಧ ಮಾಡಿದ ವ್ಯಕ್ತಿ ,ದೊಡ್ಡ ದೊಡ್ಡ ಶಕ್ತಿ ಗಳ ವಿರೋದದ ಮಧ್ಯೆ ಸಮಾಜವನ್ನು ಕಟ್ಟಿದವರು".

ಇತಿಹಾಸದ ಪುಟಗಳಲ್ಲಿ ಮರೆಯಾಗಿದ್ದ ಅಂಬಿಗರ ಚೌಡಯ್ಯನವರ ನವರ ಪರಿಚಯ ಇಡೀ ನಾಡಿಗೆ

ಮಾಡಿರುವವರು ನಮ್ಮ ಸಾಹೇಬರು.

ಕೋಲಿ,ಕಬ್ಬಲಿಗ,ಬೆಸ್ತ,ತಳವಾರ,ವಾಲಿಕಾರ,ನಾಟಿಕಾರ,ಗಂಗಾಮತ ಇಂತಹ ಅನೇಕ ಹೆಸರುಗಳಿಂದ ಒಡೆದು ಹೋಗಿದ್ದ ಕೋಲಿ ಸಮಾಜವನ್ನು ಒಗ್ಗೂಡಿಸಲು ಸತತ ಪ್ರಯತ್ನ ತಮ್ಮ ಮರಣದವರೆಗೂ ಹೋರಾಡಿದರು.

ನಕಲೀ ಸ್ವಾಮಿಗಳ ಡಾಂಭಿಕ ರಾಜ–ಕಾರಣಿಗಳ ಪಾಲಿಗೆ ಸಿಂಹಸ್ವಾಪ್ನ ಆಗಿ ಕಾಡುತ್ತಿದ್ದರು, ನಿಜಶರಣ ಅಂಬಿಗರ ಚೌಡಯ್ಯನವರು ಹೇಗೆ ನೇರವಾಗಿ ವಚನಗಳು ಬರಿಯುತ್ತಿದ್ದರೊ ಅವರಂತೆ ವ್ಹಿ.ಟಿ.ಸಾಹೇಬರು ಡಾಂಭಿಕ ಸ್ವಾಮಿಗಳನ್ನು ನೇರವಾಗಿ ವಿರೋಧಿಸುತ್ತಿದ್ದರು.ಶೋಷಿತರು ಹಿಂದುಳಿದ ಸಮಾಜಗಳು ಮುಂದೆ ತರಲು ತಮ್ಮ ಸ್ವಂತ ಆಸ್ತಿ ಮಾರಾಟ ಮಾಡಿ ಸಮಾಜ ಕಟ್ಟಿ ಬೆಳೆಸಿದವರಲ್ಲಿ ಅಪರೂಪರಲ್ಲಿ ಇವರೊಬ್ಬರು.ಅಂಬಿಗರ ಚೌಡಯ್ಯ ಯಾರು ಅಂತ ನಮಗೆ ತಿಳಿದೆ ಇರಲಿಲ್ಲ ಅವರನ್ನು ಇಡೀ ಜಗತ್ತಿಗೆ ಪರಿಚಯಿಸಿ ಅವರ ಅಂಬಿಗರ ಚೌಡಯ್ಯನವರ ಜ್ಯೋತಿ ಯಾತ್ರೆ,

ಕಲಬುರ್ಗಿ ಮತ್ತು ಮಂಗಳೂರು ವಿಶ್ವವಿದ್ಯಾಲಯದಲ್ಲಿ ಅಂಬಿಗರ ಚೌಡಯ್ಯನವರ ಅಧ್ಯಯನ ಪೀಠ ಸ್ಥಾಪನೆ ಮಾಡಿದರು, ಅಂಬಿಗರ ಚೌಡಯ್ಯನವರ ಗುರುಪೀಠ ನನ್ನು ಹಾವೇರಿ ಜಿಲ್ಲೆಯ ಕಂಚಾರಗಟ್ಟಿ ಯಲ್ಲಿ ಸ್ಥಾಪನೆ ಮಾಡಿದರು ಮತ್ತು ಚೌಡಯ್ಯನವರ ಜಯಂತಿ ಸರ್ಕಾರ ಆಚರಣೆ ಮಾಡುವಂತೆ ಮಾಡಿದ ಏಕೈಕ ವ್ಯಕ್ತಿ ನಮ್ಮ ಸಾಹೇಬರು.

ಸಾಮಾಜಿಕ ಕ್ರಾಂತಿಯ ಜೊತೆಗೆ ವೈಚಾರಿಕ ಕ್ರಾಂತಿ, ರಾಜಕೀಯ ಮತ್ತು ಮಾನಸಿಕ ಗುಲಾಮಗಿ–ರಿಯಿಂದ ಜನರನ್ನು ಮುಕ್ತ ಗೊಳಿಸಲು ಸತತ ಪ್ರಯತ್ನ ಮಾಡಿದವರು.

*"ಬದಕುವ ನಾಯಿಗಳಾಗಬೇಡಿ ಬದಲಾಯಿಸುವ ಗಂಡಸರಾಗಿ ",* ಎಂಬ ವ್ಯಾಖ್ಯಾನವನ್ನು ಹೇಳುತ್ತಾ ಎಲ್ಲರ ಮನದಲ್ಲಿ ಬದಲಾವಣೆಯ ಕಿಚ್ಚನ್ನು ಹಚ್ಚಿಸುತ್ತಾ ಸಮಾಜವನ್ನು ಬದಲಾಯಿಸುವ ಸತತ ಪ್ರಯತ್ನ ಮಾಡಿದರು.

ರಾಜಕೀಯ ಶಕ್ತಿ ಗಳ ಜೊತೆ ಯಾವುದೇ ರಾಜೀ ಆಗದೆ ನನಗೆ ಸಮಾಜವೆ ಎಲ್ಲಾ ಎಂದು ಸಾರಿ ಹೇಳಿದರು.

ಮೂಢನಂಬಿಕೆ, ಗುಲಾಮಗಿರಿಯ, ದಿನ




ದಲಿತರ ಮೇಲಿನ ದೌರ್ಜನ್ಯಕ್ಕೆ, ಇಂತಹ ಅನೇಕ ತೊಂದರೆಗಳಿಗೆ ಶಿಕ್ಷಣ ಒಂದೇ ಮಾರ್ಗ ಅದಕ್ಕಾಗಿ ಎಲ್ಲರೂ ಅಕ್ಷರ ಜ್ಞಾನ ಪಡೆಯಿರಿ ಎಂಬ ಮಾತು ಎಲ್ಲಾ ಕಾರ್ಯಕ್ರಮಗಳಲ್ಲಿ ಸಾಮಾನ್ಯವಾಗಿ ಹೇಳುತ್ತಿದ್ದರು.

ಕೋಲಿ ಸಮಾಜವನ್ನು ಎಸ್ಟಿ ಪಟ್ಟಿಗೆ ಸೇರಿಸಿ ಎಂದು ವಿಧಾನಪರಿಷತ್ ನಲ್ಲಿ ಘರ್ಜನೆ ಮಾಡಿದ ಸಿಂಹ ಹೇರೂರ ಸಾಹೇಬರು.

ಆನಾರೊಗ್ಯದ ಮಧ್ಯೆ ಅಂಬುಲೆನ್ಸ್ ನಲ್ಲಿ ಬಂದು ಅಫಜಲಪೂರ ತಾಲೂಕಿನ ಬಿಲ್ವಾಡ ಗ್ರಾಮದಲ್ಲಿ ಅಂಬಿಗರ ಚೌಡಯ್ಯನವರ ಜಯಂತಿಯಲ್ಲಿ ಪಾಲ್ಗೊಂಡು ಜನರಿಗೆ ಅಚ್ಚರಿ ಮೂಡಿಸಿದ ವ್ಯಕ್ತಿ.

ಸಾವಿನ ಕೊನೆಕ್ಷಣದಲ್ಲು ನಮ್ಮ ಸಮಾಜವನ್ನು ಎಸ್.ಟಿ.ಪಟ್ಟಿಗೆ ಸೇರಿಸುವುದೇ ನನ್ನ ಗುರಿ ಎಂದು ಹೇಳುತ್ತಿದ್ದರು. ಸಮಾಜದ ಮೇಲೆ ಇಷ್ಟೊಂದು ಅಭಿಮಾನ ಹೊಂದಿರುವ ವ್ಯಕ್ತಿ ಮುಂದೆಂದು ಸಿಗುವುದಿಲ್ಲ.

ಒಂದು ವೇಳೆ ವಿಠ್ಠಲ ಹೇರೂರ ಅವರು ಜೀ ಇಂದು ಜೀವಂತ ಇದ್ದರೆ ಸಂಪೂರ್ಣ ಕೋಲಿ ಸಮಾಜ ಒಂದಾಗುತ್ತಿತ್ತು ಮತ್ತು ಇಷ್ಟೊತ್ತಿಗೆ ಎಸ್.ಟಿ ಪ್ರಮಾಣ ಪತ್ರವು ಸಿಗುತ್ತಿತ್ತು.

ವಿಠ್ಠಲ.ಹೇರೂರ ಇಲ್ಲದ ಕೋಲಿ ಸಮಾಜ ಇಂದು ಅನಾಥ ಮಕ್ಕಳಂತಾಗಿದೆ ಎಸ್.ಟಿ ಯು ಇಲ್ಲ ಇತ್ತ ಗೌರವಕೂಡ ಇಲ್ಲ.

# ಶ್ರೀ ಮಾನ್ಯ ಎಂ ವೈ ಪಾಟೀಲ್ ರವರು ಬಂಕಲಗಾ ಗ್ರಾಮಕ್ಕೆ ನೀಡಿ



ಅಫಜಲಪುರ ತಾಲ್ಲೂಕಿನ ಕಾಂಗ್ರೆಸ್ ಪಕ್ಷದ ಜನಪ್ರಿಯ ಶಾಸಕರಾದ ಶ್ರೀ ಮಾನ್ಯ ಎಂ ವೈ ಪಾಟೀಲ್ ರವರು ಕಲಬುರಗಿ ಜಿಲ್ಲೆಯ ವಿಧಾನ ಪರಿಷತ್ ಚುನಾವಣೆ ಹಿನ್ನಲೆಯಲ್ಲಿ ಇಂದು ಬಂಕಲಗಾ ಗ್ರಾಮಕ್ಕೆ ಭೇಟಿ ನೀಡಿ ಚುನಾವಣೆಗೆ ಸಂಬಂಧಿಸಿದಂತೆ ವಿವಿಧ ವಿಷಯಗಳ ಬಗ್ಗೆ ಚರ್ಚಿಸಿದರು. ಈ ಸಂದರ್ಭದಲ್ಲಿ ಬಂಕಲಗಾ ಗ್ರಾಮ ಪಂಚಾಯತಿಯ ಅಧ್ಯಕ್ಷರಾದ ಬಸವರಾಜ್ ಮೋಟೆ ಉಪಾಧ್ಯಕ್ಷರಾದ ಚಂದ್ರಕಾಂತ ದೊಡ್ಡಮನಿ ಸದಸ್ಯರಾದ ಮಹಾಂತಪ್ಪ ಕಾಂಬಳೆ ಮತ್ತು ಬಂಕಲಗಾ ಗ್ರಾಮ ಪಂಚಾಯತಿ ವ್ಯಾಪ್ತಿಗೆ ಒಳಪಡುವ ಬಂಕಲಗಾ,ಬೋಸಗಾ , ಹಟ್ಟಿ ಹಾಗೂ ಗೌರ್ (ಕೆ) ಗ್ರಾಮಗಳ ಸದಸ್ಯರುಗಳು ಹಾಗೂ ಮಾಜಿ ತಾಲೂಕು ಪಂಚಾಯತಿಯ ಸದಸ್ಯರಾದ ಶ್ರೀ ಕಲ್ಲಪ್ಪ ಶಿವಪ್ಪ ಪ್ಯಾಟಿ ಹಾಗೂ ವಿಠ್ಠಲ್ ಜಾಮಗೊಂಡ ಹಾಗೂ ಅಫಜಲಪುರ ತಾಲ್ಲೂಕಿನ ಸುತ್ತಮುತ್ತಲಿನ ಗ್ರಾಮ ಪಂಚಾಯತಿಯ ಅಧ್ಯಕ್ಷರುಗಳು ಮತ್ತು ಉಪಾಧ್ಯಕ್ಷರು ಹಾಗೂ ಸದಸ್ಯರುಗಳು ಈ ಸಂದರ್ಭದಲ್ಲಿ ಭಾಗಿಯಾಗಿದ್ದರು

# ಬಯಲೇ ಗ್ರಂಥಾಲಯ

ರಾಯಚೂರು ಜಿಲ್ಲೆಯ ಲಿಂಗಸೂಗೂರು ತಾಲೂಕಿನ ಹಟ್ಟಿ ಚಿನ್ನದ ಗಣಿ ರೋಡಲಬಂಡ ಗ್ರಂಥಾಲಯ ಕಟ್ಟಡ ಬಿರುಕು ಬಿಟ್ಟು ಗೋಡೆಯು ಕುಸಿದಿದೆ

ಕಟ್ಟಡ ಶಿಥಲಗೊಂಡಿದ್ದು ದುರಸ್ಥಿಗೆ ಕ್ರಮ ಕೈಗೊಳ್ಳಬೇಕೆಂದು ಸಾರ್ವಜನಿಕರು ಆಗ್ರಹಿಸಿದ್ದಾರೆ

ಇಲ್ಲಿನ ವಿಧ್ಯಾರ್ಥಿಗಳು ಹಾಗೂ ಸಾರ್ವಜನಿಕರಿಗೆ ಓದಲು ಅನೂಕುಲವಾಲೆಂದು ಹಳೆ ಪಂಚಾಯತಿ ಕಟ್ಟಡವನ್ನು ಗ್ರಂಥಾಲಯವಾಗಿ ಮಾಡಲಾಗಿದೆ .

ಸುಮಾರು ವರ್ಷಗಳಿಂದ ನಿರ್ವಹಣೆ ಇಲ್ಲದೆ ಗೋಡೆಗಳು ಬಿರುಕು ಬಿಟ್ಟು ಕುಸಿಯುತ್ತಿವೆ ಮೇಲ್ಚಾವಣಿ ಸಿಮೆಂಟ್ ಪ್ಲಾಸ್ಟರ್ ಕಿತ್ತು ಬಿದ್ದು ,ಕಬ್ಬಿಣದ ಸರಳು ಕಾಣುತ್ತಿವೆ. ಹೀಗಾಗಿ ಓದುಗರು ಗ್ರಂಥಾಲಯದಲ್ಲಿ ಕೂಡದೆ ಮುಂದೆ ಇರುವ ಮರದ ನೆರಳಿನಲ್ಲಿ ಕುಳಿತು ಓದುತ್ತಿದ್ದಾರೆ. ಗ್ರಂಥ–ಾಲಯ ದುರಸ್ತಿಗೆ ಕ್ರಮ ಕೈಗೊಳ್ಳವಂತೆ ಹಲವಾರು ಬಾರಿ ಗ್ರಾಮ ಪಂಚಾಯಿತಿಗೆ ಮನವಿ ಸಲ್ಲಿಸಿದರು ಪ್ರಯೋಜನವಾಗಿಲ್ಲ.ಕೂಡಲೇ ಗ್ರಂಥಾಲಯ ದುರಸ್ತಿಗೆ



ಮುಂದಾಗದಿದ್ದರೆ ಮುಂಬರುವ ದಿನಗಳಲ್ಲಿ ಉಗ್ರವಾದ ಹೋರಾಟ ಮಾಡಬೇಕಾಗುತ್ತದೆ ಸ್ಥಳೀಯರು ಎಚ್ಚ–ರಿಸಿದ್ದಾರೆ.

# ಕಳಪೆ ಹತ್ತಿ ಬೀಜದಿಂದ ಕಂಗಾಲಾದ ರೈತರು.....



ಯಡ್ರಾಮಿ ತಾಲೂಕಿನ ಬಿಳವಾರ ಗ್ರಾಮದಲ್ಲಿ ನಕಲಿ ಹತ್ತಿ ಬೀಜಗಳಿಂದ ರೈತರು ಕಂಗಾಲಾಗಿದ್ದಾರೆ ಒಳ್ಳೆಯ ಬೆಳೆ ಬಾರದೆ ಮೋಸ ಹೋಗಿರುವ ರೈತರು ತಲೆ ಮೇಲೆ ಕೈಹೊತ್ತು ಕುಳಿತಿದ್ದಾರೆ ಹಾಗೂ ಮನಿಯಾರ ಆಗ್ರೋ ಏಜೆನ್ಸಿ ಮಾಲಿಕರಾದ ಮೈಹಿಬೂಬ ಮನಿಯಾರವರ ಮೇಲೆ ಹಿಡಿಶಾಪ ಹಾಕುತ್ತಿದ್ದಾರೆ ಇದರಿಂದ ಮೋಸ ಹೋಗಿರುವ ರೈತರಿಗೆ ನಷ್ಟ ತುಂಬಿ ಕೊಡುವರು ಯಾರು ಎಂದು ಗ್ರಾಮದ ರೈತರ ಯಕ್ಷ ಪ್ರಶ್ನೆಯಾಗಿದೆ ಇದಕ್ಕೆ ಸಂಬಂಧಪಟ್ಟ ತಾಲೂಕ ಕೃಷಿ ಇಲಾಖೆಯ ಅಧಿಕಾರಿಗಳು ನಿರ್ಲಕ್ಷವೆ ಕಾರಣ.ವರ್ಷದ ಬೆಳೆಯನ್ನು ನಂಬಿರುವ ರೈತರ ಹೊಲ ಸ.ನಂ 153/4 ಬೀಳವಾರ ಈ ಹೊಲವನ್ನು ಪರಿಶೀಲನೆ ಮಾಡಿ ಸದರಿ ಏಜೆನ್ಸಿ ಪರವಾನಿಗೆಯನ್ನು ರದ್ದು ಮಾಡಬೇಕು ಅಲ್ಲದೆ ರೈತರಿಗೆ ಆದ ನಷ್ಟವನ್ನು ಪರಿಶೀಲನೆ ಮಾಡಿ ತುಂಬಿ ಕೊಡಬೇಕು ಹಾಗೂ ನಕಲಿ ಬೀಜಗಳನ್ನು ಮತ್ತು ನಕಲಿ ಏಜೆನ್ಸಿಗಳನ್ನು ಮಟ್ಟ ಹಾಕುವ ಕೆಲಸ ಅಧಿಕಾರಿಗಳು ತುರ್ತಾಗಿ ಮಾಡಬೇಕಾಗಿದೆ ಅತಿವೃಷ್ಟಿಯ ಮಳೆಯಿಂದ ಕಂಗಾಲಾದ ರೈತರು ನಷ್ಟ ಅನುಭವಿಸಿದ್ದು ಅಲ್ಲದೆ ಕಳಪೆ ಹತ್ತಿ ಬೀಜದಿಂದ ಮೋಸ ಹೋಗಿದ್ದಾರೆ ಇನ್ನಾದರೂ ಸಂಬಂದ ಪಟ್ಟ ಕೃಷಿ ಇಲಾಖೆಯ ಅಧಿಕಾರಿಗಳು ಸೂಕ್ತ ಕ್ರಮ ಕೈಗೊಳ್ಳುತ್ತಾರಾ ಕಾದು ನೋಡಬೇಕಾಗಿದೆ...

# ಆಮೆ ಗತಿಯ ಕೊಳಗೇರಿ ಅಭಿವೃದ್ಧಿ ಮಂಡಳಿ





ಹಾಸನ ಜಿಲ್ಲೆಯ ಅರಕಲಗೂಡು ಪಟ್ಟಣ ಪಂಚಾಯಿತಿ ವಾರ್ಡ್ ನಂಬರ್ 13 ಕೆಲ್ಲೂರು ಗ್ರಾಮದ ಕೊಳಗೇರಿ ಅಭಿವೃದ್ಧಿ ಮಂಡಳಿಯ ಅಧಿಕಾರಿಗಳು 3 ಬಾರಿ ಭೇಟಿ ಮಾಡಿದರೂ ಪೂರ್ಣಗೊಳ್ಳದ ನೆನೆಗುದಿಗೆ ಬಿದ್ದಿದೆ . 3 ವರ್ಷ ಆದರೂ ಗುಡಿಸಲು ಕಟ್ಟಿಕೊಂಡು ವಾಸಿಸುತ್ತಿರುವ ಫಲಾನುಭವಿಗಳು ಅನುಭವಿಸುವ ಕಷ್ಟ ಮಾತ್ರ ಹವಾನಿಯಂತ್ರಿತ ಕೋಣೆಯಲ್ಲಿರುವ ಅಧಿಕಾರಿಗಳಿಗೆ ತಿಳಿಯುತ್ತಿಲ್ಲ ಬೇಗ ಪೂರ್ಣಗೊಳಿಸದಿದ್ದರೆ ಹಾಸನ ಕೊಳಗೇರಿ ಅಭಿವೃದ್ಧಿ ಮಂಡಳಿ ಮುಂದೆ ಧರಣಿ ನಡೆಸಲಾಗುತ್ತದೆ ಎಂದು ಕೆಲ್ಲೂರು ಗ್ರಾಮಸ್ಥರ ಆಗ್ರಹ.

ಕರುನಾಡ ಕಂದ
ಸಂಪುಟ–1 । ಸಂಚಿಕೆ–4
ದಿನಾಂಕ: 16–12–2021 । ಪುಟಗಳು: 16

# ಹಿಂದುಳಿದ ವರ್ಗಗಳ ಆಯೋಗ ಯಾವಾಗ ಅಸ್ತಿತ್ವಕ್ಕೆ ಬಂತು ಗೊತ್ತೇ ?.

ಸ್ವಾತಂತ್ರ ಪೂರ್ವ ಕಾಲದಿಂದಲೂ ಸಾಮಾಜಿಕ ಮತ್ತು ಆರ್ಥಿಕವಾಗಿ ಬಲಾಢ್ಯರಾಗಿದ್ದ ಬ್ರಾಹ್ಮಣರ ಶ್ರೇಣಿಕೃತ ಮತ್ತು ಸಾಂಸ್ಥಿಕ ಹಿಡಿತವನ್ನು ತಪ್ಪಿಸುವ ಸಲುವಾಗಿ ರೂಪುಗೊಂಡ ಸಂಘಟನೆ ಹಿಂದುಳಿದ ವರ್ಗಗಳ ಸಂಘಟನೆ. ಕಾಲಕಾಲಕ್ಕೆ ತಕ್ಕಂತೆ ಆದ ಬದಲಾವಣೆ ಸಂಘಟನೆ ರೂಪದ ಶಕ್ತಿಯನ್ನು ಸರ್ಕಾರದ ಆಡಳಿತ ಶಕ್ತಿಯಾಗಿ ಬದಲಾಯಿಸಿಕೊಂಡು ಆಯೋಗವೆಂಬ ಹೆಸರು ಪಡೆದುಕೊಂಡಿತು. ದೇಶವ್ಯಾಪಿ ರೂಪುಗೊಂಡ ಈ ಆಯೋಗದ ಸಾಲಿನಲ್ಲಿ ಕರ್ನಾಟಕದಲ್ಲಿನ ಹಿಂದುಳಿದ ಆಯೋಗವೂ ಒಂದು. ಜ್ಯೋತಿಬಾಪುಲೆಯವರ ನೇತೃತ್ವದಲ್ಲಿ ಆರಂಭಗೊಂಡ ಚಳುವಳಿಗೆ ಪೆರಿಯಾರ್ ರೂಪಕೊಟ್ಟು ಅದನ್ನು ಸಾಮಾಜಿಕ ಮನ್ನಣೆ ದೊರಕಿಸಲು ಜಸ್ಟೀಸ್ ಪಾರ್ಟಿಯನ್ನಾಗಿ ಮಾಡಿದರು. ಮುಂದಿನ ದಿನಗಳಲ್ಲಿ ಅದು ಹಿಂದುಳಿತ ವರ್ಗಗಳ ಆಯೋಗವಾಗಿ ಬದಲಾಯಿತು.

ಹಿಂದುಳಿದ ವರ್ಗದ ಆಯೋಗದ ಇತಿಹಾಸ :

ಹಿಂದುಳಿದ ವರ್ಗಗಳೆಂದು ಪರಿಗಣಿತವಾಗಿರುವ ಜಾತಿಗಳ ಮತ್ತು ಸಮುದಾಯಗಳ ಉನ್ನತಿಗಾಗಿ ರೂಪುಗೊಂಡ ಸರ್ಕಾರಿ ಮಾನ್ಯತೆಯ ಆಯೋಗ ಹಿಂದುಳಿದ ವರ್ಗಗಳ ಆಯೋಗ. ಹತ್ತೊಂಭತ್ತನೇ ಶತಮಾನದಲ್ಲೇ ತಮಗೊಂದು ಪ್ರಾತಿನಿಧ್ಯ ಕಲ್ಪಿಸಿಕೊಳ್ಳುವುದರ ಬಗ್ಗೆ ಬ್ರಾಹ್ಮಣೇತರ ವರ್ಗ ಚಿಂತಿಸತೊಡಗಿತ್ತು. ಇದನ್ನು ಅಂದಿನ ಸಾರ್ವಜನಿಕ ಸಭೆ ಸಮಾರಂಭಗಳಲ್ಲಿ ಚರ್ಚಾ ವಿಚಾರವಾಗಿಯೂ ಮಾಡಿಕೊಂಡಿತ್ತು. ಹೀಗೆ ಅಂದು ಕುಡಿಯೊಡೆದ ಆಯೋಗ ರಚನೆಯ ಬೀಜ ಆ ಬಳಿಕ ನಿಧಾನವಾಗಿ ಗಿಡವಾಗಿ ಚಿಗುರಲಾರಂಭಿಸಿತು. ಸ್ವಾತಂತ್ರ ಸಂಗ್ರಾಮದ ಕಾಲದಲ್ಲಿ ಜ್ಯೋತಿಭಾಪುಲೆ ಅಸಮಾಧಾನದ ಕೂಗಿಗೆ ಚಳುವಳಿಯ ರೂಪ ನೀಡಿದರು. ಬಳಿಕ ಮದ್ರಾಸ್ ನ ಪೆರಿಯಾರ್ ಅದನ್ನ ಸ್ವಾಯತ್ತ ಸಂಘಟನೆಯನ್ನಾಗಿಸುವುದರ ಜೊತೆಗೆ ರಾಜಕೀಯ ಮನ್ನಣೆ ದೊರಕಿಸಿಕೊಡಲು ಜಸ್ಟೀಸ್ ಪಾರ್ಟಿ ಎಂಬ ರಾಜಕೀಯ ಸಂಘಟನೆಯನ್ನು ರಚಿಸಿದರು. ಈ ಸಂಘಟನೆ ಮುಂದಿನ ದಿನಗಳಲ್ಲಿ ಬ್ರಾಹ್ಮಣೇತರ ಹಿಂದುಳಿದ ವರ್ಗದವರಿಗೆ ರಾಜಕೀಯ, ಶೈಕ್ಷಣಿಕ ಹಾಗೂ ವಿಧ್ಯಾಭ್ಯಾಸದಲ್ಲಿ ಮೀಸಲಾತಿ ನೀಡಲು ಆಡಳಿತದಲ್ಲಿದ್ದವರನ್ನು ಒತ್ತಾಯಿಸಲಾರಂಭಿಸಿತು. ಹೀಗೆ ರೂಪುಗೊಂಡ ರಾಜಕೀಯ ಚಳುವಳಿಗೆ ಸಾಂಸ್ಥಿಕ ರೂಪವನ್ನು ದೊರಕಿಸಿಕೊಡಲು ಮೈಸೂರು ಸಂಸ್ಥಾನದ ಕೆಲ ಪ್ರಮುಖರು ಶ್ರಮಿಸಿದರು. ಇದರಲ್ಲಿ ಸಿ.ಆರ್.ರೆಡ್ಡಿ, ಎಂ.ಬಸವಯ್ಯ, ಕೆ.ಎಚ್. ರಾಮಯ್ಯ, ಗುಲಾಮ್ ಅಹ್ಮದ್ ಮೊದಲಾದವರು ಪ್ರಮುಖರು. ಇವರೆಲ್ಲಾ ಮೈಸೂರು ಸಂಸ್ಥಾನದ ದೊರೆಗಳನ್ನು ಭೇಟಿ ಮಾಡುವ ಮೊದಲು ಪ್ರಜಾಮಿತ್ರ ಮಂಡಳಿ ಎಂಬ ಸಂಘಟನೆಯನ್ನು ರೂಪಿಸಿ 1918ರಲ್ಲಿ ಮಹಾರಾಜರನ್ನು ಭೇಟಿ ಮಾಡಿ ಉದ್ದೇಶಿತ ಆಯೋಗ ರಚನೆಯ ಅಹವಾಲನ್ನು ಸಲ್ಲಿಸಿತು. ಈ ಬೇಡಿಕೆಯನ್ನು ಪರಿಗಣಿಸಿದ ಅಂದಿನ ಒಡೆಯರು ಮೊದಲ ಹಿಂದುಳಿದ ಆಯೋಗ ರಚನೆ ಸಮಿತಿಯೊಂದನ್ನು ರೂಪಿಸಿದರು. ಅದಕ್ಕೆ ಲೆಸ್ಲಿ ಮಿಲ್ಲರ್ ಅವರಿಂದ ವರದಿಯನ್ನು ಬಯಸಿದರು.

ಲೆಸ್ಲಿ ಮಿಲ್ಲರ್ ಸಮಿತಿ : ಹಿಂದುಳಿದ ಸಮುದಾಯದವರಿಗೆ ತಕ್ಕ ಸಾಮಾಜಿಕ ನ್ಯಾಯ ಕಲ್ಪಿಸುವ ನಿಟ್ಟಿನಲ್ಲಿ ಮೈಸೂರು ಸಂಸ್ಥಾನದ ಯುವರಾಜರಾಗಿದ್ದ ನರಸಿಂಹರಾಜ್ ಒಡೆಯರ್ ತಮ್ಮ ಸಂಸ್ಥಾನದಲ್ಲಿ ನ್ಯಾಯಾಧೀಶರಾಗಿದ್ದ ಲೆಸ್ಲಿ ಮಿಲ್ಲರ್ ನೇತೃತ್ವದಲ್ಲಿ ಸಮಿತಿಯೊಂದನ್ನು ರಚನೆ ಮಾಡಿ ಬ್ರಾಹ್ಮಣೇತರ ವರ್ಗದವರ ಏಳಿಗೆಗೆ ಅಗತ್ಯ ಕ್ರಮಗಳನ್ನು ರೂಪಿಸಲು ವರದಿ ರೂಪಿಸಿ ಕೊಡುವಂತೆ ಸೂಚಿಸಿದರು. 1918ರಲ್ಲಿ ಈ ಸಮಿತಿ 1919ರ ವೇಳೆಗೆ ಈ ವಿಚಾರದಲ್ಲಿ ತಾನು ಸಂಗ್ರಹಿಸಿದ್ದ ಸಾರ್ವಜನಿಕ ಅಭಿಪ್ರಾಯ ಮತ್ತು ಅದರ ಅನುಷ್ಠಾನದ ಬಗೆಗಿನ ಸಲಹೆ ಸೂಚನೆಯುಕ್ತ ಮಾಹಿತಿಯನ್ನು ಮಹಾರಾಜರಿಗೆ ಸಲ್ಲಿಸಿತು. ಮಿಲ್ಲರ್ ವರದಿಯ ಪ್ರಕಾರ ಮುಂದಿನ ಏಳು ವರ್ಷದ ಕಾಲಾವಧಿಯಲ್ಲಿ ಸರ್ಕಾರದ ಶೇಕಡಾ 50%ರ ಉನ್ನತ ಹುದ್ದೆಗಳು ಹಾಗೂ ಮೂರನೇ ಎರಡು ಭಾಗ ಕೆಳದರ್ಜೆಯ ಹುದ್ದೆಗಳು ಹಿಂದುಳಿದ ವರ್ಗಗಳಿಗೆ ಪ್ರಾಪ್ತವಾಗಬೇಕು, ಶಿಕ್ಷಣದಲ್ಲಿ ಈ ವರ್ಗಕ್ಕೆ ವಿದ್ಯಾರ್ಥಿ ವೇತನ ನೀಡಬೇಕು ಎಂಬ ಅಂಶಗಳನ್ನು ಸಮಿತಿ ಉಲ್ಲೇಖಿಸಿತ್ತು. ಹೀಗೆ ಸರ್ಕಾರದ ಕೈ ಸೇರಿದ ಶಿಫಾರಸ್ಸುಗಳು 1921ರಲ್ಲಿ ಸರ್ಕಾರಿ ಆದೇಶಗಳಾಗಿ ಅನುಷ್ಠಾನಕ್ಕೆ ಬಂದವು. ಆದರೆ ಈ ಸಮಿತಿಯ ವರದಿ ಮತ್ತು ಶಿಫಾರಸ್ಸಿನ ಮೇಲೆ 1922ರಲ್ಲಿ ಅಸಮಾಧಾನ ಮೂಡಿತು. ಜೈನ, ಮುಸಲ್ಮಾನ ಹಾಗೂ ವೀರಶೈವ ಜಾತಿಗಳಿಗೆ ಇದರ ಲಾಭ ಹೆಚ್ಚಾಗಿ ದೊರಕಿತೆಂಬ ಆರೋಪ ವ್ಯಕ್ತವಾಯಿತು.

ನಾಗನಗೌಡ ಸಮಿತಿ : ರಾಜಾಳ್ವಿಕೆ ಕಾಲದಲ್ಲಿ ಭುಗಿಲೆದ್ದ ಮೀಸಲಾತಿ ವಿಚಾರದ ಹೊಗೆ ಮತ್ತೊಮ್ಮೆ ಬುಸುಗುಟ್ಟಿದ್ದು ಸ್ವಾತಂತ್ರ್ಯೋತ್ತರದ ನಂತರದಲ್ಲಿ. ರಾಜ್ಯ ಪುನರ್ವಿಂಗಡನೆ ಬಳಿಕ ಮತ್ತೆ ಹಿಂದುಳಿದ ವರ್ಗಗಳ ಮೀಸಲಾತಿ ವಿಚಾರದಲ್ಲಿ ಮತ್ತೆ ಸಂಘಟನೆಗಳು ಸೊಲ್ಲೆತ್ತಲಾರಂಭಿಸಿದ ನಂತರ ಆಡಳಿತಾರೂಢ ಸರ್ಕಾರ ಈ ಬಗ್ಗೆ ಮರಳಿ ಗಮನ ಹರಿಸಲಾರಂಭಿಸಿತು. ಇದರ ಫಲವಾಗಿ ಡಾ.ನಾಗನಗೌಡ ನೇತೃತ್ವದಲ್ಲಿ 1960ರಲ್ಲಿ ಹೊಸ ಸಮಿತಿ ರಚನೆ ಮಾಡಿ ಸಾಮಾಜಿಕ ಶ್ರೇಣಿ ವ್ಯವಸ್ಥೆಯಲ್ಲಿ ತುಳಿತಕ್ಕೊಳಗಾದ ಹಾಗೂ ಉಪಕುಸುಬಗಳನ್ನೇ ಜಾತಿಗಳನ್ನಾಗಿಸಿಕೊಂಡ ಸಮುದಾಯಗಳಿಗೆ ಮನ್ನಣೆ ಕೊಡಲು ಸರಕಾರ ತೀರ್ಮಾನಿಸಿತು.

ಈ ಸಮಿತಿ ತನ್ನ ಕಾರ್ಯಾರಂಭ ಮಾಡಿ ಹಿಂದುಳಿದ ವರ್ಗಗಳ ಮೀಸಲು ಸೌಲಭ್ಯ ಪಡೆಯಲು 399 ಜಾತಿಗಳು ಅರ್ಹವೆಂದು ಸೂಚಿಸಿತು. ಈ ಜಾತಿಗಳಿಗೆ ಸರ್ಕಾರಿ ಉದ್ಯೋಗದಲ್ಲಿ ಶೇಕಡಾ 45% ಶಿಕ್ಷಣ ಮತ್ತು ಪ್ರವೇಶದಲ್ಲಿ ಶೇಕಡಾ 50% ಮೀಸಲಾತಿ ಇರಬೇಕೆಂದು ಶಿಫಾರಸ್ಸು ಮಾಡಿತು. ಹಾಗೇ ಆ ಕಾಲಕ್ಕೆ ಮುಂದುವರೆದ ವರ್ಗವೆಂದು ಪರಿಗಣಿತವಾಗಿದ್ದ ಲಿಂಗಾಯತ ವರ್ಗವನ್ನು ಈ ಮೀಸಲಾತಿ ಸಾಲಿನಿಂದ ಸಮಿತಿ ಕೈ ಬಿಟ್ಟಿತು. ವ್ಯವಸಾಯ ಸಹಕಾರ ಮತ್ತು ಗೃಹ ಕೈಗಾರಿಕಾ ವಲಯಗಳಿಗೆ ಸರ್ಕಾರ ವಿಶೇಷ ಹಣಕಾಸು ವ್ಯವಸ್ಥೆಯನ್ನು ಸರ್ಕಾರ ಮಾಡಿಕೊಡುವಂತೆಯೂ ಈ ಸಮಿತಿ ಶಿಫಾರಸ್ಸು ಮಾಡಿತ್ತು.

ಹೀಗೆ ಗಮನಾರ್ಹ ಬದಲಾವಣೆಗಳೊಂದಿಗೆ ಸಿದ್ದವಾದ ಸಮಿತಿಗೆ ಸರ್ಕಾರ 1962ರಲ್ಲಿ ಸಣ್ಣ ತಿದ್ದುಪಡಿ ಆದೇಶವೊಂದನ್ನು ಮಾಡಿ ಹಿಂದುಳಿದ ವರ್ಗಗಳ ಆಯೋಗವನ್ನು ಎರಡು ಭಾಗಗಳಾಗಿ ವಿಭಾಗಿಸಿ ಹಿಂದುಳಿದ ಮತ್ತು ಅತಿ ಹಿಂದುಳಿದ ವರ್ಗಗಳೆಂಬ ಎರಡು ವರ್ಗಗಳನ್ನಾಗಿ ಮಾಡಿ ಅವಕ್ಕೆ ಅನುಕ್ರಮವಾಗಿ ಶೇಕಡಾ 28% ಮತ್ತು ಶೇಕಡಾ 22%ರ ಮೀಸಲಾತಿಯನ್ನು ದೊರಕಿಸಿಕೊಡುವುದಾಗಿ ತಿಳಿಸಿತು. ಆದರೆ ಇದರ ವಿರುದ್ಧ ಪ್ರಜ್ಞಾವಂತರು ಕೋರ್ಟ್ ಮೆಟ್ಟಿಲೇರಿದ ಕಾರಣ ಈ ಅರ್ಜಿ ಅಲ್ಲಿ ಅನೂರ್ಜಿತಗೊಂಡಿತು. ಹೀಗಾಗಿ 1962 ಮತ್ತು 1968ರಲ್ಲಿ ಈ ಗೊಂದಲ ಪರಿಹರಿಸುವ ನಿಟ್ಟಿನಲ್ಲಿ ಮತ್ತೆ ಮಾರ್ಪಾಡಾದ ಸರ್ಕಾರ ಆದೇಶ ಹೊರಟು ಎಲ್ಲ ಹಿಂದುಳಿದ ವರ್ಗಗಳಿಗೆ ಒಟ್ಟಾರೆ ಶೇಕಡಾ 30 ಮೀಸಲಾತಿ ನೀಡಲಾಯಿತು.

ಹಾವನೂರು ಆಯೋಗ : ದೇವರಾಜು ಅರಸುರವರ ಅಧಿಕಾರಾವಧಿಯಲ್ಲಿ ಅಸ್ತಿತ್ವಕ್ಕೆ ಬಂದಿದ್ದೇ ಹಾವನೂರು ಆಯೋಗ.ಹಿಂದುಳಿದ ವರ್ಗಗಳ ಅಭಿವೃದ್ಧಿ ಹರಿಕಾರರೆಂದೇ ಗುರುತಿಸಿಕೊಂಡಿದ್ದ ದೇವರಾಜ ಅರಸುರವರು ತಮ್ಮ ಮುಂದೆ ಬಂದ ಹಿಂದುಳಿದ ಆಯೋಗದ ಸುಧಾರಣಾ ವಿಚಾರದ ಬಗ್ಗೆ ಸಕಾರಾತ್ಮಕ ನಿಲುವು ಪ್ರದರ್ಶಿಸಿದರು. ಅವರ ಇಚ್ಛೆಯನುಸಾರ 1972ರಲ್ಲಿ ಎಲ್ .ಜಿ ಹಾವನೂರು ಅವರ ನೇತೃತ್ವದಲ್ಲಿ ಸಮಿತಿಯೊಂದನ್ನು ರಚಿಸಿದರು. ಈ ಸಮಿತಿ ತನ್ನದೇ ಆದ ಹೊಸ ಶಿಫಾರಸ್ಸುಗಳನ್ನು ಸರ್ಕಾರಕ್ಕೆ ಸಲ್ಲಿಸಿತು. ಸಮಿತಿ ಹೊಸ ಶಿಫಾರಸ್ಸಿನಲ್ಲಿ ಲಿಂಗಾಯತ,ಜೈನ, ಬಂಟ, ಅರಸು , ಕ್ರೈಸ್ತ ಸಮುದಾಯವನ್ನು ಹಿಂದುಳಿದ ವರ್ಗದ ವ್ಯಾಪ್ತಿಯಿಂದ ಹೊರಗಿಡಲು ಸೂಚಿಸಿತು. ಈ ಆದೇಶವನ್ನು ಆರಂಭದಲ್ಲಿ ಪ್ರಕಟಿಸಲು ಹಿಂದೇಟು ಹಾಕಿದ ಸರ್ಕಾರ 1977ರ ಫೆಬ್ರವರಿ 22ರಂದು ಹೊರಡಿಸಿತು.ಈ ನಡುವೆ ಸಾಮಾಜಿಕ ಪ್ರತಿರೋಧ ಎದುರಾಗಬಹುದೆಂಬ ಆತಂಕದ ಕಾರಣದಿಂದ ಅದರ ಪರಿಹಾರಕ್ಕೆ ಉಪಾಯದ ಮಾರ್ಗ ಹುಡುಕಿಕೊಂಡಿದ್ದ ಸರ್ಕಾರ ಹಿಂದುಳಿದ ವರ್ಗಗಳನ್ನು ಮೂರು ವಿಭಾಗಗಳಾಗಿ ವಿಂಗಡಿಸಿ ಸಾಮಾಜಿಕ ನ್ಯಾಯ ಕಲ್ಪಿಸಿರುವುದಾಗಿ ಹೇಳಿತ್ತು. ಅದರ ಪ್ರಕಾರ ಹಿಂದುಳಿದ ಪಂಗಡಗಳು, ಹಿಂದುಳಿದ ಸಮುದಾಯ, ಹಿಂದುಳಿತ ಜಾತಿಗಳೆಂದು ವರ್ಗೀಕರಿಸಿತ್ತು. ಇವುಗಳ ಜೊತೆಗೆ ಮುಂದುವರೆದ ಜಾತಿಗಳ ಬಡವರ್ಗವನ್ನು ಹಿಂದುಳಿದ ವರ್ಗಗಳ ಸಾಲಿಗೆ ಸೇರಿಸುವ ಮೂಲಕ ಅಲ್ಲೂ ತಾರತಮ್ಯ ತಡೆಯಲುವ ಪ್ರಯತ್ನ ಮಾಡಿತ್ತು ಹೀಗೆ ರೂಪಿಸಿದ ಹೊಸ ವರ್ಗ ವ್ಯವಸ್ಥೆಗೆ ಹಿಂದುಳಿದ ವರ್ಗಗಳ ಮಾನ್ಯತೆ ಪಡೆಯಲು ವಾರ್ಷಿಕ ಹತ್ತು ಸಾವಿರ ರೂಪಾಯಿಗಳ ಆದಾಯ ನಿಗದಿ ಮಾಡಿತ್ತು. ಆದರೆ ಖುದ್ದು ಮುಖ್ಯಮಂತ್ರಿಗಳೇ ತಮ್ಮ ಸಮುದಾಯವನ್ನೂ ಒಳಗೊಂಡಂತೆ ಕೆಲ ಸಮುದಾಯಗಳನ್ನು ಮೀಸಲಿನಿಂದ ಹೊರಗಿಟ್ಟಿರುವುದರ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿ , ಪರಿಷ್ಕೃತ ಪಟ್ಟಿಯನ್ನು ಪ್ರಕಟ ಮಾಡಲು ಸೂಚಿಸಿದರು. ಅದರಲ್ಲಿ ತಮ್ಮ ಸಮುದಾಯವನ್ನು ವ್ಯಾಪ್ತಿಗೆ ಸೇರಿಸಿ ಹೊಸ ಆದೇಶ ಜಾರಿ ಮಾಡಿದರು.

ಆದರೆ ಹಾವನೂರು ಅವರ ಸಮಿತಿ ಶಿಫಾರಸ್ಸಿನ ಬಗ್ಗೆ ಎಲ್ಲೆಯಿಂದ ವಿರೋಧ ವ್ಯಕ್ತವಾಗುವುದರ ಜೊತೆ ನ್ಯಾಯಾಲಯವೂ ಅದರ ಬಗ್ಗೆ ಪ್ರಶ್ನೆ ಮಾಡಿ ಸರ್ಕಾರದ ಹೊಸದಾಗಿ ಸೇರಿಸಿದ್ದ ಸಮುದಾಯಗಳನ್ನು ಅನೂರ್ಜಿತ ಗೊಳಿಸಿತು. ಮತ್ತೆ1979ರಲ್ಲಿ ಈ ಬಗ್ಗೆ ಪರಿಷ್ಕೃತ ಆದೇಶವನ್ನು ಸರ್ಕಾರ ಹೊರಡಿಸಿತು. ಇದರಲ್ಲಿ ವಿಶೇಷ ಪಂಗಡವೆಂದು ಗುರುತಿಸಿಕೊಂಡಿದ್ದ ವರ್ಗಕ್ಕೆ ಶೇಕಡಾ 15% ಮೀಸಲಾತಿ ಕೊಡಲು ಸೂಚಿಸಿದ ಸರ್ಕಾರ ಹಿಂದುಳಿದ ವರ್ಗಗಳಿಗೆ ಎಲ್ಲಾ ರೀತಿಯಿಂದಲೂ ಸಿಗುವ ಮೀಸಲಾತಿ ಶೇಕಡಾ 50% ಮೀರದಂತೆ ನೋಡಿಕೊಳ್ಳಲು ಆದೇಶಿಸಿತು.

ವೆಂಕಟಸ್ವಾಮಿ ಆಯೋಗ : ಹಾವನೂರು ಆಯೋಗದ ನ್ಯೂನತೆ ಸರಿಪಡಿಸುವ ಸಲುವಾಗಿ ಸರ್ಕಾರ ಮತ್ತೊಂದು ಹೊಸ ಆಯೋಗದ ರಚನೆ ಮಾಡಿತು.ಈ ಆಯೋಗದ ಅಧ್ಯಕ್ಷರಾದ ವೆಂಕಟಸ್ವಾಮಿಯವರು 1983ರಲ್ಲಿ ಅಧಿಕಾರ ಸ್ವೀಕರಿಸಿದರು. ಈ ವೇಳೆಗೆ ರಾಮಕೃಷ್ಣ ಹೆಗಡೆ ಅವರ ಸರ್ಕಾರ ಅಧಿಕಾರದಲ್ಲಿತ್ತು. ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದ ಹಾವನೂರು ಆಯೋಗದ ಪ್ರಕರಣದ ಪರಾಮರ್ಷೆ ಸಲುವಾಗಿ ಈ ಆಯೋಗವನ್ನು ಸರ್ಕಾರ ರಚನೆ ಮಾಡಿತ್ತು. ಈ ಆಯೋಗ 1986ರಲ್ಲಿ ತನ್ನ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿತು. ವರದಿ ಸಿದ್ದಪಡಿಸುವ ವೇಳೆ ವಿವಿಧ 17ಸೂಚಕಗಳನ್ನು ಪರಿಶೀಲಿಸಿ ತನ್ನ ನಿರ್ಣಯವನ್ನು ರೂಪಿಸಿಕೊಂಡಿತ್ತು. ಹಿಂದಿದ್ದ ಹಿಂದುಳಿದ ವರ್ಗಗಳ ಮೀಸಲಾತಿ ವರ್ಗೀಕರಣವನ್ನು ಪರಿಷ್ಕರಿಸಿದ ಸರ್ಕಾರ ಈ ಬಾರಿ ವರ್ಗಗಳ ಬದಲು ಅದನ್ನು ವಿಭಾಗಗಳಾಗಿ ವಿಭಜಿಸಿ, ಂ.ಃ.ಅ.ಆ ಗುಂಪುಗಳಾಗಿ ಮಾಡಿತು. ಹಾವನೂರು ವರದಿಯಿಂದ ಹೊರಗುಳಿದಿದ್ದ ಲಿಂಗಾಯತ ಹಾಗೂ ಇತರ ಕೆಲ ವರ್ಗಗಳಿಗೆ ಮರಳಿ ಇಲ್ಲಿ ಅವಕಾಶ ಕೊಡಿಸಿದ್ದೇ ಈ ಆಯೋಗದ ಹೊಸ ಕ್ರಮವಾಗಿತ್ತು. ಇದರ ಜೊತೆಗೆ ಂ ಗುಂಪಿನವರಿಗಿದ್ದ ಆದಾಯ ಮಿತಿಯನ್ನು ಆಯೋಗ ರದ್ದು ಮಾಡಿತು.

ಚೆನ್ನಪ್ಪ ರೆಡ್ಡಿ ಆಯೋಗ : ಒಂದಷ್ಟು ಸುಧಾರಣೆಗಳ ಜೊತೆ ಜಾರಿಗೆ ಬಂದ ಹಿಂದುಳಿದ ವರ್ಗಗಳ ಆಯೋಗದ ಹೊಸ ವರದಿ ಲೆಕ್ಕಾಚಾರಗಳಿಗೂ ಕೆಲ ಸಮಯದ ನಂತರ ಮತ್ತೆ ಆಕ್ಷೇಪ ವ್ಯಕ್ತವಾಯಿತು. ಈ ಹಿನ್ನೆಲೆಯಲ್ಲಿ ಅಂದಿನ ಆಡಳಿತ ಸರ್ಕಾರ ಮೂರನೇ ಹಿಂದುಳಿದ ವರ್ಗಳ ಸಮಿತಿಯನ್ನು ರಚನೆ ಮಾಡಿ ಅದರ ಜವಾಬ್ದಾರಿಯನ್ನು ಚೆನ್ನಪ್ಪರೆಡ್ಡಿಯವರಿಗೆ ವಹಿಸಿತು.1987ರಲ್ಲಿ ಅಧಿಕಾರ ವಹಿಸಿಕೊಂಡ ಚೆನ್ನಪ್ಪರೆಡ್ಡಿಯವರು ಅರುವತ್ತರ ದಶದಲ್ಲಿನ ಸಾಮಾಜಿಕ ದೃಷ್ಟಿಕೋನ ಹಾಗೂ ಮಿತಿಯ ಲೆಕ್ಕಾಚಾರಗಳನ್ನು ಗಮನದಲ್ಲಿಟ್ಟುಕೊಂಡು ತನ್ನ ವರದಿ ರಚಿಸಿ 1990ರಲ್ಲಿ ಅದನ್ನು ಸರ್ಕಾರಕ್ಕೆ ನೀಡಿತು.ಹಿಂದುಳಿದ ವರ್ಗವನ್ನು ನಾಲ್ಕು ವಿಭಾಗಗಳಾಗಿ ವಿಂಗಡಿಸಿದ ಈ ಆಯೋಗ ಹೊಸದೊಂದಿಷ್ಟು ಪರಿಷ್ಕರಣೆ ಮಾಡಿ ಎಬಿಸಿಗಳ ಜೊತೆಗೆ 2ಂ,2ಃ,3ಂ,3ಃಗಳೆಂದು ವಿಂಗಡಿಸಿ ಎಲ್ಲ ಸಮುದಾಯಗಳಿಗೆ ಅವಕಾಶ ಕಲ್ಪಿಸಿಕೊಟ್ಟಿತು. ಈ ನಡುವೆ ಹಿಂದುಳಿದವರ್ಗಗಳ ಕರಿತು ವರದಿ ನೀಡುವ ಸಲುವಾಗಿರ ರಚನೆಯಾಗಿದ್ದ ಮಂಡಲ್ ಆಯೋಗಬ ವಿಚಾರದಲ್ಲಿ ಸರ್ವೋಚ್ಚ ನ್ಯಾಯಾಲಯ ಹೊಸ ಆದೇಶ ಹೊರಡಿಸಿ ಪರಿಶಿಷ್ಟ ಜಾತಿ ಮತ್ತು ಪಂಗಡದ ಮೀಸಲಾತಿಯೂ ಸೇರಿದಂತೆ ಇತರೆ ಯಾವುದೇ ಸಮುದಾಯಗಳಿಗೆ ನೀಡುವ ಮೀಸಲಾತಿಯು ಶೇಕಡಾ50%ನ್ನು ಮೀರಬಾರದೆಂದು ಸೂಚಿಸಿತು. ಈ ವೇಳೆ ಎದುರಾದ ಜನಾಭಿಪ್ರಾಯ ಸರ್ಕಾರದ ವಿರುದ್ಧ ರೂಪುಗೊಂಡಾಗ ರಾಜ್ಯ ಸರ್ಕಾರ ಮತ್ತೊಂದು ಮಧ್ಯಂತರಆದೇಶ ನೀಡಿ, ಎಲ್ಲಾ ಸಮುದಾಯಗಳ ಹಿತ ಕಾಪಾಡಲು ಬದ್ಧರಾಗಿರುವುದಾಗಿ ತಿಳಿಸಿ ಒಳಪಂಗಡಗಳ ರಚನೆ ಮಾಡಿ ಎಲ್ಲವಕ್ಕೂ ಮೀಸಲಾತಿ ಸೌಲಭ್ಯ ಕೊಡಿಸಲು ಮುಂದಾಯ್ತು. ಈ ಎಲ್ಲಾ ಬೆಳವಣಿಗೆಗಳ ಬಳಿಕ ಎಚ್ಚೆತ್ತುಕೊಂಡ ಸರ್ಕಾರ 1994ರಲ್ಲಿ ಹಿಂದುಳಿದ ವರ್ಗಗಳ ಖಾಯಂ ಆಯೋಗವನ್ನು ರಚಿಸಿ ನಿವೃತ್ತ ನ್ಯಾಯಾಧೀಶರಾದ ಕುದೂರು ಪೈಗಳನ್ನು ಅದರ ಅಧ್ಯಕ್ಷರನ್ನಾಗಿ ನೇಮಿಸಿ ಹೊಸ ಕಲ್ಯಾಣ ಕಾರ್ಯಗಳನ್ನು ರೂಪಿಸಲು ಆದೇಶಿಸಿತು.

ಹೀಗೆ ರೂಪುಗೊಂಡ ಹಿಂದುಳಿದ ವರ್ಗಗಳ ಆಯೋಗ ಕಾಲಕಾಲಕ್ಕೆ ಒಂದಷ್ಟು ಮಾರ್ಪಾಡುಗಳನ್ನು ಹೊಂದಿಕೊಂಡು ಕಾರ್ಯ ನಿರ್ವಹಿಸುತ್ತಾ ಬಂದಿದೆ.

## ಬಾರೋ ಬಾರೋ ಮಂಗಣ್ಣ

ಬಾರೋ ಬಾರೋ ಮಂಗಣ್ಣ
ಮಾವಿನ ಹಣ್ಣು ತಿನ್ನೋಣ
ಬೇಡ ಬೇಡ ತಮ್ಮಯ್ಯ
ತಿನ್ನಲು ಎನಗೆ ಮನಸ್ಸಿಲ್ಲೋ ಜಾಣ
ಕಾರಣ ಹೇಳು ನನ್ನಣ್ಣ
ನಿನ್ನ ಬಿಟ್ಟು ತಿನ್ನಲಿ ಹೇಗಣ್ಣ


ಮರವ ಕಡಿದ ಮನುಜರು
ಕಾಡಿಗೆ ಕೊಳ್ಳಿಯಿಟ್ಟಿಯರು
ಮರವಿರದೇ ಮಳೆಬಾರದು
ಬೆಳೆಯುಬರದು ಬರ ಅಳಿಯದು
ಜಗದಿ ಜನ–ಜಾನುವಾರು ಬದುಕು ಹೇಗಣ್ಣ
ಪ್ರಾಣಿ, ಪಕ್ಷಿಗಳು ಜೀವನದ ಚಿಂತೆಯಣ್ಣ

ಚಿಂತೆ ಬೇಡ ಮಂಗಣ್ಣ
ಗಿಡ ಮರ ಬೆಳಸ್ತಿವಿ ಬಾರಣ್ಣ
ಎಲ್ಲರೂ ಸೇರಿ ಪರಿಸರ ಉಳಿಸೋಣ
ಸಕಲರ ಜೀವವ ಕಾಪಾಡೋಣ
ಬಾರೋ ಬಾರೋ ಮಂಗಣ್ಣ
ನನ್ನನ್ನು ನಂಬಿ ಹಣ್ಣು ತಿನ್ನಣ್ಣ

ಸುಳ್ಳು ಮನುಜರನು ನಂಬಲಿ ಹೇಗಯ್ಯ
ಮರ ಬೆಳೆಸಿ –ಬರ ಅಳಿಸಿ ವೆಂಬ
ಬರೀ ಬಾಷಣ ಮಾಡುವರು
ಪರಿಸರ ದಿನಾಚರಣೆ ಮಾಡಿ ಮರೆತು ಬಿಡುವರು
ಗಿಡಮರಗಳನ್ನ
ಮಾನವರ ಮಾತು ಹೇಗೆ ನಂಬಲಿ ಹೇಳಯ್ಯ
ತಪ್ಪಿದ್ದರೆ ನನ್ನ ಕ್ಷಮಿಸು ತಮ್ಮಯ್ಯ

ಕಾಡು ಉಳಿಸಲು ವಚನ ನೀಡುವೆ
ಗಿಡ ಮರ ಕಡಿಯದಿರಲು ಪಣ ತೊಡುವೆ
ಶಾಲಾ ಕಾಲೇಜುಗಳಲ್ಲಿ ಗಿಡ ನೆಡುವೆ.
ಈಗಲಾದರೂ ಹಣ್ಣು ತಿನ್ನಲು ಬಾರಣ್ಣ
ಇಬ್ಬರೂ ಕೂಡಿ ಆಟವ ಆಡೋಣ

ಸರಿಸರಿ ಕೊಡು ಸವಿಸವಿ ಹಣ್ಣು
ತಿನ್ನೋಣಬಾ ತಮ್ಮ ಹಂಚಿಕೊಂಡು
ಕಾಡನ್ನು ಉಳಿಸಿ ಬೆಳೆಸೋಣ
ಪರಿಸರ ಗೀತೆ ಹಾಡೋಣ
ನೆಮ್ಮದಿಯಾಗಿ ಬಾಳೋಣ
ಜಗಕ್ಕೆ ಪರಿಸರ ಮಹತ್ವ ಸಾರೋಣ.
ಹಸಿರೇ ಉಸಿರೆಂಬ ಸತ್ಯ ತಿಳಿಸೋಣ



ರಚನೆ :
**ನಿಂಗನಗೌಡ.ಹ.ದೇಸಾಯಿ (ಹನಿ)**
ಪರಸನಹಳ್ಳಿ.ಸಾಹಿತಿ, ಸಂಶೋಧಕರು.
ಸಹಶಿಕ್ಷಕರು
ಸರಕಾರಿ ಬಾಲಕಿಯರ ಪ್ರೌಢಶಾಲೆ
ಕೆಂಭಾವಿ

ಕರುನಾಡ ಕಂದ
ಸಂಪುಟ–1 । ಸಂಚಿಕೆ–4
ದಿನಾಂಕ: 16–12–2021 । ಪುಟಗಳು: 16

# ದೇಶದ ಕಿರೀಟಾ ಉರಳಿತು ಡಾ.ಮಹಿಬೂಬ್ ಮದ್ಲಾಪುರ

ಮಾನ್ವಿ:ಡಿ09ನಮ್ಮ ದೇಶದ ಸಂಪತ್ತು ಅಂದರೆ ಸೈನ್ಯ ಪಡೆ, ದೇಶದ ರಕ್ಷಣೆ, ಭಾರತ ಭೂಮಿಯ ಹೊಣೆಗಾರಿಕೆ ಅವರ ಕರ್ತವ್ಯ ಎಂದು ಭಾವಿಸುತ್ತಾ ತಮ್ಮ ಸೇವೆ ನಮಗಾಗಿ ತಮ್ಮ ಪ್ರಾಣ ಪಣಕ್ಕಿಟ್ಟು ಸೇವೆಗೈಯುತ್ತಿರುವವರು ಎಂದ ಸಾಕ್ಷಿಯಾದ ಈ ಹೆಲಿಕಾಪ್ಟರ್ ದುರಂತದಿಂದ ನಮ್ಮ 11ಜನ ಸೈನಿಕರ ಜೊತೆಯಲ್ಲಿ ಮೂರು ಸಶಸ್ತ್ರ ಪಡೆಯ ಮುಖ್ಯಸ್ಥ ಜ. ಬಿಪಿನ್ ರಾವತ್, ಅವರ ಪತ್ನಿಯ ಅಗಲುವಿಕೆ ಭಾರತೀಯರಲ್ಲಿ ತುಂಬಲಾಗದ ದುಃಖ ಮತ್ತು ನಷ್ಟ ಎಂದು ಡಾ. ಮಹಿಬೂಬ್ ಮದ್ಲಾಪುರ ಹೇಳಿದ್ದಾರೆ.

ಮಾನವಿಯ ಸೈನಿಕರ ಅಭಿಮಾನ ಬಳಗ, ವಂದೇ ಮಾತರಂ ಯುವ ಸಂಘ(ರಿ) ಮದ್ಲಾಪುರ, ಅಖೀಲ ಕರ್ನಾಟಕ ಮಾಜಿ ಸೈನಿಕರ ಸಂಘ, ಓಂಕಾರ್ ಸಂಘ, ನೌಕರರ ಸಂಘ, ಕನ್ನಡ ಜನಸೇನೆ ಸಂಘ, ಬಡವರ ಬಂಧುಗಳ ಯುವ ಸಂಘ, ಅಪ್ಪು ಅಭಿಮಾನಿಗಳ ಸಂಘ, ಶಿಕ್ಷಕರ ಸಂಘ, ಸಾಹಿತಿಗಳ ಸಂಘ ಮತ್ತು ದೇಶ ಭಕ್ತರೆಲ್ಲಾರು ಸೇರಿ ಮೇಣದ ಬತ್ತಿಯ ದೀಪ ಹಚ್ಚಿ ಶಾಂತಿಯ ಮೆರವಣಿಗೆ ಮಾನವಿ ನಗರದ ಬಸವ ವೃತ್ತದಿಂದ



ದಿ. ಮಂಜುನಾಥ ಪುಥಳಿಯ ಬಳಿ ಸಾಯಂಕಾಲ 7 ಗಂಟೆಗೆ ಮತನಾಡುವ ಮೂಲಕ ಶ್ರದ್ಧಾಂಜಲಿ ಸಲ್ಲಿಸಿ 2 ನಿ. ಮೌನಾಚರಣೆ ಮಾಡಲಾಯಿತು.

ಕಾರ್ಯಕ್ರಮದಲ್ಲಿ ನೌಕರರ ಸಂಘದ ಹಿರಿಯರಾದ ಶ್ರೀಶೈಲ ಗೌಡ ಮಾತನಾಡಿ "ನಮ್ಮ ದೇಶದ ಆಸ್ತಿ ಸೈನ್ಯ ನಮ್ಮ ಭಾರತೀಯ ಸೈನ್ಯದ ಮೇಲೆ ಯಾರ ಕಣ್ಣು ಬಿತ್ತು ? ವಿದೇಶದ ಕೈವಡವೇ ? ಈ ದುರಂತಕ್ಕೆ ಕಾರಣ ಏನು ? ಸಂಪೂರ್ಣ ತನಿಖೆಯಾಗಲೇಬೇಕು. ಎಂದರು.

ಅನುದಾನಿತ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಹರ್ಷವರ್ಧನ ಮಾತನಾಡಿ "ಜ. ಬಿಪಿನ್ ರಾವತ್ ಅವರು ನಮ್ಮ ಭಾರತ ದೇಶದಿಂದ ಹಲವಾರು ವಿದೇಶ ಬಿಕ್ಕಟ್ಟನ್ನು ಇತ್ಯರ್ಥಗೋಳಿಸುವ ಮೂಲಕ ಸ್ನೇಹ ಹಸ್ತಲಾಘವ ಮಾಡುವ ಮೂಲಕ ದೇಶದಲ್ಲಿ ಶಾಂತಿಯನ್ನು ಕಾಪಾಡಿದ್ದರು, ನಮ್ಮ ಸೈನಿಕರಲ್ಲಿ ಭಾವನಾತ್ಮಕ ದೇಶ ಭಕ್ತಿಯ ಬೀಜವನ್ನನು ಬಿತ್ತುತ್ತಾ ರಾಷ್ಟ್ರೀಯ ಸೈನ್ಯ ಶಕ್ತಿ ಬಲಪಡಿಸುವ ವಿಶೇಷ ಘನಕಾರ್ಯಕ್ಕೆ ಕಾರಣಿಕರ್ತರಾಗಿದ್ದಾರೆ ಇಂತಹ ಮಾಹಾನ್ ನಾಯಕನ ಅಗಲಿಕೆ ನಮಗೆ ಅತೀವ ದುಃಖ ತುಂಬಿದೆ ಎಂದರು.

ಕಾರ್ಯಕ್ರಮದಲ್ಲಿ ಮಾಜಿ ಸೈನಿಕ ಚೆನ್ನಾರೆಡ್ಡಿ, ಕನ್ನಡ ಸಾಹಿತ್ಯ ಪರಿಷತ್ ನ ತಾಲೂಕ ಅದ್ಯಕ್ಷ ಮ.ಮೂಜೀಬ್, ಕಲಾವಿಧ ದೈ.ಶಿ. ಮೌನೇಶ್ ಪೋತ್ನಾಳ್ ಶಿಕ್ಷಕರ ಸಂಘದ ತಾಲೂಕ ಅಧ್ಯಕ್ಷ ಸಂಗಮೇಶ್ ಮುದೊಳ್, ನಾಯಕ ಸಮೂದಯದಿಂದ ತಿಮ್ಮೇಶ್ ನಾಯಕ್, ಹಂಪಣ್ಣ ಚಂಡೂರ್, ಅಪ್ಪು ಅಭಿಮಾನಿ ಬಳಗದ ರಾಜೇಶ್, ಕನ್ನಡ ಜನಸೇನದ ಕುಮಾರ, ಅಮರೇಶ್ ಆಟೋ, ರಫೀ,ದೈ.ಶಿಕ್ಷರ ಅಧಿಕ್ಷಕ ಶ್ರೀಕಾಂತ್ ಬಾಗೆವಾಡಿ, ನೌಕರ ಸಂಘದ ಸುರೇಶ್ ಮಾನವಿಯ ಸೈನಿಕ ಅಭಿಮಾನಿಗಳು ಸೇರಿದ್ದರು.

# ಮೊಟ್ಟಮೊದಲ ಬಾರಿಗೆ ಕರ್ನಾಟಕದಲ್ಲಿ ಪರಿಸರಕ್ಕಾಗಿ ವೃಕ್ಷ ರಥ ವಾಹನ



ವನಸಿರಿ ಫೌಂಡೇಶನ್ ವತಿಯಿಂದ ಪರಿಸರ ರಕ್ಷಣೆಗೆ ನಿರಂತರ ಪರಿಸರ ಸೇವೆಯಲ್ಲಿ ಈ ವೃಕ್ಷ ರಥ ಶ್ರೀ ಮ. ನಿ. ಪ್ರ. ಅಭಿನವ ಗವಿಸಿದ್ದೇಶ್ವರ ಮಹಾಸ್ವಾಮಿಗಳು ಸಂಸ್ಥಾನ ಗವಿಮಠ ಕೊಪ್ಪಳ ಮಠದಲ್ಲಿ ವನಸಿರಿ ವೃಕ್ಷ ರಥ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ವನಸಿರಿ ಫೌಂಡೇಶನ್ ಸರ್ವ ಸದಸ್ಯರು ಮತ್ತು ಪರಿಸರ ಪ್ರೇಮಿಗಳು ಭಾಗಿಯಾಗಿದ್ದರು.

# ಕಾಸರಭೋಸಗಾ ಆಂಜನೇಯ ದೇವಸ್ಥಾನದ ಪಲ್ಲಕ್ಕಿ ಉತ್ಸವ



ಯಡ್ರಾಮಿ ತಾಲುಕಿನ ಕಾಸರಭೋಸಗಾ ಗ್ರಾಮದಲ್ಲಿ ಆಂಜನೇಯ ಸ್ವಾಮಿ ದೇವರ ಉತ್ಸವ ನಡೆಯಿತು ಉತ್ಸವದ ಪ್ರಯುಕ್ತ ಬೆಳಿಗ್ಗೆ ಭೀಮಾ ನದಿ ತಿರದ ಕೂಟನೂರ ಗ್ರಾಮದಲ್ಲಿ ಗಂಗಾ ಸ್ನಾನ ಅಭಿಷೇಕ ವಿಶೇಷ ಪೂಜೆ ಭಕ್ತರಿಗೆ ಅನ್ನ ಸಂತರ್ಪಣೆ ಮಾಡಲಾಯಿತು. ಶ್ರೀ ಕ್ಷೇತ್ರ ಕಾಸರಭೋಸಗ ಆಂಜನೇಯ ಸ್ವಾಮಿ ಪಲ್ಲಕ್ಕಿಯನ್ನು ಪ್ರತಿ ಮೂರು ವರ್ಷಕ್ಕೊಮ್ಮೆ ವೈಭವದೂಂದಿಗೆ ಭಜಂತ್ರಿ ಡೊಳ್ಳು ಮತ್ತು ಭಜನಾ ಮಂಡಳಿಯೊಂದಿಗೆ ಪಲ್ಲಕ್ಕಿ ಉತ್ಸವ ನೆರವೇರಿಸಿಕೊಂಡು ಈ ವರ್ಷವು ಕೂಡಾ ವಿಜೃಂಭಣೆಯಿಂದ ನೆರವೇರಿಸಲಾಯಿತು ಈ ಕಾರ್ಯಕ್ರಮದ ಉಸ್ತುವಾರಿ ವಹಿಸಿರುವ ಹಳ್ಳೆಪ್ಪ ಆಚಾರಿ ಜೋಶಿ ಲಕ್ಷ್ಮಣ ಶಿರಕನಳ್ಳಿ ಹಾಗೂ ಗ್ರಾಮದ ಮುಖಂಡರಾದ ಸಾಯಬಣ್ಣ ದೊಡಮನಿ ಇಸಾಖಾನ ನಾಡಗೌಡ ಮಾಳಪ್ಪ ಪೂಜಾರಿ ಅಶೋಕ್ ಯರಗಲ್ ಈರಣ್ಣ ಚೌಡಾಪುರ ಮಹಿಬೂಬ ಪಟೇಲ್ ಮಾಲಿ ಮಲ್ಲಿಕಾರ್ಜುನ ಜಿ ಕೋರಿ ಶಿವಲಿಂಗ ದೊಡಮನಿ ಸುರೇಶ್ ಹೂಗಾರ ಅಕ್ಬರ್ ಅಲಿ ಮುತ್ತ್ಯಾ ಹಾಗೂ ಬೆಂಕಿ ತಾತ ಮುತ್ತ್ಯಾ ವಿಶ್ವಾರಾಧ್ಯ ಕೋರಿ ಮತ್ತು ರಾಜು ಚೌಡಾಪುರ ಹಾಗೂ ಸುತ್ತಮುತ್ತಲಿನ ಗ್ರಾಮಗಳ ಸಹಸ್ರಾರು ಭಕ್ತರು ಭಾಗವಹಿಸಿದ್ದರು.

# ದೇಶ ಭಕ್ತಿಯಿಂದ ರಾಷ್ಟ್ರ ನಿರ್ಮಾಣ ಮಹಿಬೂಬ್ ಮದ್ಲಾಪುರ



ಮಾನ್ವಿ:ಡಿ07ದೇಶದ ಸೇವೆ ಈಶ ಸೇವೆ, ರಾಷ್ಟ್ರಕ್ಕೆ ಸಂಪತ್ತು ಯುವ ಶಕ್ತಿ ರಾಷ್ಟ್ರದ ಪ್ರತೀಕ ನಮ್ಮ ಭಕ್ತಿ ತೋರಿಸಬೇಕು. ಪ್ರತಿಯೊಬ್ಬರು ಸೇವೆ ಅಂತ ಏನಾದರು ಸಮಯ ಮತ್ತು ಸಂಧರ್ಭ ಮೀಸಲಿ–ರಿಸಿದ್ದೆಯಾದರೆ ದೇಶ ಪ್ರಪಂಚದ ಘನತೆ ಗೌರವಕ್ಕೆ ಸಾಕ್ಷಿಯಾಗುತ್ತದೆ. ಇಲ್ಲಿನ ಇತಿಹಾಸ, ಭೌಗೋಳಿಕ, ಪರಂಪರೆ, ಸಹಿಷ್ಣುತೆ, ಸಮಾನತೆ, ಭ್ರಾತೃತ್ವ, ಏಕತೆಯಲ್ಲಿನ ಐಕ್ಯತೆಗಳು ನಮ್ಮ ಮಂತ್ರಗಳು ಎಂದು ನೆಹರು ಯುವ ಕೇಂದ್ರದ ಸಂಪನ್ಮೂಲ ವ್ಯಕ್ತಿ ಡಾ. ಮಹಿಬೂಬ್ ಮದ್ಲಾಪುರ ಹೇಳಿದ್ದರೆ.

ಭಾರತ ಸರಕಾರದ ಸ್ಥಾಯಿ ಸಂಸ್ಥೆಯಾದ ನೆಹರುವಯುವ ಕೇಂದ್ರ, ರಾಯಚೂರು, ಭಾರತೀಯ ರೆಡ್ ಕ್ರಾಸ್ ಸಂಸ್ಥೆ, ಭಾರತ ವಂದೇ ಮಾತರಂ ಯುವ ಸಂಘ ಮದ್ಲಾಪುರ, ಖಾಜೆಬೀ ಯುವತಿ ಮಂಡಳಿ ಮಾನವಿ ಮತ್ತು ಬಡವರ ಬಂಧುಗಳ ಯುವ ಸಂಘ ಮಾನವಿ ವತಿಯಿಂದ ದೇಶ ಭಕ್ತಿ ರಾಷ್ಟ್ರ ನಿರ್ಮಾಣದಲ್ಲಿ ಯುವಜನ ಎಂಬ ವಿಷಯದ ಕುರಿತು ತಾಲೂಕ ಮಟ್ಟದ ಭಾಷಣ ಸ್ಪರ್ಧೆಯನ್ನು ಪಟ್ಟಣದ ಟಾರ್ಗೆಟ್ ಕರಿಯರ್ ಅಕಾಡೆಮಿಯಲ್ಲಿ ಜರುಗಿತು.

ಮುಖ್ಯ ಅತಿಥಿಯಾಗಿ ಐ.ಎಸ್.ಒ. ಅಧ್ಯಕ್ಷೆ ನಾಜೀಯಾ ಬೇಗಂ ಮತನಾಡಿ "ಯುವಕರು ದುಷ್ಚಟಗಳಿಗೆ ಬಲಿಯಾಗಿ ತಮ್ಮ ತನ, ಮನ, ಆತ್ಮ ಸ್ಥೈರ್ಯ ಕಳೆದುಕೊಳ್ಳುತ್ತಿದ್ದಾರೆ, ಯುವ ಜನತೆ ಅವರವರ ಗುರಿಯಡೆಗೆ ಅವರು ಸಾಗಿ ತಮ್ಮ ಜೀವನ ಸಂಪೂರ್ಣವಾಗಿ ನಿರ್ಮಿಸಿಕೊಂಡಿದ್ದಲ್ಲಿ ದೇಶದ ಬೆಳವಣಿಗೆಯಾಗಿದೆ ಎಂತಲೇ ಅರ್ಥ ಎಂದರು.

ಅತಿಥಿಯಾಗಿ ಖಾಸಗಿ ಖಾಲೇಜುಗಳ ಒಕ್ಕೂಟದ ಪ್ರ.ಕಾರ್ಯದರ್ಶಿ ಆಂಜನೇಯ ಮತನಾಡಿ ದೇಶದ ಸಂಪತ್ತು ಯುವ ಶಕ್ತಿ ಇವತ್ತು ಇದು ಸರಿಯಾಗಿ ಬಳಕೆಯಾಗಿದ್ದಲ್ಲಿ ನಮ್ಮ ಸಾಧನೆ ಬಹುಮಟ್ಟಕ್ಕೆ ಮುಟ್ಟಲು ಸಾದ್ಯ, ರಾಷ್ಟ್ರಕ್ಕೆ ಅರ್ಪಣಾಭಾವ, ರಾಷ್ಟ್ರ ಗೌರವ, ಚಿಹ್ನೆಗಳಿಗೆ ಧ್ವಜಕ್ಕೆ ಭಕ್ತಿಗೌರವ ಸೂಚಿಸುವುದು ಅವಶ್ಯಕತೆ ಇದೆ ಎಂದರು.

ಸ್ಪರ್ಧೆಯಲ್ಲಿ ಅಭಿಷೇಕ್ ಬೆಂಡೋಣಿ ಪ್ರಥಮ, ಮಹ್ಮದ್ ಬೇಗ್ ದ್ವಿತೀಯ ಸನಾ ರುಕ್ಸಾನ ತೃತೀಯ ಸ್ಥಾನ ಪಡೆದುಕೊಂಡಿದಕ್ಕಾಗಿ ಅವರಿಗೆ ಪ್ರಶಸ್ತಿ ಪತ್ರ ನೀಡಿ ಗೌರವಿಸಲಾಯಿತು.

ವೇಧಿಕೆ ಮತ್ತು ನಿರ್ಣಾಯಕರಾಗಿ ಉಪನ್ಯಾಸಕ ಸಿದ್ದೇಶ, ಸ್ವಯಂ ಸೇವಕ ಶ್ರೀಕಾಂತ್, ಸ್ಪರ್ಧಾರ್ಥಿಗಳಿದ್ದರು.

ವರದಿ:ಸುರೇಶ ಹರನಹಳ್ಳಿ

ಕರುನಾಡ ಕಂದ
ಸಂಪುಟ–1 । ಸಂಚಿಕೆ–4
ದಿನಾಂಕ: 16–12–2021 । ಪುಟಗಳು: 16

# ಎಎಪಿ ಅಭ್ಯರ್ಥಿಗಳು ಕಣಕ್ಕೆ

ಗದಗ: ರಾಜಕೀಯದಲ್ಲಿ ಬದಲಾವಣೆಗಾಗಿ "ಅವಕಾಶ ಕೊಟ್ಟು ವ್ಯತ್ಯಾಸ ನೋಡಿ" ಎಂಬ ಘೋಷವ್ಯಾಕ್ಯದೊಂದಿಗೆ ಆಮ್ ಆದ್ಮಿ ಪಕ್ಷ ಈ ಬಾರಿ ಗದಗ–ಬೆಟಗೇರಿ ನಗರಸಭೆಯ 35 ವಾರ್ಡ್‌ಗಳಲ್ಲಿ ಅಭ್ಯರ್ಥಿಗಳನ್ನು ಕಣಕ್ಕಿಳಿಸಲಿದೆ ಎಂದು ಪಕ್ಷದ ಸಂಸ್ಥಾಪಕ ಸದಸ್ಯ, ರಾಜ್ಯ ಸಹ ಸಂಚಾಲಕ ವಿಜಯ್ ಶರ್ಮಾ ಹೇಳಿದರು.

ನಗರದ ಪತ್ರಿಕಾ ಭವನದಲ್ಲಿ ರವಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಗದಗ–ಬೆಟಗೇರಿ ಅವಳಿ ನಗರದಲ್ಲಿ ರಸ್ತೆಗಳು ಸಂಪೂರ್ಣ ಹದಗೆಟ್ಟಿವೆ. ಮೂಲ ಸೌಕರ್ಯಗಳ ಸಮಸ್ಯೆ ಹೆಚ್ಚಿದೆ. ಬಿಜೆಪಿ, ಕಾಂಗ್ರೆಸ್ ಸೇರಿದಂತೆ ಸಾಂಪ್ರದಾಯಿಕ ಪಕ್ಷಗಳಲ್ಲಿನ ಪ್ರಾಮಾಣಿಕರು, ಜನ ಸೇವಾಕಾಂಕ್ಷಿಗಳಿಗೆ ಅವಕಾಶ ದೊರೆಯುತ್ತಿಲ್ಲ. ಅಂತಹವರಿಗೆ ಎಎಪಿ ಪಕ್ಷ ವೇದಿಕೆ ಕಲ್ಪಿಸಲಿದೆ. ಈ ಬಾರಿ ಆಮ್ ಆದ್ಮಿ ಪಕ್ಷದಿಂದ ಉತ್ತಮರನ್ನು ಚುನಾವಣಾ ಕಣಕ್ಕಿಳಿಸಿ, ಗೆಲ್ಲಿಸುವ ಮೂಲಕ ಅವಳಿ ನಗರದ ಅಭಿವೃದ್ಧಿಗೆ ಒತ್ತು ನೀಡಲಾಗುವುದು ಎಂದರು.

ಜಿಲ್ಲೆಯಲ್ಲಿ ಆಪ್ ಬಲಿಷ್ಠವಾಗದಿದ್ದರೂ, ಗುಜರಾತ್‌ನ ಬಿಜೆಪಿ ಹಾಗೂ ದೆಹಲಿ ಆಪ್ ಪಕ್ಷದ ಆಡಳಿತಗಳು ಜನರ ಮುಂದಿವೆ. ದೆಹಲಿಯಲ್ಲಿ ಆಡಳಿತ ಸಂಪೂರ್ಣ ಪಾರದರ್ಶಕವಾಗಿದೆ. ಜನರು ಭರಿಸಿದ ತೆರಿಗೆ ಹಣ ಪರೋಕ್ಷವಾಗಿ ಜನರಿಗೆ ತಲುಪುತ್ತಿವೆ. ಈ ನಿಟ್ಟಿನಲ್ಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಹಗಲಿರುಳು ಶ್ರಮಿಸುತ್ತಿದ್ದಾರೆ. ಚುನಾವಣೆಯಲ್ಲಿ ಯಾವ ಪಕ್ಷವನ್ನು ಆಯ್ಕೆ ಮಾಡಿಕೊಳ್ಳಬೇಕು ಎಂಬುದು ಜನರ ಮುಂದಿದೆ ಎಂದರು.



ನಗರಸಭೆ ಚುನಾವಣೆಗೆ ಪಕ್ಷದ ಟಿಕೆಟ್ ಕೋರಿ ಈಗಾಗಲೇ 131 ಅರ್ಜಿಗಳು ಬಂದಿವೆ. ಭ್ರಷ್ಟ, ಕೋಮುವಾದಿ ಹಾಗೂ ಅಪರಾಧ ಹಿನ್ನೆಲೆ ಹೊಂದಿರದ ವ್ಯಕ್ತಿಗಳನ್ನು ಅಭ್ಯರ್ಥಿಗಳಿಗೆ ಅವಕಾಶ ನೀಡಲಾಗುತ್ತದೆ. ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಗುರುತಿಸಿಕೊಂಡ ಅನೇಕರು ವಿವಿಧ ವಾರ್ಡ್‌ಗಳಲ್ಲಿ ಪಕ್ಷದಿಂದ ಸ್ಪರ್ಧಾಕಾಂಕ್ಷಿಗಳಾಗಿದ್ದಾರೆ.

ಅವರ ಬಗ್ಗೆ ಪಕ್ಷದ ವೇದಿಕೆಯಲ್ಲಿ ಚರ್ಚೆ ನಡೆಯುತ್ತಿದೆ. ಎಲ್ಲವನ್ನು ಪರಿಶೀಲಿಸಿ ಉತ್ತಮ ಅಭ್ಯರ್ಥಿಗಳನ್ನು ಪಕ್ಷ ಜನತೆಯ ಆಯ್ಕೆಗಾಗಿ ಅವರ ಮುಂದಿಡಲಿದೆ. ಪ್ರತಿಯೊಂದು ವಾರ್ಡ್‌ಗೆ ಪ್ರತ್ಯೇಕ ಪ್ರಣಾಳಿಕೆ ಪ್ರಕಟಿಸಿ, ಅವುಗಳನ್ನು ಸಾಕಾರಗೊಳಿಸಲು ಪ್ರಯತ್ನಿಸಲಾಗುವುದು. ಅವಳಿ ನಗರದ ಮತದಾರರು ಆಪ್ ಪಕ್ಷದ ಅಭ್ಯರ್ಥಿಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಗೆಲ್ಲಿಸಿ, ಪ್ರಜಾಪ್ರಭುತ್ವದ ಆಶಯಗಳನ್ನು ಗಟ್ಟಿಗೊಳಿಸಲು ಕೈಜೋಡಿಸಬೇಕೆಂದು ಮನವಿ ಮಾಡಿದರು.

ಅದರೊಂದಿಗೆ ಮುಂಬರುವ ತಾಪಂ, ಜಿಪಂ ಚುನಾವಣೆಗೂ ಸಿದ್ಧತೆಗಳನ್ನು ಆರಂಭಿಸಲಾಗುವುದು. ಜಿಲ್ಲಾ ಸಮಿತಿ ರಚಿಸಿ, ಸಕ್ರಿಯವಾಗಿ ಮುನ್ನಡೆಸುವ ನಿಟ್ಟಿನಲ್ಲಿ ಬಿ.ಎಸ್.ದೇಸಾಯಿ ಅವರಿಗೆ ಜಿಲ್ಲಾ ಸಮಿತಿ ಹೊಣೆ ನೀಡಲಾಗುತ್ತದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಆಪ್ ರಾಜ್ಯ ಜಂಟಿ ಕಾರ್ಯದರ್ಶಿ ದರ್ಶನ್ ಜೈನ್, ಎಲ್.ನಾರಾಯಣಸ್ವಾಮಿ, ಬಿ.ಎಸ್.ದೇಸಾಯಿ, ಉಪಸ್ಥಿತರಿದ್ದರು.

# ಕಾನೂನು ವಿದ್ಯಾರ್ಥಿಗಳಿಂದ ಬೃಹತ್ ಪ್ರತಿಭಟನೆ



ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ ಸರ್ವಾಧಿಕಾರಿ ಧೋರಣೆಯ ವಿರುದ್ಧ ಕಾನೂನು ವಿದ್ಯಾರ್ಥಿಗಳು ಬೃಹತ್ ಪ್ರತಿಭಟನೆ ನಡೆಸಿದರು. ನಗರದ ಅಂಬೇಡ್ಕರ್ ವೃತ್ತದಿಂದ ಜಿಲ್ಲಾಧಿಕಾರಿ ಕಛೇರಿಗೆ ತೆರಳಿ ಜಿಲ್ಲಾಧಿಕಾರಿಗಳ ಮೂಲಕ ರಾಜ್ಯಪಾಲರಿಗೆ ಮನವಿ ಪತ್ರ ಸಲ್ಲಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ವಿದ್ಯಾರ್ಥಿ ಮುಖಂಡ ಶ್ರೀಶ ಹುಟಗಿ, "ಕಾನೂನು ವಿಶ್ವವಿದ್ಯಾಲಯವು ನಿಗದಿತ ಸಮಯದಲ್ಲಿ ಪರೀಕ್ಷೆಗಳನ್ನು ನಡೆಸದೇ, ಯುಜಿಸಿ ಸೂಚನೆಗಳನ್ನು ಪಾಲಿಸದೇ ಶೈಕ್ಷಣಿಕ ವರ್ಷವನ್ನು ಬೇಕಾಬಿಟ್ಟಿಯಾಗಿ ವಿಸ್ತರಿಸುತ್ತಿದೆ. ಪದೇ ಪದೇ ಪರೀಕ್ಷಾ ವೇಳಾಪಟ್ಟಿ ಬಿಡುಗಡೆ ಮಾಡುವುದು ನಂತರ ಮುಂದೂಡುವುದು ಈ ರೀತಿ ಮಾಡಿ ವಿದ್ಯಾರ್ಥಿಗಳನ್ನು ಗೊಂದಲಕ್ಕೆ ಸಿಲುಕಿಸುತ್ತಿದೆ. ಮೂರು ವರ್ಷದ ಕೋರ್ಸ್ ಮೂರು ವರ್ಷಕ್ಕೆ ಮತ್ತು ಐದು ವರ್ಷದ ಕೋರ್ಸ್ ಐದು ವರ್ಷಕ್ಕೆ ಮುಗಿಯುವಂತೆ ಕ್ರಮ ಕೈಗೊಳ್ಳಬೇಕು. ವಿದ್ಯಾರ್ಥಿಗಳನ್ನು ಶತ್ರುಗಳಂತೆ ಪರಿಗಣಿಸುವುದನ್ನು ಬಿಡಬೇಕು" ಎಂದು ಆಗ್ರಹಿಸಿದರು.

ರಾಜಕುಮಾರ ಪಾಟೀಲ, ಶ್ರೀನಿವಾಸ ತಿಕೋಟಿ, ಸುರೇಶ್ ರಾಠೋಡ, ವಿಶ್ವನಾಥ, ಚಂದ್ರು, ರತಿಕಾಂತ, ವಿಜಯಕುಮಾರ, ಶ್ರೀಶೈಲ ಮನಗೂಳಿ, ಶಿವಾನಂದ ವಾಲಿಕಾರ, ಮಂಜುನಾಥ, ಅಬ್ದುಲ್ ನದಾಫ್, ಯಾಮಿನಿ, ಭಾಗ್ಯಶ್ರೀ, ಉಮಾ, ಸೌಮ್ಯ ಸೇರಿದಂತೆ ನೂರಾರು ವಿದ್ಯಾರ್ಥಿಗಳು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

# ಬೀದಿ ದೀಪಗಳು ಇಲ್ಲದೆ ಕತ್ತಲೆಯಲ್ಲಿರುವ ವಿಠ್ಠಲ ಹೆರೂರು ನಗರ

ಕಲ್ಬುರ್ಗಿ ಜಿಲ್ಲೆಯ ಅಫಜಲಪುರ ತಾಲೂಕಿನಲ್ಲಿ ತಶಿಲ್ದಾರ್ ಕಚೇರಿ ಹಿಡಿದು ವಿಠ್ಠಲ ಹೇರೂರ ನಗರದ ವರೆಗೆ ಹಾಡು ಹಗಲ್ಲೇ ತಾಲೂಕು ಕತಲೆ ವಾತಾವರಣ ನಿರ್ಮಾಣವಾಗಿದೆ ಮೆರಿಚ್ಚಿಕೆ ಯಾದ ಬೀದಿ ದೀಪಗಳು ಬೀದಿ ದೀಪಗಳು ಇಲ್ಲದೆ ನೂರಾರು ದಿನವಾದರು ಸಂಭದ ಪಟ್ಟ ಅಧಿಕಾರಿಗಳ ಗಮನಕ್ಕೆ ಮತ್ತು ಶಾಸಕರ ಗಮನಕ್ಕೆ ಇನ್ನು ಬಂದಿಲ್ಲ ಹಾಗಾದರೆ ತಾಲೂಕಿನಲ್ಲಿರು ಬೀದಿ ದೀಪಗಳೇ ಇಲ್ಲದಿದರು ಶಾಸಕರ ಗಮನಕ್ಕೆ ಮತ್ತು ಸಂಬದ ಪಟ್ಟ ಅಧಿಕಾ–ರಿಗಳ ಗಮನಕ್ಕೆ ಬಂದಿಲ್ಲ ತಾಲೂಕಿನ ಅಭಿವೃದ್ಧಿ ಇನ್ನ ಯಾವ ರೀತಿ ಮಾಡುತ್ತಾರೆ ಎಂದು ಜನ ಸಾಮಾನ್ಯರಲ್ಲಿ ಒಂದು ಭಯದ ಭೀತಿ ಉಂಟುಮಾಡುತ್ತಿದೆ ಹಾಗಾಗಿ ಮುಂದಿನ ದಿನಗಳಲ್ಲಿ ಈ ಸಮಸ್ಯೆಗೆ ತಾವು ಸ್ಪಂದಿಸದಿದ್ದರೆ ನಾವು ತಾಲೂಕಿನಲ್ಲಿ ಉಗ್ರವಾದ ಹೋರಾಟ ಮಾಡುವುದು ಅನಿವಾರ್ಯ ವಾಗುತ್ತದೆ ಎಂದು ಕರ್ನಾಟಕ ಜನ ಬೆಂಬಲ ವೇದಿಕೆಯ ತಾಲೂಕ ಅಧ್ಯಕ್ಷರಾದ ಉಮೇಶ್ ಅಂದೋಡಗಿ ಅವರು ಆಕ್ರೋಶ ವ್ಯಕ್ತಪಡಿಸಿದರು



# ನಾನು 101ನೇಯ ಕೌರವ...

ನಾನು, ನನ್ನ ಆತ್ಮಾವಲೋಕನ ಮಾಡಿಕೊಂಡಾಗ ಖಾತ್ರಿಯಾಗಿ ಹೇಳಬಲ್ಲೆ. ನಾನೇನಾದರೂ ಮಹಾಭಾರತ ಕಾಲದಲ್ಲಿ ಜನ್ಮ ತಾಳಿದ್ದರೆ, ನನ್ನ ಸಮಾವೇಶ ಕೌರವರ ಪಾರ್ಟಿಯಲ್ಲಿ ಇರುತಿತ್ತು. ಏಕೆಂದರೆ... ಕೃಷ್ಣನನ್ನು ಏನಾದರೂ ಒಮ್ಮೆ ಯಾದರೂ ಪ್ರತ್ಯಕ್ಷ ಭೇಟಿ ಆಗಿದ್ದರೆ, ನಾನು ಶ್ರೀ ಕೃಷ್ಣನಿಗೆ ಕೇಳುತ್ತಿದ್ದೆ..

ಹೇ , ಕೃಷ್ಣಾ... ಈ ಭಗವದ್ಗೀತೆಯ ಸಂದೇಶ ಅರ್ಜುನನ ಬದಲಾಗಿ, ದುರ್ಯೋಧನ, ಅಥವಾ ದುಶ್ಯಾಸನ, ಇವರಿಗೆ ತಿಳಿಸಿ ಹೇಳಿದ್ದರೆ, ಈ ಘೋರ ಕುರುಕ್ಷೇತ್ರ ಯುದ್ಧವೇ ಆಗುತ್ತಿದ್ದಿಲ್ಲ..ಇಷ್ಟೊಂದು ನರ ಸಂಹಾರ ಆಗುತ್ತಿದ್ದಿಲ್ಲ, ನೀ..

ಹೀಗೆ ಏಕೆ ಮಾಡಿದಿ ಕೃಷ್ಣಾ...

ಭಗದ್ಗೀತೆಯ ಈ ದಿವ್ಯ ಜ್ಞಾನ ಕೌರವರಿಗೆ ಆಗಿದ್ದರೆ, ಮಹಾಭಾರತದ ಈ ಯುದ್ಧದ ತತ್ವ ಜ್ಞಾನ ಬದಲಾಗಿ, ಬಂಧು ಬಳಗದ ಪ್ರೀತಿ, ಇದರ ತತ್ವಜ್ಞಾನ, ಇದನ್ನು ಹೇಳಬಹುದಿತ್ತಲ್ಲ ...?

ಈಗಿನ ಪರಿಸ್ಥಿತಿಯಲ್ಲಿ ಶ್ರೀ ಕೃಷ್ಣ ಪ್ರತ್ಯಕ್ಷ ಭೇಟಿ ಆಗುವದು ಅಸಾಧ್ಯ ಎಂದು ಈ ಪ್ರಶ್ನೆಯನ್ನು ಇಂಟರ್ನೆಟ್ ಮಾಧ್ಯಮದಲ್ಲಿ ಕಳುಹಿಸಿದೆ.

ನೋಡು ನೋಡುತ್ತಲೇ....

ಈ ಪ್ರಶ್ನೆ ತುಂಬಾನೇ ವೈರಲ್ ಆಯಿತು..

ಫೇಸ್ ಬುಕ್, ವಾಟ್ಸಪ್, ಯೂ ಟ್ಯೂಬ್... ಇತ್ಯಾದಿಗಳಲ್ಲಿ ಹರಿದಾಡಿತು.

ಇಷ್ಟೊಂದು ಮಾಧ್ಯಮಗಳಲ್ಲಿ ಹರಿದಾಡಿ ಕೊನೆಗೆ ಶ್ರೀ ಕೃಷ್ಣನ ಮೊಬೈಲ್ ಗೂ ತಲುಪಿತು..

ಒಂದು ದಿನ. ಶ್ರೀ ಕೃಷ್ಣನ ವೀಡಿಯೋ ಕಾಲ್ ನನಗೆ ಬಂದಿತು.

ಉಪೇಂದ್ರ ಹಾಗೂ ಸುದೀಪ್ ಅವರ ಮುಕುಂದ ಮುರಾರಿ ಸಿನೆಮಾ ನೋಡಿದ್ದರ ಪರಿಣಾಮವಾಗಿ, ನನಗೆ ಖಾತ್ರಿಯಾಗಿ ಗೊತ್ತಿತ್ತು.. ಶ್ರೀ ಕೃಷ್ಣ ಒಬ್ಬ ಸಿಂಪಲ್ ಮಾನವ ರೂಪ ಧರಿಸಿ ನನಗೆ ಭೇಟಿ ಆಗುವನೆಂದು..

ಇನ್ನು ವೈಕುಂಠ ದಿಂದ ಭೂಲೋಕಕ್ಕೆ ಕಾಲ್ ಮಾಡಿದ್ದಾನೆ.. ತುಂಬಾನೇ ದೂರ.ಬಹು ಬೇಗನೆ ಡೇಟಾ ಖರ್ಚು ಆಗಬಹುದೆಂದು.. ಶ್ರೀ ಕೃಷ್ಣ.. ನೇರವಾಗಿ ಮುಖ್ಯ ವಿಷಯಕ್ಕೆ ಬಂದ

ವತ್ಸ.ಏಕೆ..ಇಷ್ಟೊಂದು ಕಠಿಣ ಪ್ರಶ್ನೆ ಕೇಳಿದಿ..?

ಎಲ್ಲ ನೆಟ್ವರ್ಕ್ ಜಾಮ್ ಆಗಿವೆ..

ನಾನೆಂದೆ... ದೇವಾ.. ಇದೇನು..? ಹೀಗೆ ಕೇಳು ತಿದ್ದಿ..?

ನೀನು ಇದೇ ಉಪದೇಶವನ್ನು ಕೌರವ ರಿಗೆ ತಿಳಿಸಿ ಹೇಳಿ ದ್ದರೆ.. ಈ ಯುದ್ಧವನ್ನೇ ತಪ್ಪಿಸಿ ಬಹುದಾಗಿತ್ತು.. ಅಲ್ಲವೇ ಕೃಷ್ಣಾ..?

ನಾ.ಕೇಳಿದೆ.

ಮತ್ತೆ ನಾನೇಕೆ ಈ ಪ್ರಶ್ನೆ ಇಂಟರ್ನೆಟ್ ಮೂಲಕ ಕೇಳುತ್ತಿದ್ದೆ..?

ನನಗೆ ಉಪದೇಶ ಮಾಡಬೇಡ... ಕೃಷ್ಣ ಕಠೋರ ಧ್ವನಿಯಿಂದ ಉತ್ತರಿಸಿದ..

ಶ್ರೀ ಕೃಷ್ಣ ನ ಈ ಜೋರು ಧ್ವನಿ ಕೇಳಿ ನಾ ಸ್ವಲ್ಪ ವಿಚಲಿತ ನಾದೆ.

ಹಾಗಲ್ಲ ಕೃಷ್ಣಾ... ನನ್ನದೇನು ತಾಕತ್ತು..?ನಿನಗೆ ಉಪದೇಶ ಮಾಡಲು...?ನಾನು ವಿನಮ್ರತೆ ಯಿಂದ ಕೇಳಿದೆ...

ವತ್ಸ...ನಿನಗೆ ನಾ ಹೇಳಲಿಲ್ಲ ಹಾಗೆ..

ನನಗೆ ಉಪದೇಶ ಮಾಡಬೇಡ... ಎಂದು ದುರ್ಯೋಧನ ನನಗೆ ಹೇಳಿದ... ಕೃಷ್ಣ ನ ಈ ಉತ್ತರ ಕೇಳಿ ಮನಸ್ಸು ತುಸು ಹಗುರವಾಯಿತು.

ನಿನಗೇನು ಅನಿಸುತ್ತದೆ..?

ನಾನು ಈ ಯುದ್ಧ ತಡೆಯಲು ದುರ್ಯೋಧನನ ಹತ್ತಿರ ಹೋಗಲಿಲ್ಲವೆ..?

ಗೀತೆಯಲ್ಲಿಯ ನ್ಯಾಯ, ಅನ್ಯಾಯ,ನೈತಿಕತೆ ಬಗ್ಗೆ ದುರ್ಯೋಧನನಿಗೆ ತಿಳಿಸಿ ಹೇಳಲಿಲ್ಲ ವೇನು...?

ಅವನಿಗೂ ತಿಳಿಸಿ ಹೇಳಿದೆ..

ಅವನು ಗರ್ವದಿಂದ ಹೇಳಿದ...

ಕೃಷ್ಣಾ.. ನನಗೆ ಗೊತ್ತು... ಯಾವುದು ನ್ಯಾಯ, ಯಾವುದು ಅನ್ಯಾಯ ಎಂದು...ನೀನು ನನಗೆ ಇದರ ಉಪದೇಶ ಮಾಡಬೇಡ..

ವತ್ಸ... ಪಾಪ ಪುಣ್ಯ ಏನೆಂದು ದುರ್ಯೋಧನನಿಗೆ ಏಕೆ.. ನಿಮಗೂ ಗೊತ್ತಿದೆ..ಆದರೆ ಅದರಿಂದ ದೂರ ಇರಲು ನಿಮ್ಮಿಂದ ಸಾಧ್ಯವೇ...?

ಅನೈತಿಕತೆ ಅಂದರೆ ಏನು...ಇದು ದುರ್ಯೋಧನನಿಗೂ ಗೊತ್ತು, ನಿಮಗೂ ಗೊತ್ತಿದೆ..

ಆದರೆ ಇದನ್ನು ತಪ್ಪಿಸಬಹುದೇ...?

ನಿಮಗೂ ಗೊತ್ತಿದೆ.. ಯಾವುದು ಸರಿ, ಯಾವುದು ತಪ್ಪು ಎಂದು..

ಆದರೂ ನೀವು ತಪ್ಪು ಮಾರ್ಗವನ್ನೇ ಅನು ಸರಿಸುತ್ತಿರಿ..

ಹೌದು.. ಶ್ರೀ ಕೃಷ್ಣ ಹೇಳಿದ್ದು ನಿಜ..

ಈಗ ನನಗೆ ದುರ್ಯೋಧನನ ಬದಲಾಗಿ ನನ್ನ ಚೆಹರೆ ಕಾಣಿಸುತಿತ್ತು..

ನನಗೇನು ಕಲಿಸಿಬೇಡಿ.. ಈ ವಾಕ್ಯ ನಾನು ಎಷ್ಟೊಂದು ಸಲ ಅಂದಿರಬೇಕು ನಮ್ಮ ಪೋಷಕರಿಗೆ.

ಸಣ್ಣ ವ ಇದ್ದಾಗ ಅದೆಷ್ಟೋ ತಪ್ಪು ಕೆಲಸ ಮಾಡ್ತಾ ಇದ್ದೆ..

ಮಗೂ.. ನೀ ಮಾಡುತ್ತಿರುವದು ತಪ್ಪೂ.. ಹೀಗಲ್ಲ.. ಹಾಗೆ ಮಾಡು ಎಂದು ಹಿರಿಯರು ಉಪದೇಶ ಮಾಡಿದ್ದಾಗ, ನನ್ನಲ್ಲಿಯ ದುರ್ಯೋಧನ ಜಾಗೃತನಾಗುತಿದ್ದ..

ಅರ್ಜುನ.. ಮತ್ತು ದುರ್ಯೋಧನ ಇವರಲ್ಲಿ ಇದ್ದ ವ್ಯತ್ಯಾಸ ಇಷ್ಟೇ..

ದುರ್ಯೋಧನನಿಗೆ ತಿಳುವಳಿಕೆ ಇದ್ದರೂ ತನ್ನ ದುಷ್ಟ ಗುಣ ಬಿಡಲಿಲ್ಲ.. ಅರ್ಜುನ ತನ್ನ ಎಲ್ಲ ನಡುವಳಿಕೆಯನ್ನು ಶ್ರೀ ಕೃಷ್ಣನ ಆದೇಶದಂತೆ ಪಾಲಿಸಿದ..

ಸಂಸ್ಕಾರ, ಪ್ರಕೃತಿ, ಸಿಟ್ಟು, ದ್ವೇಷ, ಪ್ರೀತಿ ಪ್ರೇಮ , ಕರ್ಮ.. ಇವು ಎಲ್ಲರ ಬಗ್ಗೆ ಚೆನ್ನಾಗಿ ಅರ್ಥ ಮಾಡಿ ಕೊಳ್ಳಿ..

ಎಂದಾದರೂ ನಿಮ್ಮೊಳಗಿನ ಕೃಷ್ಣನಿಗೆ ಪ್ರಶ್ನಿಸಿ..

ಹಾಗಾದರೆ ಮಾತ್ರ, ಭಗವತ ಗೀತೆ ಓದುವ ಪ್ರವೃತ್ತಿ ಬೆಳೆಯುವದು..

ಇಲ್ಲದಿದ್ದರೆ ನಮ್ಮೊಳಗಿನ ಕೌರವ ಜಾಗೃತನಾಗುತ್ತಾನೆ.

ಆ ಇಚ್ಛೆಯೇ .. ಅದೇ ಸೂರ್ಯೋದಯ ಜ್ಞಾನ...

ಇನ್ನೂ... ಈಗಲಂತೂ ನಾನು ಕೌರವನೆ..101ನೆಯ ಕೌರವ..

ಮತ್ತೆ...ನೀವು...?

**–ಡಾ. ಉದಯ ಪಾಟೀಲ, ನೇತ್ರ ತಜ್ಞರು, ಕಲಬುರ್ಗಿ.**

ಕರುನಾಡ ಕಂದ
ಸಂಪುಟ–1 । ಸಂಚಿಕೆ–4
ದಿನಾಂಕ: 16–12–2021 । ಪುಟಗಳು: 16

# ಮುಧೋಳದ ಯುವ ಪ್ರತಿಭೆ ಪವನ ಕುಲಕರ್ಣಿ (ಲೇಖನ)



ಪವನ ಕುಲಕರ್ಣಿ ಎಂದರೆ ಯಾರಿಗೂ ತಿಳಿಯದಿಲ್ಲ 'ಉಡಾಳ ಪವ್ಯಾ' ಎಂದರೇ ಥಟ್ಟನೆ ಎಲ್ಲರ ತುಟಿಯಲ್ಲು ನಗು ಮೂಡತ್ತದೆ. ಇತ್ತೀಚಿನ ಟ್ರೆಂಡ್ ಆದ ಇನಸ್ಟಾಗ್ರಾಂ ನಲ್ಲಿ ಕ್ರಿಯೇಟಿವ್ ಕಾಮಿಡಿ ವಿಡಿಯೋಗಳ ಮೂಲಕ ಲಕ್ಷಾಂತರ ಫಾಲೋವರ್ಸ್ ಹೊಂದಿದ್ದಾನೆ ಈ ಮುಧೋಳದ ಯುವಕ.

ಇತನ ಕಾಮಿಡಿ ವಿಡಿಯೋಗಳೆ 'ಭೇಶ್' ಎಂಬ ಸುರಿಮಳೆ ಪ್ರತಿನಿತ್ಯ ಸಾವಿರಾರು ಸಂಖ್ಯೆಯಲ್ಲಿ ಕಾಮೆಂಟ್ ಮೂಲಕ ಬರುತ್ತವೆ. ಸಣ್ಣ ಪುಟ್ಟ ವಿಷಯಗಳನ್ನು ಅತ್ಯಂತ ಮನೋಜ್ಞವಾದ ಹಾಸ್ಯದ ಮೂಲಕ ಹೇಳುವ ಪವನ ಕುಲಕರ್ಣಿ ಈಗ ಕರ್ನಾಟಕದಾದ್ಯಂತ ಮನೆಮಾತಾಗಿದ್ದಾನೆ.. ಇವರ ಸಾಕಷ್ಟು ಕಾಮಿಡಿ ವಿಡಿಯೋಗಳು ನೀರಿನಂತೆ ಶೇರ ಆಗುತ್ತವೆ. ಇವರ ಅಭಿನಯ ಗಂಭೀರ ಸ್ವಭಾವ ಉಳ್ಳವರ ತುಟಿಯೂ ಅರಳಿಸುವಂತೆ ಮಾಡುತ್ತದೆ.

ಪವನ ಕುಲಕರ್ಣಿ ಹುಟ್ಟಿದ್ದು, ಬೆಳೆದಿದ್ದು ಈಗ ಇರೋದು ಬಾಗಲಕೋಟ ಜಿಲ್ಲೆಯ ಮುಧೋಳದಲ್ಲಿ. ಇವರ ತಂದೆ ಖ್ಯಾತ ವಕೀಲರಾದ ಕೃಷ್ಣ ವಸಂತ ಕುಲಕರ್ಣಿ. ಪವನಗೆ ಅಭಿನಯದ ಕಲೆಯು ಅವರ ತಂದೆಯಿಂದಲೇ ಬಳುವಳಿಯಾಗಿ ಬಂದಿರುವಂತಹದು. ಕೃಷ್ಣ ವಸಂತ ಕುಲಕರ್ಣಿ ನಾಟಕ ಕಲಾವಿದರು, ಚಿತ್ರನಟರು ಹಾಗೂ ಅದ್ಭುತ ಗಾಯಕರು... ತಂದೆಯಂತೆ ಪವನ ಸಹ ಕಲಾವಿದನಾಗಿ ಹಾಸ್ಯ ವಿಡಿಯೋಗಳ ಮೂಲಕ ಇಂದು ರಾಜ್ಯಾದ್ಯಂತ ಪರಿಚಿತನಾಗಿದ್ದಾನೆ. ಇದರ ಜೊತೆಗೆ ತಂದೆಯಂತೆ ವಕೀಲ ವೃತ್ತಿ ಮಾಡಬಯಸುವ ಪವನ ಸದ್ಯ ಎಲ್ ಎಲ್ ಬಿ ಓದುತ್ತಿದ್ದಾನೆ.

ಅರಳು ಹುರಿದಂತೆ ಮಾತಾಡುವ ಉತ್ತರ ಕರ್ನಾಟಕ ಮುಧೋಳದ ಈ ಪ್ರತಿಭೆ ರಾಜ್ಯಾದ್ಯಂತ ಗುರುತಿಸಿಕೊಳ್ಳುತ್ತಿರುವುದು ವಿಜಯಪುರ–ಬಾಗಲಕೋಟ ಭಾಗಕ್ಕೆ ಹೆಮ್ಮೆಯೇ ಸರಿ. ಇವನ ಜನಪ್ರಿಯ ಕಂಡು

ಅನೇಕ ಚಲನಚಿತ್ರಗಳು ಪವನ ಇನಸ್ಟಾಗ್ರಾಂ ಪೇಜ್ ಮೂಲಕ ತಮ್ಮ ಚಿತ್ರದ ಪ್ರಮೋಷನ್ ಮಾಡುತ್ತಿವೆ..ಮುಂದೊಂದು ದಿನ ಗಂಗಾವತಿ ಪ್ರಾಣೇಶರಂತೆ ಪವನ ಕುಲಕರ್ಣಿ ದೊಡ್ಡಮಟ್ಟದ ಹಾಸ್ಯ ಮಾತುಗಾರ ಆಗುವುದರಲ್ಲಿ ಯಾವ ಸಂಶಯವಿಲ್ಲ.

**–– ಶ್ರೀರಂಗ ಪುರಾಣಿಕ, ವಿಜಯಪುರ**

## ಕನ್ನಡದ ದೀಪ ನಾ ಆಗಬೇಕು.!

ನಾ ಸತ್ತಮೇಲೆ.!
ಸಿಗಲಿ ಸ್ವಲ್ಪ ಬೆಲೆ.
ಆಗ ಸಿಗುವುದು ಈ ಉಸಿರಿಗೆ ನೆಲೆ.
ಈ ಜೀವಾ ಹೋದರು
ಒಂದು ಜೀವಾ ನಗಬೇಕು
ಈ ದೇಹ ಮಣ್ಣಾದರು
ಒಂದು ದೇಹದಕ್ಕೆ ಮಾರ್ಗವಾಗ ಬೇಕು
ಈ ಉಸಿರು ನಿಂ ತರು
ಮತ್ತೊಂದು ಉಸಿರಲ್ಲಿ ಹೆಸರಾಗಿ
ಉಳಿಯಬೇಕು
ಈ ಕಣ್ಣು ಮುಚ್ಚಿದರು
ಮತ್ತೋಂದು ಮುಖದಲ್ಲಿ ಬೆಳಕಾಗ ಬೇಕು
ನಾನು ಸತ್ತರೂ
ನನ್ನ ಕಿರು ನಗೆ ಸಾಯುವುದಿಲ್ಲ
ನಾನು ಸತ್ತರೂ
ನನ್ನ ಹೆಸರು ಸಾಯುವುದಿಲ್ಲ
ನಾನು ಸತ್ತರೂ
ನನ್ನ ಭಾವ ಕಲ್ಪನೆ ಕಾವ್ಯ ಸಾಯುವುದಿಲ್ಲ
ನಾನು ಅಲ್ಲ ನೀನು
ನನ್ನವರು ಯಾರು ಇಲ್ಲ
ಇಂದು ಇದ್ದು ನಾಳೆ ಹೋಗುವೆ
ನನ್ನದು ಅಲ್ಲ ನಿನ್ನದು
ನನ್ನದೆಂದು ಇಲ್ಲಿ ಏನೂ ಇಲ್ಲ
ಅದಕ್ಕೆ ನಾ ನಗುತ್ತಾ ನಿಮ್ಮನ್ನು ತೊರೆದು ಸಾಗುವೆ
ಸ್ವರ್ಗವೇ ಈ ಕನ್ನಡ ನಾಡು
ಕಾಣದ ಸ್ವರ್ಗ ಒಂದು ಸುಡುಗಾಡು
ನನ್ನ ಉಸಿರು ಕಲ್ಪತರ ನಾಡು
ಈ ಸಾಹಿತ್ಯಕ್ಕೆ ನಾಚುವುದು ನಾಮ ಚಿಲುಮೆಯ
ಕಾಡು
ಬೇಡ ನನ್ನ ಪ್ರತಿಮೆ
ಸಾಕು ಗುರುತಿಸಿ ಈ ಪ್ರತಿಭೆ
ಬೇಡ ನನ್ನ ನೆನಪಿನ ಪಟ್ಟಣ
ಸಣ್ಣ ಕೂಸಿನಲ್ಲಿ ಇರುವುದು ಈ ಹನಿ ಸಾಹಿತ್ಯ
ಕಣ.
ನಾ ಸತ್ತಮೇಲೆ
ನನ್ನ ನೆನಪನ್ನು ಮರೆತರೆ
ನಾ ಪೂರ್ಣವಾಗಿ ಸಾಯುವೆ
ನಾ ಸತ್ತಮೇಲೆ
ನನ್ನ ನೆನಪು ಉಳಿದರೆ
ನಾ ಈ ಕನ್ನಡ ತಾಯಿ ಮಡಿಲು ಸೇರಿ ನಿಮ್ಮಲ್ಲಿ
ನಲಿಯುವೆ , ಮತ್ತೆ ಹುಟ್ಟಿ ಬೆಳೆಯುವೆ.

–ಕವಿ ಕಾವ್ಯ ಕಲ್ಪನೆ ಹನಿ

## ಗಜಲ್

ಎದೆಗಡಲಿಗೆ ಕೈಹಾಕಿ ಒಲವ ಕಲಕದಿರಿ ಹೀಗೆ ।
ಒಡಲಿರಿದ ಗಾಯಕ್ಕೆ ಉಪ್ಪು ಸವರದಿರಿ ಹೀಗೆ ॥
ಮೊಗ್ಗು ಪಕಳೆಯೊಡೆದಾಗ ನವಿರು ಭಾವಗಳದ್ದೇ
ಹಾವಳಿ ।
ಇದ್ದರೆ ಇರಲಿ, ಹೂಗನಸುಗಳ ಹೊಸಕದಿರಿ ಹೀಗೆ ॥
ಹಗಲ ಬಾನಿಗೆ ವಿಶಾಲ ಬಾಹುಗಳಿವೆಯಲ್ಲಿ ।
ಮರಿ ಹಕ್ಕಿಯ ಎಳೆರೆಕ್ಕೆಗಳ ಕತ್ತರಿಸದಿರಿ ಹೀಗೆ ॥
ಮೊಹಬ್ಬತ್ತಿನ ಬೆಳಕಿಗೆ ಒಂದೇ ಬಣ್ಣವಿದೆ ಇಂದಿಗೂ ।
ಕಪ್ಪು ಗಣ್ಣಿನ ಶೀಟೆಗೆ ಕಾರಣಗಳ ಹುಡುಕದಿರಿ ಹೀಗೆ ॥
ಚಿನ್ನದ ಒರೆಯಿಂದ ಬಂದರೂ ಕತ್ತಿ ನೆತ್ತರನ್ನೇ
ಕುಡಿಯುತ್ತದೆ ।
ಬಿಕ್ಕಳಿಸುವ ಗೋರಿಯ ಮೇಲೆ ಪಡಿಗಲ್ಲು
ಎಳೆಯದಿರಿ ಹೀಗೆ ॥

~ ಶ್ರೀಶ ಹುಟಗಿ ಸಾ=ಹಿರೇಪಡಸಲಗಿ

## "ಬಾನಲ್ಲಿ ಬಂಗಾರದ ಅಂಗಡಿ"

ಬಾನಾಡಿನಲ್ಲಿ ಒಂದು
ಬಂಗಾರದಂಗಡಿ ,
ಹೊಳೆಯುತ್ತಾವೆ ಚಂದ್ರನಗರದಲ್ಲಿ
ವಜ್ರದರಳುಗಳು.

ಕಣ್ಣಿಗೆ ಕಾಣುವ, ಕೈಗೆಟುಕದ
ವಿವಿಧಕಾರದ ಒಡವೆಗಳವೆ,
ರಾಶಿ ರಾಶಿ ಶಶಿಯಂಗಳದಲ್ಲಿ
ಬೆಳ್ಳಿ ಬೆಳದಿಂಗಳಾಗಿ ಮಿನುಗುತ್ತಿವೆ.

ಆಗಸದೂರಿನ ಪಯಣಕ್ಕೆ
ಹೋಗುವುದಿಲ್ಲ ಯಾವ ವಾಹನವು.
ಕೊಳ್ಳಲು ಸಾಧ್ಯವಿಲ್ಲ ನರಮಾನವನು ,
ನಗುವ ಐಶ್ವರ್ಯ ತಾರೆಗಳು ಎಂದೆಂದಿಗೂ
ಶಾಶ್ವತವು.

–ರಾಧ ಅಪರಂಜಿ.

# ಸಂಯಮದ ಜೀವನ ನಡೆಸಿ : ಎಸ್ ಜಿ ಸಲಗೆರೆ



ಗದಗ: 04/12/21 "ಎಚ್‌ಐವಿ' ಸೋಂಕಿನಿಂದ ಸಮಾಜವನ್ನು ಮುಕ್ತವಾಗಿಸಲು ಜನರು ದುಶ್ಚಟಗಳನ್ನು ಬಿಟ್ಟು, ಜಾಗೃತಿ ಹಾಗೂ ಸಂಯಮದ ಜೀವನ ನಡೆಸಬೇಕು' ಎಂದು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಎಸ್ ಜಿ ಸಲಗೆರೆ ಹೇಳಿದರು.

ಜಿಲ್ಲಾ ಪಂಚಾಯ್ತಿ ಸಭಾಂಗಣದಲ್ಲಿ ಬುಧವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯ್ತಿ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಜಿಲ್ಲಾ ಏಡ್ಸ್ ತಡೆಗಟ್ಟುವಿಕೆ ಮತ್ತು ನಿಯಂತ್ರಣ ಘಟಕದ ವತಿಯಿಂದ ನಡೆದ ವಿಶ್ವ ಏಡ್ಸ್ ದಿನ ಉದ್ಘಾಟಿಸಿ ಅವರು ಮಾತನಾಡಿದರು.

'ಅಸುರಕ್ಷಿತ ಲೈಂಗಿಕ ಸಂಪರ್ಕ, ಸೋಂಕಿತ ವ್ಯಕ್ತಿಯ ರಕ್ತವನ್ನು ಮತ್ತೊಬ್ಬರಿಗೆ ಹಾಕುವುದರಿಂದ, ಸೋಂಕಿತ ವ್ಯಕ್ತಿಯ ಸಿರಿಂಜ್ ಬಳಸುವುದರಿಂದ ಎಚ್‌ಐವಿ ಹರಡುತ್ತದೆ. ವಿಶ್ವ ಏಡ್ಸ್ ದಿನವನ್ನು ಪ್ರತಿ ವರ್ಷ ಡಿ. 1ರಂದು ಆಚರಿಸಲಾಗುತ್ತಿದ್ದು, ಎಚ್‌ಐವಿ ಸೋಂಕು ತಡೆಗಟ್ಟುವುದು ಈ ಕಾರ್ಯಕ್ರಮದ ಉದ್ದೇಶವಾಗಿದೆ' ಎಂದು ಹೇಳಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಜಿಲ್ಲಾ ಏಡ್ಸ್ ನಿಯಂತ್ರಣಾಧಿಕಾರಿ ಡಾ. ಅರುಂಧತಿ ಕೆ, 'ಎಚ್‌ಐವಿ ಸೋಂಕು ಹರಡುವುದನ್ನು ತಡೆಗಟ್ಟುವುದು ಹಾಗೂ ಸೋಂಕು ಪ್ರಮಾಣವನ್ನು ಸೊನ್ನೆಗೆ ತರುವುದು, ಎಚ್‌ಐವಿ ಬಾಧಿತರಿಗೆ ಆರೈಕೆ ಮಾಡುವುದು ಈ ಕಾರ್ಯಕ್ರಮದ ಪ್ರಮುಖ ಉದ್ದೇಶಗಳಾಗಿವೆ. ಇಲಾಖೆಯಿಂದ ಎಚ್‌ಐವಿ ತಪಾಸಣೆ, ಆಪ್ತ ಸಮಾಲೋಚನೆ, ಚಿಕಿತ್ಸೆ ನಿರಂತರವಾಗಿ ನಡೆದಿದೆ' ಎಂದರು.

ಜಿಮ್ಸ್ ಸಮುದಾಯ ಆರೋಗ್ಯ ವಿಭಾಗದ ಡಾ. ಅರವಿಂದ ಕರಿನಾಗಣ್ಣವರ ಅವರು ಎಚ್‌ಐವಿ, ಏಡ್ಸ್ ರೋಗ ಬರಲು ಕಾರಣ ಹಾಗೂ ತಡೆಗಟ್ಟಲು ಕೈಗೊಳ್ಳಬಹುದಾದ ಕ್ರಮಗಳ ಕುರಿತು ಉಪನ್ಯಾಸ ನೀಡಿದರು. ವಿರೂಪಾಕ್ಷಪ್ಪ ಗೊರನ್ನವರ ಹಾಗೂ ಕಲಾ ತಂಡದವರಿಂದ ಏಡ್ಸ್ ನಿಯಂತ್ರಣ ಕು–ರಿತು ಅರಿವು ಮೂಡಿಸುವ ಜಾನಪದ ಗೀತೆಗಳನ್ನು ಪ್ರಸ್ತುತಪಡಿಸಲಾಯಿತು.

ಎಚ್‌ಐವಿ ಸಮುದಾಯಕ್ಕೆ ಬೆಂಬಲ ನೀಡಿದ ಸಂಘ ಸಂಸ್ಥೆಗಳು ಹಾಗೂ ಎಚ್‌ಐವಿ ನಿಯಂತ್ರಣದಲ್ಲಿ ಅತ್ಯುತ್ತಮವಾಗಿ ಕಾರ್ಯನಿರ್ವಹಿಸಿದ ಇಲಾಖೆ ಸಿಬ್ಬಂದಿಯನ್ನು ಸನ್ಮಾನಿಸಲಾಯಿತು.

ಡಾ. ವಿ.ಎಚ್. ಕೊಳ್ಳಿ , ಎಆರ್‌ಟಿ ವೈದ್ಯಾಧಿಕಾರಿ ಮಹ್ಮದ್ ಆಶ್ರಫ್, ಐಎಂಎ ಅಧ್ಯಕ್ಷ ಡಾ. ಪ್ಯಾರಾಅಲಿ ನೂರಾನಿ, ರೂಪಸೇನ ಚವ್ಹಾಣ, ಉಮೇಶ ಕರಮುಡಿ, ಗೀತಾ ಕಾಂಬಳೆ, ನರ್ಸಿಂಗ್ ವಿದ್ಯಾರ್ಥಿಗಳು, ಆರೋಗ್ಯ ಇಲಾಖೆ ಅಧಿಕಾರಿಗಳು, ಸಿಬ್ಬಂದಿ, ಸಂಘ ಸಂಸ್ಥೆಯ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಜಿಲ್ಲಾ ಐಸಿಟಿಸಿ ಮೇಲ್ವಿಚಾರಕ ಬಿ.ಬಿ. ಲಾಳಗಟ್ಟಿ ಸ್ವಾಗತಿಸಿ, ವಂದಿಸಿದರು.

"ಉಚಿತ ಕಾನೂನು ಸಲಹೆ"

'ಎಚ್‌ಐವಿ ಪೀಡಿತರಿಗೆ ಸರ್ಕಾರವು ಉಚಿತ ಕಾನೂನು ಸಲಹೆ ನೀಡುತ್ತಿದೆ' ಎಂದು ಎಸ್.ಜಿ. ಸಲಗರೆ ಹೇಳಿದರು.

'ಎಚ್‌ಐವಿ ಸೋಂಕಿತರು ಸ್ವಂತ ಉದ್ಯೋಗ ಮಾಡಲು ಸರ್ಕಾರವು ಸಬ್ಸಿಡಿ ನೀಡುತ್ತಿದೆ. ರೋಗ ಪರಿಹರಿಸುವುದಕ್ಕೆ ಗಮನ ಕೊಡುವುದರ ಬದಲು ರೋಗ ಬರದಂತೆ ಮುಂಜಾಗ್ರತೆ ವಹಿಸುವುದು ಮುಖ್ಯ, ಎಚ್‌ಐವಿ ಸೋಂಕು ತಡೆಗಟ್ಟುವ ಕುರಿತು ಅರಿವು ಮೂಡಿಸುವ ಹೆಚ್ಚಿನ ಕಾರ್ಯಕ್ರಮಗಳಾಗಬೇಕು' ಎಂದು ಹೇಳಿದರು.

ವಿವಿಧ ಇಲಾಖೆಗಳು, ಸಂಘ ಸಂಸ್ಥೆಗಳ ಸಹಕಾರ, ಸಹಭಾಗಿತ್ವ ಹಾಗೂ ಸೂಕ್ತ ತಪಾಸಣೆ ನಡೆಸುತ್ತಿರುವುದರಿಂದ ಎಚ್‌ಐವಿ ಸೋಂಕಿನ ಪ್ರಮಾಣ ಇಳಿಮುಖವಾಗಿದೆ

ಡಾ. ಅರುಂಧತಿ ಕೆ, ಜಿಲ್ಲಾ ಏಡ್ಸ್ ನಿಯಂತ್ರಣಾಧಿಕಾರಿ ಇವರು ತಿಳಿಸಿದರು

**– ಮಹಾಂತೇಶ್ ಕಾಳಗಿ**



ಯಾದಗಿರಿ ಜಿಲ್ಲೆಯ ಸುರಪುರ ತಾಲ್ಲೂಕಿನ ದೇವಪುರ ಕ್ರಾಸ್ ನಿಂದ ಶೆಳ್ಳಗಿ ಮತ್ತು ಮುಷ್ಠಹಳ್ಳಿಯ ರಸ್ತೆಯು ಹದಗೆಟ್ಟು ಹೋಗಿದೆ ಸಾರ್ವಜನಿಕರು ತಿರುಗಾಡಲು ಬಹಳ ತೊಂದರೆ ಆಗಿದೆ ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಈ ಬಗ್ಗೆ ಗಮನ ಹರಿಸಲು ಸಾರ್ವಜನಿಕರು ಆಗ್ರಸಿದ್ದಾರೆ **– ದೇವಣ್ಣ ಮಾಲಿಪಾಟೀಲ್**

ಕರುನಾಡ ಕಂದ
ಸಂಪುಟ–1 । ಸಂಚಿಕೆ–4
ದಿನಾಂಕ: 16–12–2021 । ಪುಟಗಳು: 16

## ಜ್ಞಾನ ಸೂರ್ಯ

ಹೊತ್ತಿಗೆ ಹೊತ್ತು ಹೊತ್ತು ತರುತಿದೆ
ಜ್ಞಾನದ ದೀವಿಗೆ
ಬದುಕು ತರುತ್ತಿದೆ ತರುತ್ತಿದೆ
ಏಳಿಗೆಯ ಜೋತಿ  ಬೆಳಗಲೂ
ಅಂದಾಕರ ಓಡುತ್ತಿದೆ ಓಡುತ್ತಿದೆ
ಜ್ಞಾನ ಅಕ್ಷರ ಹುಡುಕಲೂ
ಹುಡುಕವ ಆಟ ಜೀವನದ ಪಾಠ ಎರಡು
ಒಂದೆ ಬಾಳಿನ ಕನ್ನಡಿಗರ ನೋಟ
ಹೊತ್ತಿಗೆ ಹೊತ್ತು ಹೊತ್ತು ತರುತಿದೆ
ಜ್ಞಾನದ ದೀವಿಗೆ
ಜ್ಞಾನ ಸೂರ್ಯ ಮೂಡಿ ಬಂದಾನ
ದಲಿತರೆಂದು ಗುರುತಿಸ್ಯಾರೋ
ಛಿ ಥೂ ಅನಸಿಕೊಂಡು
ಮಹಾನ್ ಚೇತನರಾಗ್ಯಾರೋ
ಓದು ಇಲ್ಲದ ಬಾಳಿಲ್ಲ ಅಂದಾರೋ
ಓದಿನ ಮರ್ಮ ತಿಳಿದು ನಡಿರೋ ಸಂದೇಶ
ಮೋಳಗ್ಯಾರೋ
ಅವರೆ ಅವರೂ ನಮ್ಮ ಸಂವಿಧಾನ ಶಿಲ್ಪಿ..
ಹೊತ್ತಿಗೆ ಹೊತ್ತು ಹೊತ್ತು ತರುತಿದೆ
ಜ್ಞಾನದ ದೀವಿಗೆ
ನಿಂದಕರೂ ಇರಬೇಕು ಹಂದಿಹಂಗ
ತಿಳಿದೋ ನಡಿಬೇಕು
ಅವಮಾನ ಅಮಾನವೆ ಸರಿಸಾಟಿಲ್ಲಾ
ಹೊತ್ತಿಗೆ ಹೊತ್ತ  ಸಾಮಾನ್ಯರು
ತಿಳಿದು ನಡದಾರಾ
ಬಾಬಾಸಾಹೇಬರ್ ತಿಳುದು ನಡದಿದ್ದಿರಾ
ಹೀಗಾ ಇರತಿರಲಿಲ್ಲಾ ಜನ
ಹೊತ್ತಿಗೆ ಹೊತ್ತು ತರುತಿದೆ ಬುದ್ಧ ಬಸವ
ಅಂಬೇಡ್ಕರ್ ಅವರ ಜ್ಞಾನದ ದೀವಿಗೆ ಎಲ್ಲಡೆಯೂ
ಹೊತ್ತಿಗೆ ಹೊತ್ತು ಹೊತ್ತು ತರುತಿದೆ
ಜ್ಞಾನದ ದೀವಿಗೆ
ಜೀವವಿಲ್ಲದವರಿಗೆ ಜೀವ ನೀಡಿತೂ
ಕಚ್ಚಾಡುವವರನೂ ಬುದ್ಧಿ ಕಲಸಿತ್ತೂ
ಏಕತೆಯಲ್ಲಿ ಐಕ್ಯತೆ ಪಾಠ ಕಲಿಸುವಲ್ಲಿ
ಜ್ಞಾನದ ಜೋತಿ ಸರ್ವೋದಯವಾಗಿತೂ
ಭೂಮಿ ಇರುವವರಿಗೆ ಜ್ಞಾನ ಸೂರ್ಯ
ಹೊತ್ತಿಗೆ ಹೊತ್ತು ಹೊತ್ತು ನಿಂತಾರೋ......

**–ಡಾ.ಶೀಲಾದೇವಿ ಎಸ್.ಬಿರಾದಾರ, ಕನ್ನಡ ಅತಿಥಿ ಉಪನ್ಯಾಸಕಿ ಎಸ್.ಎಸ್.ಮರಗೋಳ ಪದವಿಮಹಾವಿದ್ಯಾಲಯ, ಶಹಾಬಾದ**

## ಅಸಹಾಯ(ಅವಶ್ಯ)ಕತೆ

ಹಾದರದ ಚಾದರದ ಒಳಗೆ
ಬಿಸಿ ಕೆಂಡವಿದೆ...
ಮುದುರಿದ ಹಾಸಿಗೆಯಲ್ಲಿ
ಚೆದುರಿದ, ಕೈಗೂಡದ
ಕನಸುಗಳ ಜೊತೆಗೆ
ಅನಿವಾರ್ಯತೆಯ ಕಸಿವಿಸಿ ಇದೆ.....

ಬಿಚ್ಚಿಟ್ಟ ಬಟ್ಟೆಯಲ್ಲಿ
ಎದೆಯಗೂಡೊಳು ಬಚ್ಚಿಟ್ಟ
ಒಲ್ಲದ ಮನಸಿದೆ...

ಕಣ್ಣಿಗ್ಗಚ್ಚಿದ ಕಪ್ಪನೂ
ಸೀಳಿ ಚುಚ್ಚುವ
ಕಣ್ಣಿನಾಳದಲಿ ವೇದನೆಯ
ಅಡಗಿಸಿ ನಗುವ ಹುಸಿ ನಗೆಯ
ಮಿಂಚು ಇದೆ....

ಹೊಟ್ಟೆಪಾಡಿಗಾಗಿ ಬೇಕಿಲ್ಲದ
ದಂಧೆಗೆ  ಬಿದ್ದ ಹಲವು
ಹಸಿ ಹಸಿ ಕಥೆಗಳಿವೆ...

ಎಂದೂ ಆರದ ಕೋಣೆಯ
ಝಗಮಗಿಸುವ ದೀಪಗಳಲಿ
ಎಂದೋ ಆರಿಹೋದ ಬೆಳಕಿನ
ಕಾರ್ಗತ್ತಲ ಬದುಕಿನ ವ್ಯಂಗ್ಯ
ಕೇಕೇ ಹಾಕಿ ನಗುತಿದೆ....

***ವೇದಾ ಅವಿನಾಶ್* ದಾವಣಗೆರೆ**

# ಹದಿನೆಂಟು ಹುತಾತ್ಮರ ನೆಲ ಕೋಗನೂರು



ಗದಗ ಬ್ರಿಟಿಷ್ ಆಡಳಿತದಿಂದ ದೇಶವನ್ನು ಬಿಡುಗಡೆ ಮಾಡುವ ಸಂಗ್ರಾಮದಲ್ಲಿ ಶಿರಹಟ್ಟಿ ತಾಲೂಕು ಕೋಗನೂರು ಹೆಬ್ಬಾಳ ಅಂಕಲಿ ಹೊಸೂರು ಹಾಲಗಿ ನಾಗರಮಡಿ ಗ್ರಾಮಗಳ ಹೋರಾಟಗಾರರಲ್ಲಿ ಪ್ರಮುಖ 18 ನಾಯಕರ ಕೊಡುಗೆ ಉಲ್ಲೇಖನೀಯ,

ಆಗಿನ ಅವಿಭಾಜಿತ ಧಾರವಾಡ ಜಿಲ್ಲೆಯ (ಈಗಿನ ಹಾವೇರಿ )ಬ್ಯಾಡಗಿ ತಾಲೂಕಿನ ಮೋಟೆಬೆನ್ನೂರು ಗ್ರಾಮದ ಮಾರ್ತಾಂಡಪ್ಪ ಮತ್ತು ಬಸಮ್ಮ ದಂಪತಿಯ ಪುತ್ರ ಮಹದೇವಪ್ಪ ಮೈಲಾರ, ಇವರು 1920 ಗಾಂಧೀಜಿಯವರ ಧಾರವಾಡ ಜಿಲ್ಲೆಗೆ ಆಗಮಿಸಿದಾಗ ಅವರ ಭಾಷಣ ಕೇಳಿ ಪ್ರಭಾವಿತವಾದ ಅವರು ಅಹಿಂದ ತತ್ವ ಅಳವಡಿಸಿಕೊಂಡು ಅದರಂತೆ ಬ್ರಿಟಿಷರೊಂದಿಗೆ ಹೋರಾಡಿದರು,

1930 ರಲ್ಲಿ ನಡೆದ ಉಪ್ಪಿನ ಸತ್ಯಾಗ್ರಹದಲ್ಲಿ ಸ್ವಯಂಪ್ರೇರಿತವಾಗಿ ಕರ್ನಾಟಕದಿಂದ ಪ್ರತಿನಿಧಿಯಾಗಿ ಭಾಗವಹಿಸಲು ಏಕೈಕ ಪ್ರತಿನಿಧಿ ಮೈಲಾರ ಮಹದೇವಪ್ಪ ಎಂಬುವುದು ಹೆಗ್ಗಳಿಕೆ ಆಗ,

ಗಾಂಧೀಜಿಯವರು ನೀನು ಇನ್ನೂ ಚಿಕ್ಕವಯಸ್ಸಿನವದ್ದೀಯ ಬೇಡ ಹೋಗು ಎಂದು ಹೇಳಿದ್ದರಂತೆ, ಆದರೆ ಆ ಮಾತು ಕೇಳದೆ ಸತ್ಯಾಗ್ರಹದಲ್ಲಿ ಭಾಗಿಯಾಗಿದ್ದು, ಆದರೆ ಉತ್ಸಾಹಕ್ಕೆ ಸಾಕ್ಷಿಯಾಗಿತ್ತು, ಸತ್ಯಾಗ್ರಹದಲ್ಲಿ ಬ್ರಿಟಿಷ್ ಅಧಿಕಾರಿಗಳು ಒಂದು ಗೆರೆ ಹಾಕಿ ಅದನ್ನು ಯಾರು ದಾಟಿದಂತೆ ಸೂಚನೆ ನೀಡಿದ್ದರು, ಅದನ್ನು ಬ್ರಿಟಿಷರ ಕಟ್ಟಳೆಯನ್ನು ಮುರಿದ ಕೀರ್ತಿ ಮಹದೇವಪ್ಪನವರಿಗೆ ಸಲ್ಲುತ್ತದೆ,

ಎಂದು ನಿವೃತ್ತ ಶಿಕ್ಷಕ ಹಾಲಪ್ಪ  ಕೆಂಗುಡ್ಡಪ್ಪನವರು , ತಾವು ಕೇಳಿದ ಮಾಹಿತಿಯನ್ನು ಸ್ವಾತಂತ್ರ್ಯ ಭಾರತೀಯರೊಂದಿಗೆ ಸ್ಮರಿಸಿಕೊಂಡಿದ್ದಾರೆ, ಮಹದೇವಪ್ಪ ಮುಖಂಡತ್ವದಲ್ಲಿ ಶಿರಹಟ್ಟಿ ತಾಲೂಕು ಕೋಗನೂರು ಗ್ರಾಮದ ಹದಿನೆಂಟು ಮಂದಿ ಹೋರಾಟಗಾರರನ್ನು ಒಗ್ಗೂಡಿಸಿಕೊಂಡು ಬ್ರಿಟಿಷರ ನೆಲೆಗಳನ್ನು ನಾಶಮಾಡಿದರು, ಬ್ರಿಟಿಷರೊಂದಿಗೆ ಸಂಬಂಧಿಸಿದ ಟಪಾಲುಗಳನ್ನು ಬಸ್ಸಿನಲ್ಲಿ ವರ್ಗಾವಣೆ ಮಾಡುತ್ತಿದ್ದಾಗ ,ಮಾಗಡಿ ಮತ್ತು ಮುಳುಗುಂದ ಮಾರ್ಗ ಮಧ್ಯೆ ಗುಡಿಗೇರಿಯಲ್ಲಿ ತಡೆದು  ಟಪಲ್ ಆ ಮರಣ ಮಾಡುತ್ತಿದ್ದರು, ಎಂದು ತಿಳಿದು ಮಹದೇವಪ್ಪನವರ 18ಮಂದಿ ಹೋರಾಟಗಾರರೊಂದಿಗೆ ಕೋಗನೂರು ಗ್ರಾಮದ

ಸುತ್ತಮುತ್ತಲಿನ ಗ್ರಾಮಗಳಲ್ಲಿ ಬ್ರಿಟಿಷ್ ಹಪ್ತ ವಸೂಲಿ ಮಾಡುತ್ತಿದ್ದ ವೇಳೆ ಕೆಲಸವನ್ನು ಮಾಡುತ್ತಿದ್ದರಂತೆ .ಅಲ್ಲದೆ ಬ್ರಿಟಿಷರಿಗೆ ಸಂಬಂಧಿಸಿದ ಹೊಸರಿತ್ತಿ .ಹೊನ್ನತ್ತಿ ,ಬಿಜ್ಜೂರು, ಬಾಲೆಹೊಸೂರು ಚಾವಡಿಗಳನ್ನು ಹಾನಿ ಮಾಡಿದ್ದಾರೆ, ಹಲವಾರು ಪೊಲೀಸ್ ಸ್ಟೇಷನ್ ಗಳನ್ನು ಸುಟ್ಟುಹಾಕಿದರು ಎಂದು ಮಾಹಿತಿ ನೀಡಿದರು, ಬ್ರಿಟಿಷರ ಸವಾಲಿಗೆ ಅಂಜದ ಮೈಲಾರ ಮಹದೇವಪ್ಪನವರ "ಉಪಟಳಗಳನ್ನು ತಾಳಲಾರದೆ "ಬ್ರಿಟಿಷರು ಹೈರಾಣಿಸಿದ್ದಾರೆ , ಹಾಗಾಗಿ ಇವರನ್ನು ಹೇಗಾದರೂ ಮಾಡಿ ಬಂಧಿಸಬೇಕು ಇಲ್ಲವೇ ಮಾಡಬೇಕು ಎಂಬ ಉದ್ದೇಶದಿಂದ ಕ್ರಿಸ್ತಶಕ 1943 ಎಪ್ರಿಲ್ 1 ರಂದು ಹೊಸರಿತ್ತಿಯ ವೀರಭದ್ರೇಶ್ವರ ದೇವಸ್ಥಾನದಲ್ಲಿ, ಬ್ರಿಟಿಷರು ಹಪ್ತ ವಸೂಲಿ ಮಾಡಿದ ಹಣವನ್ನು ಸಂಗ್ರಹಿಸಿಟ್ಟು, ನಿಜವಾದ ಕನ್ನಡಿಗರಾದರೆ ಹಣವನ್ನು ಅಪಹರಣ ಮಾಡಿ ಎಂದು ಹೇಳಿದರು, ಮೈಲಾರ ಮಹದೇವಪ್ಪ ನವರು ಮತ್ತು ಅವನ ಸಂಗಡಿಗರು ಜೊತೆ ಸೇರಿ ವಸೂಲಿ ಮಾಡಿದ ಹಣವನ್ನು ತೆಗೆದುಕೊಂಡು ಬರುವಾಗ, ಬ್ರಿಟಿಷರು ವೀರಭದ್ರೇಶ್ವರ ದೇವಸ್ಥಾನದ ಒಳಗಡೆ ಗರ್ಭಗುಡಿಯೊಳಗೆ ಪೊಲೀಸರು ಅವಿತುಕೊಂಡು, ಮಾದೇವಪ್ಪ ನವರಿಗೆ ಎದೆ ಗುಂಡಿಗೆಗೆ ಗುಂಡು ಹೊಡೆದರು ಅವನ ಜೊತೆ ಮಡಿವಾಳ ತಿರುಕಪ್ಪ. ವೀರಯ್ಯ ಹಿರೇಮಠ ಇವರು ಬ್ರಿಟಿಷರ ಗುಂಡೇಟಿಗೆ ಬಲಿಯಾದರು,



ಮಹದೇವಪ್ಪನವರ ಮುಂಚೂಣಿ ನಾಯಕರಾಗಿ ಸದಾ ಬೆಳಗುವ ದಾಗಿ ಅವರು ಹೋರಾಟಕ್ಕೆ ಕರೆಕೊಟ್ಟಕ್ಷಣ ಬ್ರಿಟಿಷರಿಗೆ ಎಲ್ಲಾ ಜಾಗಗಳಲ್ಲಿ ಪ್ರತಿನಿಧಿಯಾಗಿ ಒಂದಲ್ಲ ಒಂದು ಪ್ರತಿಭಟನೆ ಧರಣಿ ಮಾಡುತ್ತಾ, ಬಂದವರಲ್ಲಿ ನಿಂಗಪ್ಪ ಕೂರ್ಗುಂದ. ಗೋಣೆಪ್ಪ ಕಮತ್. ಅಡಿವಯ್ಯ ಹಿರೇಮಠ್, ವಿ .ವಿ .ನಾಯಕ್ ಇವರೆಲ್ಲರೂ ಹೆಸರು ಇತಿಹಾಸದ ಪುಟದಲ್ಲಿ ಅಜರಾಮರವಾಗಿ ಉಳಿದಿವೆ ಗ್ರಾಮಗಳ ಸ್ವಾತಂತ್ರ್ಯ ಚಳುವಳಿಗಾರರು ನಿಶಿಮಪ್ಪ  ಚನ್ನೂರು. ವೀರಯ್ಯ ಹಿರೇಮಠ .ಮಡಿವಾಳ ತಿರುಕಪ್ಪ, ಇರಪ್ಪ ಅಂಗಡಿ . ಪಕ್ಕಿರೆಡ್ಡಿ. ಪಕೀರಪ್ಪ ಕೂರ್ಗುಂದ. ಭಗವಂತಪ್ಪ ಬೂದನೂರು .ವಾಸರೆಡ್ಡಿ. ಇವರು ಸಹ ಸ್ವಾತಂತ್ರ್ಯ ತಂದುಕೊಡುವಲ್ಲಿ ಸಲ್ಲಿಸಿದ  ಸೇವೆಯು ಅನನ್ಯ ,

ಎಪ್ರಿಲ್ 1 ರಂದು ಸ್ವಾತಂತ್ರ್ಯ ಹೋರಾಟಗಾರರ ಸ್ಮರಣೆಗಾಗಿ ಪ್ರತಿವರ್ಷ ಕೋಗನೂರು ಗ್ರಾಮಸ್ಥರು .ಕೆಆರ್ಎಸ್ ಪಕ್ಷದ ಮುಖಂಡರು ಹಾಗೂ ಅನೇಕ ವ್ಯಕ್ತಿಗಳು ಸೇರಿ ಹಾವೇರಿ ಜಿಲ್ಲೆಗೆ  ಹೋಗಿ ಹುತಾತ್ಮರ ದಿನವನ್ನು ಹಾವೇರಿಯ ವೀರಸೌಧದಲ್ಲಿ ಕೋಗನೂರು ಗ್ರಾಮಸ್ಥರು,ಮತ್ತು ಮೋಟೆಬೆನ್ನೂರು ಗ್ರಾಮಸ್ಥರು ಕೂಡಿ ಅದ್ದೂರಿಯಾಗಿ ಆಚರಿಸುತ್ತಾ ಬಂದಿದ್ದಾರೆ,

**–ರಾಜು. ಎನ್. ಎಚ್**

# ಶ್ರೀ ಮೈಲಾರಲಿಂಗೇಶ್ವರನ  ಸುಂದರ ಗಾಯನ

ಚೆಲುವು ನೋಡಮ್ಮ ಚೆಲುವು
ನಮ್ಮ ಮೈಲಾರಲಿಂಗನ ಚೆಲುವು
ಸುಂದರ ವದನ ಅರವಿಂದನ ನಯನ
ದೇವಕಿ ಗಂಗೆಯ ಆನಂದನ ಚೆಲವು
ಒಂದು ಕೈಯಲ್ಲಿ ತ್ರಿಶೂಲ ಹಿಡಿದು
ಒಂದು ಕೈಯಲ್ಲಿ ಡಮರುಗ ಹಿಡಿದು
ವೀರ ಮೈಲಾರಲಿಂಗ ನಗುತಲಿ ನಿಂತ
ಹೊಳೆಯ ದಾರಿ ಮೈಲಾರಿ ಮುರಾರಿಯ
ಚೆಲುವು ನೋಡಮ್ಮ ಚೆಲುವು
ಮೈಲಾರನ ಮನಸೆಳೆದ ಪೋರ
ಮೈಲಾರದ ಹರಸಿದ ಆನಂದ ದಾರ
ಮೈಲಾರಲಿಂಗ ನವನೀತ ಚೋರ
ಮೈಲಾರ ನಿಂದ ಶ್ರೀಹರಿ ನಂದ ಕಿಶೋರನ
ಚೆಲುವು
ಅಡಗಿದ ಮೈಲಾರದ ಚಂದನ ದೊಳಗೆ
ಪಡುವಲ ಕಡಲ ಗಂಗೆಯ ದಾಟಿ
ಮೈಲಾರದಲ್ಲಿ ಕೈಗಳ ಸೇರಿ
ಮೈಲಾರದಲ್ಲಿ ಮನೆಯ ಮಾಡಿ
ಉದ್ಭವಲಿಂಗವಾಗಿ ಭಕ್ತರ ಕ್ಷಳ ದಾತ
ಚೆಲುವು ನೋಡಮ್ಮ ಚೆಲುವು
ನಮ್ಮ ಮೈಲಾರಲಿಂಗನ ಚೆಲುವು

**–ರಾಹುಲ್ ಜೆ ಮಡಿವಾಳರ**

## ಸಮತೆ ದೀವಿಗೆ ಬೆಳಗು

ಅಲೆಮಾರಿ ಬದುಕಿನ ಓಟವು
ಬದುಕಿಗೆ ಬಂಡಾಟದ ಕಾಟವು
ನಿತ್ಯ ಹಸಿವಿಗಾಗಿ ಅಲೆದಾಟವು
ಬಂಡ ಬಾಳಬಂಡಿ ತಿರುಗಾಟವು

ಸಾಗಿ ಬಂದಿದೆ ಬದುಕು ನೂಕಲು
ಭುವಿ ಬಾನೇ ಸೂರು ಬಯಲು
ಭಯವಿಲ್ಲಾ ಧೈರ್ಯವೇ ಕಾವಲು!
ಲೆಕ್ಕವಿಲ್ಲಾ ಬಾಳಪಥದ ಸೋಲು

ದೂರದಲ್ಲೊಂದು ಮನೆ ಸೆಳಕು
ದಿಗಂತದ ಸೂಯ9ನ ಬೆಳಕು
ಕಪ್ಪು ಮೋಡುಗಳ ಪವ9ತವು
ಕರಿ ಹೊಲದಿ ಕುದಿಯುವ ಅನ್ನವು

ಕಂದಗ ಬೆಂಕಿಬೆರಗಿನ ಭಯ ಒಳಗೆ
ಊದುಗೊಳವಿ ಊದಿಗೆ ಒಲೆ ಹೊಗೆ
ತುತ್ತಿಗೆ ಬುಟ್ಟಿಯಲಿ ಹಿಟ್ಟು ಕಾಳು
ಬದುಕಿನ ಯಾನದಿ ತಪ್ಪದು ಗೋಳು

ಓ ದೇವರೇ ಅಸಮಾನತೆ ಯಾಕೆ
ಸಿರಿತನ ಬಡತನ ರೇಖೆ ಬೇಕೆ !?
ಎಲ್ಲರನು ಸಮ ತಕ್ಕಡಿಯಲಿ ತೂಗು
ಸಮತೆಯ ದೀವಿಗೆ ಜಗದಿ ಬೆಳಗು .

**–ರತ್ನಾ ಎಂ ಅಂಗಡಿ  ಹುಬ್ಬಳ್ಳಿ**

ಕೆಲಸಕ್ಕೆ ಹೋಗಿ ಮರಳಿ ಬಂದ ಅಮ್ಮನಲ್ಲಿ ಮಗು,ಕೇಳಿತು.
ನಮ್ಮ ಮನೆಯ ಕಪಾಟಿನ ಚಾವಿಯನ್ನು ಯಾಕೆ ಕೆಲಸದವರ ಕೈಯಲ್ಲಿ ಕೊಡ್ತಿಲ್ಲ?
ಅಮ್ಮ:" ಅದನ್ನಲ್ಲಾ ಅವರ ಕೈಯಲ್ಲಿ ಹೇಗೆ ಕೊಡೋದು"?
ಮಗು:"ಹಣ, ಒಡವೆಗಳನ್ನು ಯಾಕೆ ಕೊಡುತಿಲ್ಲ"?
ಅಮ್ಮ:" ಅದನ್ನೆಲ್ಲ ಅವರ ಕೈಯಲ್ಲಿ ಕೊಡಬಾರದು"
ಮಗು:" ATM ಕಾರ್ಡ್ ಯಾಕೆ ಕೊಡುತಿಲ್ಲ"?
ಅಮ್ಮ:" ಅದೆಲ್ಲಾ  ನಮಗೆ ಅತ್ಯಗತ್ಯವಾಗಿ ಬೇಕಾದ ಬೆಲೆ ಬಾಳುವ ವಸ್ತುಗಳು ಇದನ್ನೆಲ್ಲಾ ಕೆಲಸದವರ ಕೈಯಲ್ಲಿ ಕೊಡಬಾರದು"
ಮಗು:" ಹಾಗಾದರೆ ಯಾಕೆ ಅಮ್ಮಾ ನನ್ನನ್ನು ಮಾತ್ರ ಅವರ ಕೈಯಲ್ಲಿ ಕೊಟ್ಟು ಹೋಗ್ತೀಯಾ.. ನನಗೆ ಬೆಲೆ ಇಲ್ಲವೇ? .. ನಾನು ನಿಮಗೆ ಬೇಡದ ವಸ್ತುವೇ.."?
ಅಮ್ಮನಿಂದ ಉತ್ತರವಿಲ್ಲ.... ಕಣ್ಣೀರು ಮಾತ್ರ... !
ಒಂದು ಕ್ಷಣ ಎಲ್ಲರು ಚಿಂತಿಸಬೇಕಾದ ವಿಷಯ ಇದು.

– ಈಶ್ವರ್ ಕೊಳಕಿ, ಬೆಳಗಾವಿ

## ನಗು

ನಗುವೊಂದೆ ಜೀವನದ ಬಂಗಾರದ ಆಭರಣ!
ಇರುವಷ್ಟು ದಿನ ಹಾಕಿಕೊಂಡು ಮೆರೆಯೋಣ!
ಎಲ್ಲರ ಮನಸ್ಸನ್ನು ಮಗುವಾಗಿ ನಗಿಸೋಣ!
ಹೋಗುವಾಗ ನಗೆಹನಿಗಳಲ್ಲಿ ನಮ್ಮ ಚಿತ್ರ ಬಿಡಿಸಿ ಹೋಗೋಣ!
ನೋಡಿದವರ ಮನದಲ್ಲಿ ನೆನಪಾಗಿ ಉಳಿಯೋಣ!

**– ನಳಿನಿ ಬರಬರೆ ಗಜೇಂದ್ರಗಡ**

## ಅಮ್ಮ

ಅಮ್ಮನಿಲ್ಲದ ಜೀವನ
ಸಿಹಿಯೇ ಇಲ್ಲದ ಹೂರಣ,
ಹಸಿರಿಲ್ಲದ ತೋರಣ,
ಇದ್ದರೇನು ಸುಖ ಸಂಪತ್ತು,
ಬರುವುದೇನು ನನ್ನನು ಹೊತ್ತು,
ನೀನೆ ನನ್ನ ಪ್ರೀತಿಯ ಸ್ವತ್ತು,
ನೀ ಜೊತೆಗಿದ್ದರೆ ಬರದು ಆಪತ್ತು,
ನನ್ನ  ಜೀವವಿದು ನಿನ್ನದೆ,
ನಿನ್ನ ಪ್ರೀತಿಯ ಮುಂದೆ ಯಾರಿಲ್ಲ,
ಅಮ್ಮ ಎಂದಿಗೂ ಇದ್ದರೆ ನೀನು ಕಣ್ಮುಂದೆ,
ಜಗತ್ತೆ ನನ್ನ ಬೆನ್ನ  ಹಿಂದೆ.

–ನಳಿನಿ ಬರಬರೆ ಗಜೇಂದ್ರಗಡ

ಕರುನಾಡ ಕಂದ
ಸಂಪುಟ–1 । ಸಂಚಿಕೆ–4
ದಿನಾಂಕ: 16–12–2021 । ಪುಟಗಳು: 16

# ಭಾವೈಕ್ಯ ತಾಣ ಶ್ರೀ ಗೂಳಿ ಬಸವೇಶ್ವರ ದೇವಸ್ಥಾನ ಮುಷ್ಟಹಳ್ಳಿ





ಭಾವೈಕ್ಯ ತಾಣ ಮುಷ್ಠಹಳ್ಳಿ ಗೂಳಿಬಸವೇಶ್ವರ ದೇವಸ್ಥಾನ






ಸುರಪುರ ತಾಲ್ಲೂಕಿನ ಮುಷ್ಟಹಳ್ಳಿ ಗ್ರಾಮ ಭಾವೈಕ್ಯತೆಯ ತಾಣ ಶ್ರೀ ಗೂಳಿ ಬಸವೇಶ್ವರ ದೇವಸ್ಥಾನದಿಂದ ಖ್ಯಾತಿ ಪಡೆದಿದೆ ಧಾರ್ಮಿಕಥೆ ಹಾಸುಹೊಕ್ಕಾಗಿರುವ ಈ ಊರು ಸೌಹಾರ್ದತೆ ನೆಲೆ ಬೀಡಾಗಿದೆ ಜಾತಿಭೇದವಿಲ್ಲದೆ ಎಲ್ಲರೂ ಗೂಳಿ ಬಸವನಿಗೆ ನಡೆದುಕೊಳ್ಳುತ್ತಾರೆ ಸುಮಾರು 150 ವರ್ಷಗಳ ಹಿಂದೆ ಪ್ರತಿಯೊಬ್ಬರು ತಾವು ಅಪಾರವಾಗಿ ನಂಬಿದ ಆ ದೇವರ ಮೇಲೆ ಅನನ್ಯ ಶ್ರದ್ಧೆ ಇಟ್ಟಿದ್ದಾರೆ

ದೇವದುರ್ಗ ತಾಲೂಕಿನ ಜಾಗಟಗಲ್ ಸುಕ್ಷೇತ್ರದ ಮೇಗಿನ ಮಠದ ಶ್ರೀ ಶರಣ ದೊಡ್ಡ ರಾಚ್ಚಯ್ಯಪ್ಪನವರು ಸಂಚಾರ ಮಾಡುತ್ತಾ ಈ ಗ್ರಾಮಕ್ಕೆ ಬರುತ್ತಾರೆ ಇಲ್ಲಿ ಯಾವುದೋ ಒಂದು ದೈವಶಕ್ತಿ ತಮ್ಮನ್ನು ಸೆಳೆಯುತ್ತಿದೆ ಎರಡು ಮೂರು ದಿನ ದಿನ ಗ್ರಾಮದಲ್ಲಿ ನೆಲೆಸುತ್ತಾರೆ

ಶರಣ ದೊಡ್ಡಪ್ಪ ರಾಚ್ಚಯ್ಯಪ್ಪತಾತನವರು ಗ್ರಾಮಸ್ಥರನ್ನು ಕರೆದು ನನಗೆ ಉಂಟಾದ ದೇವ ವಾಣಿಯಂತೆ ನಿಮ್ಮ ಊರಿನ ಗೂಳಿ ಶಿವನ ನಂದಿ ಪ್ರತಿರೂಪವಾಗಿದೆ ಎಂದು ತಿಳಿಸಿದರು ಕೆಲದಿನಗಳಲ್ಲಿ ಅದು ಬೇರೆ ಊರಿನಲ್ಲಿ ಅವಸಾನವಾಗುತ್ತದೆ ನಿಮ್ಮ ಊರಿನಲ್ಲಿ ಅದರ ಸಮಾಧಿ ಮಾಡಿ ದೇಗುಲ ನಿರ್ಮಿಸಿ ನಿತ್ಯ ಪೂಜೆ ಸಲ್ಲಿಸಿ ನಿಮಗೆ ಒಳಿತಾಗುತ್ತದೆ ಗ್ರಾಮ ಧಾರ್ಮಿಕ ಕ್ಷೇತ್ರವಾಗುತ್ತದೆ ಎಂದು ಸಾರುತ್ತಾರೆ ತಾತನವರು ಹೇಳಿದಂತೆ ಕೆಲವು ದಿನಗಳ ಬಳಿಕ ಪಕ್ಕದ ಗ್ರಾಮದಲ್ಲಿ ಮರಣ ಹೊಂದುತ್ತದೆ ಗ್ರಾಮಸ್ಥರನ್ನು ಹೇಳಿದಂತೆ ಊರಿನಲ್ಲಿ ಊಳುತ್ತಾರೆ ಚಿಕ್ಕದೇಗುಲ ನಿರ್ಮಿಸಿ ನಿತ್ಯವೂ ಪೂಜೆ ಭಜನೆ ನಡೆಸುತ್ತ ಬಂದಿದ್ದಾರ ಶರಣ ಶಂಕ್ರಪ್ಪಯ್ಯ ತಾತನವರ

ಅಮೃತ ಹಸ್ತದಿಂದ ಮುಷ್ಟಹಳ್ಳಿ ಗ್ರಾಮ ಭಾವೈಕ್ಯತೆಯ ತಾಣವಾಗಿದೆ ಈ ಗ್ರಾಮಕ್ಕೆ ಇನ್ನೊಂದು ಹೆಸರು ಮರಿ ಜಾಗಟಗಲ್ ಎಂದು ಸಾರಿದ್ದಾರೆ

ಇಲ್ಲಿ ಪ್ರತಿವರ್ಷ ಜಾತ್ರೆ ನಡೆಯುತ್ತೆ ಕಾರ್ತಿಕ ಮಾಸದ ಗೌರಿ ಹುಣ್ಣಿಮೆಯ ನವಮಿ ದಿನದಂದು ಪುರುವಂತರ ಸೇವಾ ಪಲ್ಲಕ್ಕಿ ಸೇವಾ ಹಾಗೂ ರಥೋತ್ಸವ ಶರಣ ರಾಚ್ಚಯ್ಯಪ್ಪ ತಾತನವರ ಅಮೃತ ಹಸ್ತದಿಂದದಿಂದ ಜರುಗುತ್ತದೆ ಇವರ ಆಶೀರ್ವಾದ ಪಡೆದು ಎಲ್ಲರೂ ಪುನೀತರಾಗಿ.

**–ದೇವಣ್ಣ ಬಿ ಮಾಲೀ ಪಾಟೀಲ್**

# 40ನೇ ವರ್ಷದ ಜನುಮ ದಿನದ ಶುಭಾಶಯಗಳು ಯುವರಾಜ್ ಸಿಂಗ್




ಯುವರಾಜ್ ಸಿಂಗ್ 1981 ಡಿಸೆಂಬರ್ 12 ರಂದು ಜನಿಸಿದರು.ಭಾರತೀಯ ಅಂತರರಾಷ್ಟ್ರೀಯ ಕ್ರಿಕೆಟ್ ಆಟಗಾರ ಮುಖ್ಯವಾಗಿ 2007ರ ವಿಶ್ವಕಪ್ ಟಿ20 ಮತ್ತು 2011 ರ ವಿಶ್ವಕಪ್ ಏಕದಿನ ಗೆಲುವಿನ ಹಾದಿಯಲ್ಲಿ ಭಾರತವನ್ನು ತೆಗೆದುಕೊಂಡು ಹೋದ ಆಟಗಾರರಲ್ಲಿ ಪ್ರಮುಖರಾದವರು.ಇದರಲ್ಲಿ 2007 ಆವತ್ತು ಇಂಗ್ಲೆಂಡ ಕ್ರಿಕೆಟ್ ಆಟಗಾರ–ರಿಗೆ ಕರಾಳ ದಿನ ಮತ್ತು ಮುಖ್ಯವಾಗಿ ಆ ಭಾರತದ ವೀರನಿಗೆ ಮನಸೋಲದ ಮನಸ್ಸಿಲ್ಲ ಇದು ಮರೆಯಲಾಗದ ಕ್ಷಣಗಳು. "ದಕ್ಷಿಣ ಆಫ್ರಿಕಾ"ದ ಆತಿಥ್ಯದಲ್ಲಿ ಡರ್ಬನ್ ಮೈದಾನದಲ್ಲಿ ಯುವರಾಜ್ ಸಿಂಗ್ ರವರ ಆರ್ಭಟ ಭೀಕರವಾಗಿ–ತ್ತು .ಇಂಗ್ಲೆಂಡ್ ಕ್ರಿಕೆಟ್ ಆಟಗಾರರು ತಬ್ಬಿಬ್ಬಾದರು ಆ ವಿಷಯ ಏನು ಅಂತ ತಿಳಿದರೆ ಓದುವ ಈ ಸಮಯ ಕುತೂಹಲಕಾರಿ ಅನಿಸುತ್ತದೆ. ಅದು ಹದಿನಾಲ್ಕು ವರ್ಷಗಳ ಹಿಂದೆ ಭಾರತ ಕ್ರಿಕೆಟ್ ತಂಡದ ಯುವರಾಜ್ ಸಿಂಗ್.ಅಂದು ದಕ್ಷಿಣ ಆಫ್ರಿಕಾ ಆತಿಥ–ೄದಲ್ಲಿ ನಡೆದಿದ್ದ 2007ರ ಟಿ20 ವಿಶ್ವಕಪ್ ಟೂರ್ನಿಯ ಇಂಗ್ಲೆಂಡ್ ವಿರುದ್ಧದ ಪಂದ್ಯದಲ್ಲಿ ಯುವರಾಜ್ ಸಿಂಗ್ ಈ ದಾಖಲೆ ನಿರ್ಮಿಸಿದ್ದರು.6 ಚೆಂಡಿಗೆ ಆರು ಭರ್ಜರಿ ಎಸೆತಗಳು ಅಂದಹಾಗೆ, ಶಾಂತಚಿತ್ತರಾಗಿದ್ದ ಯುವಿಯನ್ನು ಇಂಗ್ಲೆಂಡ್ ಆಲ್‌ರೌಂಡರ್ ಆಂಡ್ರೊ ಫ್ಲಿಂಟಾಫ್ ಕೆಣಕ್ಕಿದ್ದರು. ಇದರಿಂದ ಕೋಪಗೊಂಡಿದ್ದ ಯುವಿ, ಇಂಗ್ಲೆಂಡ್ ವೇಗಿ ಸ್ಟುವರ್ಟ್ ಬ್ರಾಡ್‌ನ ಎಸೆತಗಳಲ್ಲಿ ಸತತ ಆರು ಸಿಕ್ಸರ್‌ಗಳನ್ನು ಹೊಡೆದು ಎದುರಾಳಿ ತಂಡ ಇಂಗ್ಲೆಂಡ್ ಗೆ ಆಘಾತವನ್ನು ನೀಡಿದ್ದರು .

ಕೇವಲ 12 ಎಸೆತಗಳಲ್ಲಿಯೇ ಯುವರಾಜ್ ಸಿಂಗ್ ಅರ್ಧಶತಕ ಸಿಡಿಸಿದ್ದು ವಿಶೇಷವಾಗಿತ್ತು. ಆ ಮೂಲಕ ಚುಟುಕು ಕ್ರಿಕೆಟ್‌ನಲ್ಲಿ ಅತ್ಯಂತ ಕಡಿಮೆ ಎಸೆತಗಳಲ್ಲಿ ಅರ್ಧಶತಕ ಸಿಡಿಸಿದ ವಿಶ್ವದ ಮೊದಲ ಬ್ಯಾಟ್ಸ್‌ಮನ್ ಎಂಬ ದಾಖಲೆಯನ್ನು ಯುವರಾಜ್ ಅಂದು ಮಾಡಿದ್ದರು.ಆ ಮೂಲಕ ವಿಶ್ವದಾದ್ಯಂತ ಕ್ರಿಕೆಟ್ ಪ್ರೇಮ ಉಣಬಡಿಸಿದರು ಇಲ್ಲಿ ದಕ್ಷಿಣ ಆಫ್ರಿಕಾದ ಡರ್ಬನ್ ಮೈದಾನವು ಭಾರತ ಕ್ರಿಕೆಟ್ ವೀರನ ಶೌರ್ಯ ವನ್ನು ನೋಡಿ ಶ್ಲಾಘಿಸಿತು ಎಂದು ಹೇಳಬಹುದು. ಆರು ಎಸೆತಗಳ ಆರು ಸಿಕ್ಸರ್ ಗಳನ್ನು ಇವತ್ತಿಗೂ ನೋಡಲು ಕ್ರಿಕೆಟ್ ಪ್ರೇಮಿಗಳಿಗೆ ರೋಮಾಂಚನವಾಗುತ್ತದೆ. ಭಾರತವೆಂದರೆ ಕ್ರಿಕೆಟ್ ನಲ್ಲಿ ಒಂದು ಭಯ ಇತ್ತು ಇಂಗ್ಲೆಂಡಿಗೆ ಆ ದಿನ. ಭಾರತದ ಕ್ರಿಕೆಟ್ ಆಟಗಾರ ಶಕ್ತಿ ಮನಮುಟ್ಟುವಂತಿತ್ತು ಆ ಯುವರಾಜ್ ಸಿಂಗ ನ ಆರ್ಭಟ.2007 ರ ಡರ್ಬನ್ ನಲ್ಲಿ "ಯುವರಾಜನ ಸಿಂಗ್" ನ ಆರ್ಭಟಕ್ಕೆ ಸೂರ್ಯ ಮುಳುಗದ ಸಾಮ್ರಾಜ್ಯ ಇಂಗ್ಲೆಂಡ್ ಭಾರತಕ್ಕೆ ಕ್ರಿಕೆಟ್ ಆಟದಲ್ಲಿ ಶರಣಾಗಿತ್ತು.2011 ರ ವಿಶ್ವಕಪ್ ನಲ್ಲಿ ಪಂದ್ಯಾವಳಿಯ ಪುರುಷೋತ್ತಮ, ಮತ್ತು 2007 ರ ಐಸಿಸಿ ವಿಶ್ವ ಟ್ವೆಂಟಿ 20 ಯಲ್ಲಿ ಯಶಸ್ವಿ ಕ್ರಿಕೆಟಿಗರಲ್ಲಿ ಒಬ್ಬರು.

2011ರ ಏಕದಿನ ಕ್ರಿಕೆಟ್ ವಿಶ್ವಕಪ್ ಟೂರ್ನಿಯ ಲೀಗ್ ಹಂತದಲ್ಲಿ ಆಡಿದ್ದ ಆರು ಪಂದ್ಯಗಳಿಂದ ಐದರಲ್ಲಿ ಗೆಲುವು ಕಂಡಿದ್ದ ದಕ್ಷಿಣ ಆಫ್ರಿಕಾ ಬಿ ಗುಂಪಿನಲ್ಲಿ ಮೊದಲ ಸ್ಥಾನದಲ್ಲಿತ್ತು. ಹೀಗಾಗಿ ಕ್ವಾರ್ಟರ್ ಫೈನಲ್ ಹಾದಿ ಖಚಿತಪಡಿಸಿಕೊಂಡಿತ್ತು. ಆದರೆ, ತಲಾ ಮೂರು ಪಂದ್ಯಗಳಲ್ಲಿ ಗೆಲುವು ಸಾಧಿಸಿದ್ದ ಇಂಗ್ಲೆಂಡ್, ಬಾಂಗ್ಲಾದೇಶ, ವಿಂಡೀಸ್ ಹಾಗೂ ಭಾರತ ತಂಡಗಳ ನಡುವೆ ಕ್ವಾರ್ಟರ್ ಫೈನಲ್ ಪ್ರವೇಶಕ್ಕಾಗಿ ಪೈಪೋಟಿ ಆರಂಭವಾಗಿತ್ತು. ಹೀಗಾಗಿ ವೆಸ್ಟ್ ಇಂಡೀಸ್ ವಿರುದ್ಧ ಭಾರತ ಶತಾಯಗತಾಯ ಗೆಲ್ಲಲೇ ಬೇಕಾದ ಒತ್ತಡಕ್ಕೆ ಸಿಲುಕಿತ್ತು. ಇದೇ ಪಂದ್ಯದಲ್ಲಿ ಭಾರತದ ಸ್ಫೋಟಕ ಬ್ಯಾಟ್ಸ್ ಮನ್ ಯುವಿ ಅನಾರೋಗ್ಯದ ನಡುವೆಯೂ ಸ್ಫೋಟಕ ಪ್ರದರ್ಶನ ನೀಡಿ ತಂಡಕ್ಕೆ ಗೆಲುವು ತಂದುಕೊಂಟಿದ್ದರು. ಆ ರೋಚಕ ಕ್ಷಣಗಳಿಗೆ ಇಂದಿಗೆ ಹತ್ತು ವರ್ಷ.

ಇನ್ನು ಯುವಿ ಆಸೆಯಂತೆಯೇ ಅಂದಿನ ಟೂರ್ನಿಯಲ್ಲಿ ಭಾರತ 2ನೇ ಬಾರಿಗೆ ವಿಶ್ವಕಪ್ ಜಯಿಸಿತ್ತು. ಇಡೀ ಟೂರ್ನಿಯಲ್ಲಿ ಯುವರಾಜ್ ಸಿಂಗ್ 600ರನ್ ಮತ್ತು 2 ವಿಕೆಟ್ ಪಡೆದಿದ್ದರು. ಈ ಪೈಕಿ 8 ಅರ್ಧಶತಕ, ಒಂದು ಶತಕ ಕೂಡ ಸೇ–ರಿತ್ತು. ಅಂತೆಯೇ ಯುವಿ ಸರಣಿ ಶ್ರೇಷ್ಠ ಪ್ರಶಸ್ತಿಗೂ ಪಾತ್ರರಾಗಿದ್ದರು.ಆಲ್ರೌಂಡರ್ ಆಟದ ಮೂಲಕ ಗಮನ ಸೆಳೆದಿದ್ದ ಯುವರಾಜ್ ಸಿಂಗ್ ಪಂದ್ಯ ಶ್ರೇಷ್ಠ ಎನಿಸಿದ್ದರು. ಆ ಪಂದ್ಯದ ವೇಳೆ ಅನಾರೋಗ್ಯದಿಂದ ಬಳಲಿದ್ದ ಯುವಿ ಅಂಗಳದಲ್ಲಿಯೇ ವಾಂತಿ ಮಾಡಿಕೊಂಡಿದ್ದರು.ಆ ಪಂದ್ಯ ಮುಗಿದು ಇಂದಿಗೆ ಹತ್ತು ವರ್ಷ ಉರುಳಿದ್ದರೂ, ಯುವಿ ಆಟದ ನೆನಪು ಮಾತ್ರ ಹಾಗೆಯೇ ಉಳಿದಿವೆ.ಪ್ರಶಸ್ತಿಗಳು :

ಯುವರಾಜ್ ಭಾರತದ ಪ್ರಣವ್ ಮುಖರ್ಜಿ ಅಧ್ಯಕ್ಷತೆಯಲ್ಲಿ 2012ರ ಅರ್ಜುನ ಪ್ರಶಸ್ತಿ ಭಾರತದ ಎರಡನೇ ಅತ್ಯುನ್ನತ ಕ್ರೀಡಾ ಪ್ರಶಸ್ತಿ ನೀಡಿ ಗೌರವಿಸಲಾಗಿತ್ತು. 2014 ರಲ್ಲಿ, ಅವರು ಪದ್ಮಶ್ರೀ, ಭಾರತದ ನಾಲ್ಕನೇ ಅತ್ಯುನ್ನತ ನಾಗರಿಕ ಗೌರವ ನೀಡಲಾಯಿತು.

**–ರಾಖೇಶ್**

ಕರುನಾಡ ಕಂದ
ಸಂಪುಟ–1 । ಸಂಚಿಕೆ–4
ದಿನಾಂಕ: 16–12–2021 । ಪುಟಗಳು: 16

# ದೇಗಲಮಡಿ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಕ್ರಿಕೆಟ್ ಟೂರ್ನಾಮೆಂಟ



ಚಿಂಚೋಳಿ : ತಾಲೂಕಿನ ದೇಗಲಮಡಿ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಇರುವ ನೀಮಾಹೊಸಳ್ಳಿ ಗ್ರಾಮದಲ್ಲಿ ಕ್ರಿಕೆಟ್ ಟೂರ್ನಾಮೆಂಟ ಆಯೋಜನೆ ಹಮ್ಮಿಕೊಳ್ಳಲಾಯಿತು. ಮತ್ತು ಈ ಟೂರ್ನಮೆಂಟ್ ನಲ್ಲಿ ಪ್ರಥಮ ಬಹುಮಾನ :– 21,000/– ರೂಪಾಯಿಗಳು ಮತ್ತು ಕಪ್ ದ್ವಿತೀಯ ಬಹುಮಾನ :– 11,000/– ರೂಪಾಯಿಗಳು ಮತ್ತು ಕಪ್ ನೀಡಲಾಗುತ್ತದೆ.

ಈ ಸಂದರ್ಭದಲ್ಲಿ ಕಾರ್ಯಕ್ರಮಕ್ಕೆ ಭಾಗವಹಿಸಿದ ಅಕ್ಬರ್ ಹುಸೇನಿ ಸಾಹೇಬ್ ಬಡಿ ದರ್ಗಾ, ಮತ್ತು ಚಿಂಚೋಳಿ.ಚಿಂಚೋಳಿ ತಾಲ್ಲೂಕಿನ ಎಆಖ ಪಕ್ಷದ ಶ್ರೀ ಸಂಜೀವನ್ ಯಾಕಪೂರ ರವರು ಬಂದು ಕ್ರಿಕೆಟ್ ಮೈದಾನಕ್ಕೆ ಆಗಮಿಸಿ ಉದ್ಘಾಟಿಸಿದರು. ನಂತರ ದ್ವಿತೀಯ ಬಹುಮಾನ 11,000/– ರೂಪಾಯಿಗಳು ಖುದ್ದಾಗಿ ಶ್ರೀ ಸಂಜೀವನ ಯಾಕಪೂರ ರವರು ತಮ್ಮ ಸ್ವ ಇಚ್ಛೆಯಿಂದ ಕೊಡುಗೆ ನೀಡಿದ್ದಾರೆ

ಈ ಸಂದರ್ಭದಲ್ಲಿ ಚಿಂಚೋಳಿತಾಲೂಕಿನ ಎಆಖ ಪಕ್ಷದ ನಾಯಕರಾದ ಶ್ರೀ ಸಂಜೀವನ ಯಾಕಪೂರ , ರವಿಶಂಕರ್ ಮುತ್ತಂಗಿ, ದೇಗಲಮಡಿ ಗ್ರಾಮ ಪಂಚಾಯತಿಯ ಅದ್ಯಕ್ಷರಾದ ಶರಣಗೌಡ ಮುದ್ದ, ರಹೇಮತ್ ಪಾಷಾ ಗ್ರಾ.ಪಂ.ಸದಸ್ಯರು, ಹಾಗೂ ಗ್ರಾಮದ ಶೇಖ್ ಚಾಂದ್ ಮಸ್ತಾನ,ಅಬ್ದುಲ್ ರಶೀದ್ ಬಗಲಿ, ಜಾಕೀರ್ ಪಟೇಲ್, ಖಧೀರ್ ಬಗಲಿ, ಉಪಸ್ಥಿತ–ರಿದ್ದರು.

# ಸೆಕ್ಯೂರಿಟಿ ಮತ್ತು ಸೂಪರ್ವೈಸರ್ಗಳು ಸಂಜೀವನ್ ಯಾಕಾಪೂರ್ ರವರಿಗೆ ಸನ್ಮಾನ



ಚಿಂಚೋಳಿ ತಾಲೂಕಿನ ಕಲ್ಲೂರ್ ರೋಡ್ ಗ್ರಾಮದಲ್ಲಿ ಚೆಟ್ಟಿನಾಡ್ ಕಂಪನಿಯಲ್ಲಿ ಸುಮಾರು 10ವರ್ಷಗಳಿಂದ ಡಾಬರ್ಮನ್ ಏಜನ್ಸಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸೆಕ್ಯೂರಿಟಿಗೌರ್ಡ್ ಮತ್ತು ಸೂಪರ್ವೈಸರ್ಗಳಿಗೆ ಬೋನಸ್ ಕೊಡಿಸುವಲ್ಲಿ ಮತ್ತು 12 ಗಂಟೆಯ ಕೆಲಸದ ಅವಧಿ 08 ಗಂಟೆಗೆ ಕಾರ್ಯನಿರ್ವಹಿಸುವಂತೆ ನ್ಯಾಯ ಒದಗಿಸಿಕೊಟ್ಟ ಜೆಡಿಎಸ್ ಪಕ್ಷದ ಹಿರಿಯ ಮುಖಂಡರಾದ ಸಂಜೀವನ್ ಆರ್ ಯಾಕಾಪೂರ್ ರವರಿಗೆ ಸೆಕ್ಯೂ–ರಿಟಿ ಗಾರ್ಡ್ ಮತ್ತು ಸೂಪರ್ವೈಸರ್ ಗಳು ಹಾಗೂ ಏಜನ್ಸಿ ಮಾಲೀಕರು ಸಂಜೀವನ್ ಯಾಕಾಪೂರ್ ರವರ ಹೋರಾಟಕ್ಕೆ ಸ್ಪಂದಿಸಿ. 08 ಗಂಟೆ ಕಾರ್ಯನಿರ್ವಹಿಸಲು ಡಾಬರ್ಮ್ಯಾನ್ ಏಜನ್ಸಿಯ ಮಾಲೀಕರು ಸೆಕ್ಯೂರಿಟಿ ಗಾರ್ಡ್ಗಳಿಗೆ ಘೋಷಣೆ ನೀಡಿದರು.

ತದನಂತರ ಚೆಟ್ಟಿನಾಡ್ ಕಂಪನಿಯ ಸೆಕ್ಯೂ–ರಿಟಿ ಮತ್ತು ಸೂಪರ್ವೈಸರ್ಗಳು ಸಂಜೀವನ್ ಯಾಕಾಪೂರ್ ರವರಿಗೆ ಸನ್ಮಾನಿಸಿ ಶುಭಕೋರಿದರು.

ಈ ಸಂಧರ್ಭದಲ್ಲಿ ಕಲ್ಲೂರ್ ಗ್ರಾಮದ ಜೆಡಿ–ಎಸ್ ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರು ಸೆಕ್ಯೂರಿಟಿ ಗಾರ್ಡ್ ಮತ್ತು ಸೂಪರ್ವೈಸರ್ ಮತ್ತು ನೂರಾರು ಕಾರ್ಯಕರ್ತರು ಈ ಸಂಧರ್ಭದಲ್ಲಿ ಉಪಸ್ಥಿತರಿದ್ದರು.

## ಜ್ಞಾನವಾಣಿ

ಸಹೋದರರೆ ಯಾರು ಜೀವದಲ್ಲೀ ಮೊದಲು ಎಡವಿದ್ದಾರೋ ಅವರೇ ಹುಚ್ಚೆದ್ದು ಸಾಧನೆ ಬೆನ್ನು ಹತ್ತಿದವರು.ತಹವರಲ್ಲಿ ಕಷ್ಟವನ್ನು ಅನುಭವಿಸದೆ ಸುಗಮದಲ್ಲಿ ಸರಳವಾಗಿ ಅದ್ಯಾರು ಸಾಧಸಿದ್ದಾರೆ ಹೇಳಿ? ತಿಳಿದಿರಲಿ;ಸಾಧನೆಗೆ ಮಾಡಬೇಕು ಎಂದುಕೊಂಡವರಿಗೆ ಅದೊಂದೆ ಕೆಲಸ ಹಗಲಿರುಳು ಅದನ್ನವರು ನಂಬಿಕೆಬಿಡದೆ,ಹಠಕ್ಕೆಬಿದ್ದು ಹುಚ್ಚೆದ್ದುಮಾಡಬೇಕು.ಮತ್ತಾದಾರಿಯು ಸುಗಮವು ಅಲ್ಲ,ಸರಳವೂ ಅಲ್ಲ?,ದುರ್ಗಮ ರಣಭೀಕರವದು ಅವರವರ ಪಾಲಿಗೆ."ಅಲ್ಲಿ ನಮ್ಮವರ ಸಹಕಾರವೂ ಕಡಿಮೆ ಹೋರಗಿನವರ ಕಾಟವು ಹೆಚ್ಚು".ನೆನಪಿರಲಿ ಸುಖವನ್ನುಂಡು ಯಾರು ಯಾವ ಘನಂದಾರಿ ಸಾಧನೆ ಮಾಡಿಲ್ಲ ಅದನ್ನು ತ್ಯಾಗಮಾಡಿ ಕಷ್ಟದ ಭೋರ್ಗರೆತವನ್ನುಂಡು ಬೆಂದವರೇ ಬಯಲಲ್ಲಿ ಬೆಳಕಾಗಿರುವುದು.ಎಂದೆನ್ನುತ್ತಾರೆ ಅನುಭಾವಿ ಶರಣ ಸಂತರು.ಇದನ್ನರಿತು ನಡೆಯುವುದೇ ಭಗವತ್

**ಕೃಪೆ : –ವಿ ಪಿ ರಜಪೂತ**

# "ಅಂತಾರಾಷ್ಟ್ರೀಯ ಏಡ್ಸ್ ದಿನಾಚರಣೆ ಮತ್ತು ಅಂಗವಿಕಲರ ದಿನಾಚರಣೆ"



ತಾಲೂಕು ಕಾನೂನು ಸೇವಾ ಸಮಿತಿ,ನ್ಯಾಯವಾದಿಗಳ ಸಂಘ ಚಿಂಚೋಳಿ, ಹಾಗೂ ತಾಲೂಕ ಆರೋಗ್ಯ ಇಲಾಖೆ ಇವರ ಸಂಂ–ಯುಕ್ತಾಶ್ರಯದಲ್ಲಿ.

ಕಾನೂನು ಅರಿವು – ನೆರವು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು ಈ ಸಂದರ್ಭದಲ್ಲಿ.ಶ್ರೀ ವಿಜಯಕುಮಾರ್ ಎಸ್. ಜಟ್ಲ ಅಧ್ಯಕ್ಷರು ಕಾನೂನು ಸೇವಾ ಸಮಿತಿ ಪ್ರಭಾರ ಹಿರಿಯ ಸಿವಿಲ್ ನ್ಯಾಯಾಧೀಶರು ಚಿಂಚೋಳಿ. ಡಾಕ್ಟರ್ ಸಂತೋಷ್ ಪಾಟೀಲ್ ಆಡಳಿತ ವೈದ್ಯಾಧಿಕಾರಿಗಳು.

ಶ್ರೀ ರವಿಕುಮಾರ್ ವಿ ಸದಸ್ಯ ಕಾರ್ಯದರ್ಶಿಗಳು ತಾಲೂಕು ಕಾನೂನು ಸೇವಾ ಸಮಿತಿ ಹಾಗೂ ಪ್ರಧಾನ ಸಿವಿಲ್ ನ್ಯಾಯಾಧೀಶರು ಚಿಂಚೋಳಿ.

ಡಾಕ್ಟರ್ ಮೊಮ್ಮದ್ ಗಫರ್ ತಾಲೂಕ ವೈದ್ಯಾಧಿಕಾರಿಗಳು ಚಿಂಚೋಳಿ

ಸುದರ್ಶನ್ ಅಧ್ಯಕ್ಷರು ನ್ಯಾಯವಾದಿಗಳ ಸಂಘ ಚಿಂಚೋಳಿ, ಶಾಂತಕುಮಾರ್ ಜಿ ಪಾಟೀಲ್, ಬಾಬಾ ಸಾಬ್ ಎಸ್, ವಿಜಯ್ ಕುಮಾರ್ ರಾಥೋಡ್, ಡಾಕ್ಟರ್ ಅನಿಲ್ ಕುಮಾರ್ ವೈದ್ಯರು ಸರ್ಕಾರಿ ಆಸ್ಪತ್ರೆ ಚಿಂಚೋಳಿ. ಚಂದ್ರಶೇಖರ್, ಂಖಖ ಸದಸ್ಯರು ಉಮಾಕಾಂತ್ ಬೆಳಕೇರಿ, ಪವನ್ ಕುಮಾರ್ ಗೋಪನಪಳ್ಳಿ, ಹಣಮಂತ, ಹಾಗೂ ಆಸ್ಪತ್ರೆ ಸಿಬ್ಬಂದಿ ಸಾರ್ವಜನಿಕರು ಇದ್ದರು.

# ರೈತರ ಬೆಳೆಗೆ ಪರಿಹಾರಕ್ಕೆ ಕರವೇ ಒತ್ತಾಯ



ವಿಜಯಪುರ: ಶೀಘ್ರದಲ್ಲಿ ರೈತರಿಗೆ ಬೆಳೆ ಪರಿಹಾರ ನೀಡುವಂತೆ ಒತ್ತಾಯಿಸಿ ಕರ್ನಾಟಕ ರಕ್ಷಣಾ ವೇದಿಕೆ ವತಿಯಿಂದ ಮುಖ್ಯಮಂತ್ರಿಗಳಿಗೆ ವಿಜಯಪುರ ಜಿಲ್ಲಾಧಿಕಾರಿಗಳ ಮೂಲಕ ಮನವಿ ಸಲ್ಲಿಸಲಾಯಿತು.

ಅಕಾಲಿಕ ಮಳೆಯಿಂದ ರೈತರ ಬೆಳೆಗಳು ಹಾನಿಯಾಗಿದ್ದು ರೈತರ ಸಾಲಸೂಲ ಮಾಡಿ ಬೆಳೆದಂತ ಬೆಳೆ ಮಳೆಯಿಂದ ಹಾನಿಯಾಗಿದೆ. ಕೈಗೆ ಬಂದ ತುತ್ತು ಬಾಯಿಗೆ ಬರದಂತಾಗಿದೆ. ಈಲ್ಲೆಯಲ್ಲಿ (ದ್ರಾಕ್ಷಿ & ತೋಗರೆ, ಮೆಣಸಿನಕಾಯಿ ಬೆಳೆ, ಹತ್ತಿ) ಹೀಗೆ ಹಲವಾರು ಬೆಳೆಗಳು ಬೆಳೆಯುತ್ತಿದ್ದು ಅಕಾಲಿಕ ಮಳೆಗೆ ಬೆಳೆಯು ಸಂಪೂರ್ಣ ಹಾಳಾಗಿದೆ ಹೀಗಾಗಿ ರೈತರ ಸಂಕಷ್ಟಕ್ಕೆ ಸರಕಾರ ದಾವಿಸಿ ಅವರಿಗೆ ಸೂಕ್ತ ಪರಿಹಾರ ನೀಡಬೇಕು ಮತ್ತು ರೈತರ ಸಾಲವನ್ನು ಮನ್ನಾ ಮಾಡಬೇಕೆಂದು ಮನವಿ ಪತ್ರದಲ್ಲಿ ವಿನಂತಿಸಿಕೊಂಡಿದ್ದಾರೆ. ಈ ಸಂದರ್ಭದಲ್ಲಿ ರಾಜ್ಯ ಸಂಚಾಲಕ ಶ್ರೀಶೈಲ ಮುಳಜಿ, ಜಿಲ್ಲಾಧ್ಯಕ್ಷ ಬಸವರಾಜ ತಾಳಿಕೋಟಿ, ಮಹಾಂತೇಶ ಹಿರೇಮಠ ಜಿಲ್ಲಾ ಉಪಧ್ಯಕ್ಷರು, ವಿಜಯ ಬಾಗಿ ತಾಲೂಕಾಧ್ಯಕ್ಷರು ವಿಜಯಪುರ, ಸಂದೀಪ ಅವಟಿ ಕರವೇ ಮುಖಂಡರು, ಚೇತನ ಬಿರಾದಾರ, ದೂಳೇಶ ಮಸಳಿ ಇದ್ದರು.

**–ಶ್ರೀರಂಗ ಪುರಾಣಿಕ್**

ಕರುನಾಡ ಕಂದ
ಸಂಪುಟ–1 । ಸಂಚಿಕೆ–4
ದಿನಾಂಕ: 16–12–2021 । ಪುಟಗಳು: 16

# ಕಂಪನಿಯಲ್ಲಿ ಉದ್ಯೋಗದ ಹೆಸರಿನಲ್ಲಿ ಲಕ್ಷ–ಲಕ್ಷ ಹಣ ವಸೂಲಿ: ಮಾನಸಯ್ಯ



ಹಟ್ಟಿ ಚಿನ್ನದಗಣಿ: ವೈದ್ಯಕೀಯ ಅನರ್ಹತೆ ಹಾಗೂ ಸ್ವಯಂ ನಿವೃತ್ತಿ ಆಧಾರದಡಿ ಹಟ್ಟಿಚಿನ್ನದಗಣಿ ಕಂಪನಿಯಲ್ಲಿ ಉದ್ಯೋಗ ಕೊಡಿಸುವುದಾಗಿ ನಂಬಿಸಿ ಕಾರ್ಮಿಕರಿಂದ ಲಕ್ಷ–ಲಕ್ಷ ಹಣ ವಸೂಲಿ ಮಾಡಲಾಗುತ್ತಿದೆ ಎಂದು ಕಾರ್ಮಿಕ ಸಂಘದ ಗೌರವಾಧ್ಯಕ್ಷ ಹಾಗೂ ಟಿಯುಸಿಐ ರಾಜ್ಯಾಧ್ಯಕ್ಷ ಆರ್.ಮಾನಸಯ್ಯ ಗಂಭೀರ ಆರೋಪ ಮಾಡಿದರು.

ಪಟ್ಟಣದ ಕಾರ್ಮಿಕ ಸಂಘದ ಅಧಿಕೃತ ಕಚೇರಿ ಪೈ ಭವನದಲ್ಲಿ ಟಿಯುಸಿಐ ಸಂಘಟನೆ ವತಿಯಿಂದ ಹಮ್ಮಿಕೊಂಡ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದರು.

ಚುನಾವಣೆ ನಡೆಯಬಾರದೆಂಬ ದುರುದ್ದೇಶದಿಂದ ಚುನಾವಣೆಯನ್ನು ತಹಶೀಲ್ದಾರರಿಂದ ನಡೆಸದೇ ಪ್ರಾದೇಶಿಕ ಕಾರ್ಮಿಕ ಆಯುಕ್ತರ ಮೂಲಕ ನಡೆಸಬೇಕೆಂದು ತಹಶೀಲ್ದಾರ್ ಹಾಗೂ ಕಂಪನಿ ಆಡಳಿತ ಮಂಡಳಿ ವಿರುದ್ಧ ವಾಲೇಬಾಬು ಕಳೆದ ಡಿಸೆಂಬರ್‌ನಲ್ಲಿಯೇ ನ್ಯಾಯಾಲಯದಲ್ಲಿ ದಾವೆ ಹೂಡಿದ್ದರು.

ಕಳೆದ ಅಕ್ಟೋಬರ್ 14 ರೊಳಗೆ ಸಿಬ್ಬಂದಿ ಹಾಗೂ ಕಾರ್ಮಿಕ ಸಂಘದ ಚುನಾವಣೆ ಪ್ರಕ್ರಿಯೆ ಪೂರ್ಣಗೊಳ್ಳಬೇಕಿತ್ತು. ಕಾರ್ಮಿಕರ ಶಾನಸಬದ್ಧ ಬೇಡಿಕೆಗಳನ್ನು ಈಡೇರಿಸಲು ಹಾಗೂ ಆಡಳಿತ ಮಂಡಳಿಗೆ ಕಾರ್ಮಿಕರ ಬೇಡಿಕೆ(ಚಾರ್ಟರ್ ಆಫ್ ಡಿಮ್ಯಾಂಡ್) ಪತ್ರವನ್ನು ಸಲ್ಲಿಸಲು ನೂತನ ಕಾರ್ಮಿಕ ಸಂಘದ ಅವಶ್ಯಕತೆ ಇದ್ದು, ನಿಗಧಿತ ಅವಧಿಯಲ್ಲಿಯೇ ಚುನಾವಣೆ ಪ್ರಕ್ರಿಯೆ ಪೂರ್ಣಗೊಳಿಸಬೇಕೆಂದು ಟಿಯುಸಿಐ ಸಂಘಟನೆ ವತಿಯಿಂದ ಪ್ರಾದೇಶಿಕ ಆಯುಕ್ತರಿಗೆ ಒತ್ತಾಯಿಸಲಾಗಿತ್ತು.

ಪ್ರಾದೇಶಿಕ ಕಾರ್ಮಿಕ ಆಯುಕ್ತರು ಕಾರ್ಮಿಕ ಸಂಘದ ಚುನಾವಣೆ ನಡೆಸಲು ತಹಶೀಲ್ದಾರರನ್ನು ನೇಮಕ ಮಾಡಿದ್ದನ್ನು ಪ್ರಶ್ನಿಸಿ, ಚುನಾವಣೆ ನಡೆಯಬಾರದೆಂಬ ದುರುದ್ದೇಶದಿಂದ ವಾಲೇಬಾಬು ಲಿಂಗಸುಗೂರಿನ ಸಿವಿಲ್ ನ್ಯಾಯಾಲಯದಲ್ಲಿ ತಡೆಯಾಜ್ಞೆ ತಂದಿದ್ದರು.

ತಡೆಯಾಜ್ಞೆ ರದ್ದುಗೊಳಸಿ, ಚುನಾವಣೆ ನಡೆಸಬೇಕೆಂದು ಕಾರ್ಮಿಕ ಸಂಘದ ಪ್ರಧಾನ ಕಾರ್ಯದರ್ಶಿ ಎಂ.ಡಿ.ಅಮೀರ್‌ಅಲಿ ಹಾಗೂ ಎಐ–ಟಿಯುಸಿ ಸಂಘಟನೆಯ ಯಂಕೋಬ ಮಿಯ್ಯಾಪೂರ ಕೋರ್ಟ್ ಮೆಟ್ಟಿಲೇರಿದ್ದರು.

ಕೈಗಾರಿಕಾ ವಿವಾದ ಕಾಯ್ದೆ 1948 ಸೆಕ್ಷನ್ 2ರ ಪ್ರಕಾರ ಸದರಿ ಪ್ರಕರಣವು ಕೈಗಾರಿಕಾ ವ್ಯಾಜ್ಯವಾಗಿರುವುದರಿಂದ ಹಾಗೂ ಸೆಕ್ಷನ್ 7ರ ಪ್ರಕಾರ ಸಿವಿಲ್ ನ್ಯಾಯಲಯಗಳ ವ್ಯಾಪ್ತಿಗೆ ಇಂತಹ ಪ್ರಕರಣಗಳು ಬರುವುದಿಲ್ಲವಾದ್ದರಿಂದ ತಡೆಯಾಜ್ಞೆ ಕೋರಿ ಅರ್ಜಿ ಸಲ್ಲಿಸಿದ್ದು ಹಾಗೂ ತಡೆಯಾಜ್ಞೆ ನೀಡಿದ್ದು ಎರಡೂ ತಪ್ಪು ಎಂದು ತೀರ್ಮಾನಿಸಿ ನ್ಯಾಯಾಲಯ ತಡೆಯಾಜ್ಞೆಯನ್ನು ವಜಾಗೊಳಿಸಿದೆ.

ಉದ್ದೇಶಪೂರ್ವಕವಾಗಿ ಚುನಾವಣೆ ಮುಂದೂಡುತ್ತಾ ರಾಜಕೀಯ ಮಾಡುವವರು ವಿಫಲಗೊಂಡಿದ್ದಾರೆ. ಬೇಗ ಚುನಾವಣೆ ನಡೆಸಿ ಕಾರ್ಮಿಕರ ಬೇಡಿಕೆಗಳನ್ನು ಈಡೇರಿಸಬೇಕೆನ್ನುವವರ ಗೆಲುವಾಗಿದೆ. ಆದಷ್ಟು ಬೇಗನೆ ಚುನಾವಣೆ ನಡೆಯಬೇಕಾಗಿದ್ದು, ಕೂಡಲೇ ಚುನಾವಣೆ ಪ್ರಕ್ರಿಯೆ ನಡೆಸಬೇಕೆಂದು ಗಣಿ ಕಂಪನಿ ಕಾರ್ಯನಿರ್ವಾಹಕ ನಿರ್ದೇಶಕರಿಗೆ ಹಾಗೂ ವ್ಯವಸ್ಥಾಪಕ ನಿರ್ದೇಶಕರಿಗೆ ಒತ್ತಾಯಿಸಲಾಗುವುದು ಎಂದರು.

ಈಗಾಗಲೇ ಕಾರ್ಮಿಕರ ಸಾಕಷ್ಟು ಗಂಭೀರ ಸಮಸ್ಯೆಗಳಿವೆ. ಗಣಿ ಕಂಪನಿ ನಿರ್ದೇಶಕ ಮಂಡಳಿ ಅನುಮೋದನೆ ನೀಡಿಲ್ಲವೆಂದು ಕಾರ್ಮಿಕರ ಶಾಸನಬದ್ಧ ಸೌಲಭ್ಯವಾದ ಉತ್ಪಾದನಾ ಪ್ರೋತ್ಸಾಹ ಧನವನ್ನು(ಪಿ–ಎಲ್‌ಐಬಿ) ಇನ್ನೂ ನೀಡಿಲ್ಲ. ಆದರೆ ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ 5 ಕೋಟಿ ನೀಡಲು ಗಣಿ ಕಂಪನಿ ಅಧ್ಯಕ್ಷ ಮಾನಪ್ಪ ಡಿ.ವಜ್ಜಲ್ ಯಾವ ನಿರ್ದೇಶಕ ಮಂಡಳಿ ಅನುಮೋದನೆ ಪಡೆದಿದ್ದಾರೆ ಎಂದು ಪ್ರಶ್ನಿಸಿದರು.

ಒಂದು ಕಡೆ ಕೋವಿಡ್–19 ಸಂದರ್ಭದಲ್ಲಿ ಉತ್ಪಾದನೆ ಕುಂಠಿತಗೊಂಡಿದ್ದರಿಂದ ಹೊಸ ಹುದ್ದೆಗಳ ನೇಮಕಾತಿ ಮಾಡಿಕೊಂಡರೆ ಕಂಪನಿಗೆ ಆರ್ಥಿಕ ಹೊರೆಯಾಗುತ್ತದೆ ಎಂದು ಆಡಳಿತ ಮಂಡಳಿ ಹೇಳುತ್ತಾರೆ. ಆದರೆ ಮಾನಪ್ಪ ವಜ್ಜಲ್‌ರು ಗಣಿ ಕಂಪನಿ ಅಧ್ಯಕ್ಷರಾದ ನಂತರ ತಮ್ಮ ರಾಜಕೀಯ ಲಾಭಕ್ಕೋಸ್ಕರ ಹೊಸ ಹುದ್ದೆಗಳ ನೇಮಕಾತಿ ಮಾಡಿಕೊಳ್ಳಲಾಗುವುದು ಎಂದು ಹೇಳಿಕೆ ನೀಡಿದ್ದಾರೆ. ಹೊಸ ಹುದ್ದೆಗಳ ನೇಮಕಾತಿ ಮಾಡಿಕೊಳ್ಳುವುದು ಒಳ್ಳೆಯದೇ. ಆದರೆ ತಮ್ಮದೇ ಪಕ್ಷದವರು ಉದ್ಯೋಗ ಕೊಡಿಸುವುದಾಗಿ ಭರವಸೆ ನೀಡಿ ಹಣ ವಸೂಲಿ ಮಾಡುತ್ತಿದ್ದಾರೆಂದು ಆರೋಪಿಸಿದರು.

ಈ ವೇಳೆ ಸಿಬ್ಬಂದಿ ಹಾಗೂ ಕಾರ್ಮಿಕ ಸಂಘದ ಪ್ರಧಾನ ಕಾರ್ಯದರ್ಶಿ ಎಂ.ಡಿ.ಅಮೀರ್ ಅಲಿ, ರೇವಣ್ಣ ಸಿದ್ದಪ್ಪ, ಗುಡದಪ್ಪ ಭಂಡರಿ, ರಮೇಶ ಆನ್ವರಿ, ಎಲ್.ಬಸವರಾಜ, ರಾಘವೇಂದ್ರ, ಮಲ್ಲೇಶ, ಜಡಿಯಪ್ಪ, ಮಲಯಾದ್ರಿ, ಹನುಮನೌಡ ಗುರಿಕಾರ, ಜೈನುದಿನ್, ಇಮಾಂಸಾಬ್ ಕೋತಾ, ಸೇರಿದಂತೆ ಇದ್ದರು

–ವರದಿ ಬಸವರಾಜ್ ಬಡಿಗೇರ್

## ಪ್ರೇಮ ಬನದ ಹೂದುಂಬಿಯಂತೆ..

ಬೆಳದಿಂಗಳ ಬಾಲೆ ನಿನ್ನಂದಕೆ ಸೋತೆ ನಾನು
ಬಾಂದಳ ಹಕ್ಕಿಯಾಗಿ ಬಾಳುವ ನಾನು ನೀನು
ನಿನ್ನ ನೆನದಾಗ ಕೋಗಿಲೆ ಗಾನದಂತೆ ಮಧುರ
ಜೋತೆಯಾಗು ಅನುರಾಗದ ಬಂಧನ ಸುಂದರ
ನಿನ್ನ ಕಾಡಿಗೆ ಕಂಗಳ ಮೋಡಿಗೆ ಸೋತೆ ಈ ದಿನ
ಪ್ರೇಮಲೋಕ ತಂದಿವೆ ಕಪ್ಪುನಯನ ಅನುದಿನ
ಕಮಲದ ನಯನ ರೆಪ್ಪೆ ಬಡೆದರೆ ಚಿಟ್ಟೆಯಂತೆ
ಆಗಿದೆ ನೋಡುತಾ ಹೃದಯ ತಲ್ಲಣಗಳ ಸಂತೆ
ನಮ್ಮಿಬ್ಬರ ಪ್ರೀತಿಗೆ ನಿನ್ನಂದದ ಕಂಗಳ ಸಲುಗೆ!
ಬ್ರಹ್ಮ ಹಾಕಿರುವ ಜೋಡಿ ಅನುಬಂಧ ಬೆಸುಗೆ
ನಲ್ಲೆ ಪ್ರೀತಿಯ ಅರಮನೆಗೆ ನೀನಾಗು ಅರಸಿ
ಅರಿತು ಬಾಳೋಣ ದುಃಖ ದುಮ್ಮಾನ ಸರಿಸಿ
ಬಾಳುವ ಒಲುಮೆ ಬನದ ಹೂದುಂಬಿಯಂತೆ
ಅರಿತು ಸಮರಸವೇ ಜೀವನ ಕವಿವಾಣಿಯಂತೆ
ಕಷ್ಟ ಸುಖವೇ ಬರಲಿ ಆತ್ಮಬಲ ಸೆಲೆ ಬತ್ತದಂತೆ
ನವ ಮನ್ವಂತರದ ಸೊಬಗಿನ ಸ್ಪೂರ್ತಿಯಂತೆ.

–ರತ್ನಾ ಎಂ ಅಂಗಡಿ ಹುಬ್ಬಳ್ಳಿ

## ರಾತ್ರಿಯ ಅಂಧಕಾರಕ್ಕೊಂದು ಮನವಿಯ ಪತ್ರ ಬರೆಯಲೇನು?..

ನಿದ್ದೆಗೆ ಜಾರಿದಾಗ, ಅವಳ ಸ್ವರೂಪ
ನಿರ್ಜೀವವಾಗಿರಲೆಂದು...
ಅವಳ ಸ್ಪರ್ಶಕ್ಕೆ ಮನಸ್ಸು
ಮಾರುಹೋಗದಿರಲೆಂದು..
ಕನಸ್ಸಿನೂರಿನ ಪಯಣದ ದಾರಿಗೆ
ಬೇಲಿ ಬೀಳಲೆಂದು.....
ಅಂಧಕಾರಕ್ಕೆ ಬೆಚ್ಚಿ ಓಡುತ್ತಿರುವ
ಅವಳ ಕನಸ್ಸು ಜೀವಂತದಿಂದ
ಹಿಡಿದು ಘೋರಿ ಕಟ್ಟೆಂದು.....
ಆದರೀಗ...
ಮನವಿಂದು ಕರಗಿ
ಶ್ಯೂನದಲ್ಲಿ ವಿಲೀನವಾದಂತಿದೆ..
ಇಂದಿನ ಕನಸ್ಸಿನಲ್ಲಿ
ಅವಳಿಗೆ ಪಾತ್ರವಿಲ್ಲದಂತಾಗಿದೆ..
ಅವಳ ಪಯಣ,
ಕಲ್ಪನೆಗೂ ಮೀರಿ ದೂರ ಸಾಗಿದಂತಿದೆ..
ಅವಳಿಗಾಗಿ ಕೂಡಿಸಿದ ಕನಸು ,
ರಾತ್ರಿಯ ಕತ್ತಲಿಗೆ ದೂರ ಓಡಿದಂತಿದೆ..
ಯಃಕಶ್ಚಿತ ನನ್ನ ಮನಸ್ಸಿನಲ್ಲಿ ಅವಳ
ಒಂದು ಛಾಪು ಕೂಡ ಇಲ್ಲದೆ
ಅಳಿಸಿದಂತಿದೆ..
ಸಮುದ್ರ ತೆರೆಗಳ ನಿರ್ವಿಕಾರದಂತೆ,
ನನ್ನ ಮನಸ್ಸು ಮಾಯವಾಗುತ್ತಿದೆ..



– ಆನಂದ ರಾಜಶೇಖರ

## "ಸೂತ್ರ ಧಾರಿಯು ನೀನೆ ಭಗವಂತ'

ಕಲಿಯುಗದ ಕೂಪದೊಳಿಟ್ಟೆ
ನಲಿವಿನ ಕ್ಷಣಗಳಾಕೊಟ್ಟೆ //ಪ//
ನಾನು ನನ್ನದೆಂಬುದ ಕೊಟ್ಟು
ಆನು ತಾನುಗಳೊಳಗಿಟ್ಟು//ಅ.ಪ//
ಬ್ರಹ್ಮಾಂಡವೇ ನೀನು ದೇವ
ಬ್ರಹ್ಮಸ್ವರೂಪಿ ಸದಾನಿರ್ಭಾವ
ಆತ್ಮಬಲದಿ ಅರಿತೆ ಗುರು ಪಥವಾ
ಈ ಆತ್ಮಕೆ ನೀ ತಾನೆ ಜೀವಾ
ಕಳೆದು ಬಿಡು ಭವದ ಕೂಪ
ಅಳೆದಿಹೆ ನೀ ಎಲ್ಲರ ಪುಣ್ಯ ಪಾಪ
ಸೂತ್ರಧಾರಿಯು ನೀನೇ ಭಗವಂತ
ಪಾತ್ರಗಳಂತೆ ನಾವು ಅನವರತ
ಚಿನ್ಮಯ ರೂಪನಾದ ದೇವನೇ
ತನ್ಮಯನಾಗು ಕೇಳಿ ಈ ಪ್ರಾರ್ಥನೇ
ಜಗದ ಅಣುಕಣದಲಿ ತುಂಬಿರುವೆ
ಯುಗದ ಆದಿ ಅಂತ್ಯವ ಅರಿತಿರುವೆ
ಗೋಸಲ ಶ್ರೀಚೆನ್ನಬಸವೇಶ್ವರ

–ಸಿಂದುಗುಬ್ಬಿ,ಶಿಕ್ಷಕಿ
ಸ. ಹಿ. ಪ್ರಾ. ಶಾಲೆ ಹಾಲ್ದೊಡ್ಡೇರಿ
ಶಿರಾ ತಾಲೂಕು

# ರಾಜ್ಯ ಮಟ್ಟದ ಕವಿಗೋಷ್ಠಿ ಸ್ಥಳೀಯ ಸಾಧಕರಿಗೆ ಸನ್ಮಾನ ಕಾರ್ಯಕ್ರಮ



ತನುಶ್ರೀ ಪ್ರಕಾಶನ ಸಂಸ್ಥೆ ಸೂಲೇನಹಳ್ಳಿ ವತಿಯಿಂದ ಆಯೋಜಿಸಿದ್ದ ತನುಶ್ರೀ ಪ್ರಕಾಶನ ಉದ್ಘಾಟನೆ ಮತ್ತು ಲೋಗೋ ಲೋಕಾರ್ಪಣೆ ರಾಜ್ಯ ಮಟ್ಟದ ಪ್ರಶಸ್ತಿ ಪ್ರದಾನ ಸಮಾರಂಭ ಜೊತೆಗೆ ರಾಜ್ಯ ಮಟ್ಟದ ಕವಿಗೋಷ್ಠಿ ಸ್ಥಳೀಯ ಸಾಧಕರಿಗೆ ಸನ್ಮಾನ ಕಾರ್ಯಕ್ರಮ ಅದ್ದೂರಿಯಾಗಿ ನಡೆಯಿತು ಕಾರ್ಯಕ್ರಮ ಅಧ್ಯಕ್ಷತೆಯನ್ನು ಶ್ರೀಯುತ ಚೆಲುವರಾಜ್ ಅಧ್ಯಕ್ಷರು ರೋಟರಿ ಕ್ಲಬ್ ವಹಿಸಿದ್ದರು ಕಾರ್ಯಕ್ರಮ ಪ್ರಾಸ್ತಾವಿಕ ನುಡಿ ಎಸ್. ರಾಜುಕವಿ ಸೂಲೇನಹಳ್ಳಿ ಪ್ರಕಾಶಕರು ತನುಶ್ರೀ ಪ್ರಕಾಶನ ಸೂಲೇನಹಳ್ಳಿ ಸಂಸ್ಥೆ ಧ್ಯೇಯ ಉದ್ದೇಶ ಅಚ್ಚುಕಟ್ಟಾಗಿ ತಮ್ಮ ನುಡಿಗಳಲ್ಲಿ ಹೇಳಿದರು ಕಾರ್ಯಕ್ರಮ ಉಧ್ಘಾಟನೆ ಶ್ರೀಯುತ ಹಿಪ್ಪರಗಿ ಸಿದ್ದರಾಮ ಸಾಹಿತಿಗಳು ಮತ್ತು ಸಂಘಟಕರು ಗಣಕರಂಗ ಧಾರವಾಡ ವಹಿಸಿ ನೇರವೇರಿಸಿದರು ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಟಿ. ಜೆ. ತಿಪ್ಪೇಸ್ವಾಮಿ ಪತ್ರಕರ್ತರು ಚಳ್ಳಕೆರೆ, ಶ್ರೀನಿವಾಸ್ ಮಳಲಗಿ ಕಾರ್ಯದರ್ಶಿಗಳು ಪುಷ್ಪವಲ್ಲಿ ಎನ್. ಎಂ. ಮುಖ್ಯೋಪಾಧ್ಯಾಯರು ಎಸ್. ಜೆ. ಎಂ. ಶಾಲೆ ಬಿಟ್ಟ ಚಿತ್ರದುರ್ಗ ಆನಂತರ ಪುಸ್ತಕ ಬಿಡುಗಡೆಯನ್ನು ಶ್ರೀಯುತ ಡಾ. ನಲ್ಲಿಕಟ್ಟೆ ಸಿದ್ದೇಶ್ ಪ್ರಾಧ್ಯಾಪಕರು ನೇರವೇರಿಸಿದರು ಆನಂತರ ಕಾರ್ಯಕ್ರಮದ ಆಶಯ ನುಡಿ ಕೆ. ಶ್ರೀಧರ್ (ಸಿರಿ) ಸಂಸ್ಥೆ ಕುರಿತು ಮಾತನಾಡಿದರು ಕಾರ್ಯಕ್ರಮದಲ್ಲಿ ಕು. ಪ್ರತಿಭಾ ಮರಗೋಳ್ ಕಲಬುರಗಿ ಅವರ ಚೊಚ್ಚಲ ಕವನ ಸಂಕಲನ 'ನಾ ಕಂಡ ಕನಸು ಮತ್ತು ಸರಸ್ವತಿ ಕೆ. ನಾಗರಾಜ್ ಹಿರಿಯೂರು ಅವರ' ಪಿಸುಗುಡುವ ಹಕ್ಕಿ 'ಎಂಬ ಚೊಚ್ಚಲ ಕವನ ಸಂಕಲನ ಲೋಕಾರ್ಪಣೆ ಮಾಡಲಾಯಿತು ನಾ ಕಂಡ ಕನಸು ಕೃತಿ ಕುರಿತು ಡಾ. ಸಿದ್ದೇಶ್ ಕಾತ್ರಿಕೆಹಟ್ಟಿ ಮಾತನಾಡಿದರು ಆನಂತರ ಪಿಸುಗುಡುವ ಹಕ್ಕಿ ಕವನ ಸಂಕಲನ ಕುರಿತು ವರುಣ್ ರಾಜ್ ಅಧ್ಯಕ್ಷರು ವಿಚಾರ ಮಂಟಪ ಸಾಹಿತ್ಯ ವೇದಿಕೆ ತುಮಕೂರು ಸಂಕ್ಷಿಪ್ತವಾಗಿ ಮಾತನಾಡಿದರು. ಹಾಗೆಯೇ ತನುಶ್ರೀ ಪ್ರಕಾಶನ ಸೂಲೇನಹಳ್ಳಿ ವತಿಯಿಂದ ನೀಡುವ ರಾಜ್ಯ ಪ್ರಶಸ್ತಿಗೆ ಆಯ್ಕೆ ಆದ ತನುಶ್ರೀ ಕಲಾ ರತ್ನ ಪುರಸ್ಕಾರ, ಕಾವ್ಯ ರತ್ನ ಪುರಸ್ಕಾರ, ತನುಶ್ರೀ ಜೀವ ಸಮ್ಮಾನ ರಾಜ್ಯ ಪ್ರಶಸ್ತಿ, ತ್ರಿವೇಣಿ ರತ್ನ ಪ್ರಶಸ್ತಿ ಹಾಗೂ ಉದಯೋನ್ಮುಖ ಕಲಾ ಚೇತನಾ ಪ್ರಶಸ್ತಿ ಮತ್ತು ಉದಯೋನ್ಮುಖ ಕಾವ್ಯ ಚೇತನಾ ಪ್ರಶಸ್ತಿ ಪ್ರದಾನ ಮಾಡಲಾಯಿತು. ಕವಿಗೋಷ್ಠಿಯಲ್ಲಿ ಅಧ್ಯಕ್ಷತೆಯನ್ನು ಶ್ರೀಯುತ ಮರಿಕುಂಟೆ ತಿಪ್ಪಣ್ಣ ವಹಿಸಿದ್ದರು ಮುಖ್ಯ ಅತಿಥಿಗಳಾಗಿ ಅಂಜನ್ ಕುಮಾರ್ ರಾಜ್ಯಾಧ್ಯಕ್ಷರು ವಿಚಾರ ಮಂಟಪ ಸಾಹಿತ್ಯ ವೇದಿಕೆ ತುಮಕೂರು, ಷಕೀಬ್ ಕಣ್ದ್ಮನೆ ನವಿಲೇಹಾಳ್ ಉಸ್ತುವಾರಿ ಸಂಚಾಲಕರು, ರುಜುವಾನ್ ಕೆ. ಹೊಳಲ್ಕೆರೆ ಯುವ ಕವಿಗಳು ವಹಿಸಿದ್ದರು ಸುಮಾರು 40 ಕ್ಕೂ ಅಧಿಕ ಕವಿಗಳು ಭಾಗವಹಿಸಿದ್ದರು ಕಾರ್ಯಕ್ರಮ ನಿರೂಪಣೆ ಉದಯ್ ಬಡಿಗೇರ್ ಮೈದೂರು ಕಾರ್ಯಕಾರಿ ಸದಸ್ಯರು ತನುಶ್ರೀ ಪ್ರಕಾಶನ ಸೂಲೇನಹಳ್ಳಿ ನೇರವೇ–ರಿಸಿದರು ಕಾರ್ಯಕ್ರಮದಲ್ಲಿ ಪ್ರಾರ್ಥನೆ ಲಿಂಗರಾಜ್ ತಿಮ್ಮನಹಳ್ಳಿ ಗಾಯಕರು ನೇರವೇರಿಸಿದರು, ಸ್ವಾಗತ ಭಾಷಣ ಎಂ. ಚಿದಾನಂದ ಮೂರ್ತಿ ನೇರ್ಲಹಳ್ಳಿ ರಾಜ್ಯ ಪ್ರಧಾನ ಕಾರ್ಯದರ್ಶಿ (ಕರುನಾಡ ಹಣತೆ ಕವಿ ಬಳಗ) ಮಾಡಿದರು

ಕರುನಾಡ ಕಂದ
ಸಂಪುಟ-1 | ಸಂಚಿಕೆ-4
ದಿನಾಂಕ: 16-12-2021 | ಪುಟಗಳು: 16

# ಯೋಗಾಭ್ಯಾಸದಿಂದ ದೇಹ, ಮನಸ್ಸು ಉಲ್ಲಾಸ : ಬೂದಿಹಾಳ

ಯಲಬುರ್ಗಾ :ತಾಲೂಕಿನ ತಾಳಕೇರಿಯ ಹಿಂದುಳಿದ ವರ್ಗಗಳ ಮೊರಾರ್ಜಿ ದೇಸಾಯಿ ವಸತಿ ಶಾಲೆ ಯಲ್ಲಿ ಫ್ಲಿಟ್ ಇಂಡಿಯಾ ಕಾರ್ಯಕ್ರಮದ ಅಂಗವಾಗಿ ಪ್ರತಿದಿನ ಯೋಗಾಭ್ಯಾಸ ಶಿಬಿರ ನಡೆಯುತ್ತಿದೆ. ವಿದ್ಯಾರ್ಥಿ, ವಿದ್ಯಾರ್ಥಿನಿಯರಿಂದ ಪ್ರತಿದಿನ ಮುಂಜಾನೆ ಯೋಗದ ವಿವಿಧ ಆಸನಗಳ ಅಭ್ಯಾಸಗಳನ್ನು ಮಾಡಿಸಲಾಗುತ್ತಿದೆ.

ಯೋಗ ಶಿಬಿರವನ್ನು ಉದ್ದೇಶಿಸಿ " ಯೋಗಾಭ್ಯಾಸವು ಸದೃಡ ಮೈಕಟ್ಟು ಮತ್ತು ಮಾನಸಿಕ ನೆಮ್ಮದಿಗೆ ಯೋಗ ಹೆಚ್ಚು ಉಪಕಾರಿ. ಅದರಲ್ಲೂ ವಿದ್ಯಾರ್ಥಿಗಳಿಗೆ ಯೋಗ ಹಲವು ರೀತಿಯಲ್ಲಿ ಉಪಯೋಗಕ್ಕೆ ಬರಲಿದೆ. ಸ್ಮರಣ ಶಕ್ತಿ, ಬುದ್ದಿ ಮತ್ತೆ ಮತ್ತು ಭಾವನಾತ್ಮಕತೆ ಮೇಲೆ ಯೋಗ ಸಕಾರಾತ್ಮಕವಾಗಿ ಪರಿಣಾಮ ಬೀರುತ್ತದೆ. ಮಾನಸಿಕ ಒತ್ತಡ ನಿವಾರಿಸಿ, ಸಮಚಿತ್ತ ಕಾಯ್ದುಕೊಳ್ಳಲು ಯೋಗ ಮದ್ದಾಗಿದೆ' ಎಂದು ವಸತಿ ಶಾಲೆ ಪ್ರಾಂಶುಪಾಲ ರಮೇಶ್ ಬೂದಿಹಾಳ ಹೇಳಿದರು.

ಪ್ರಾಣಾಯಾಮ, ಶೀರ್ಷಾಸನ, ಸೂರ್ಯ ನಮಸ್ಕಾರ ಸೇರಿದಂತೆ ಇತರ ಆಸನಗಳನ್ನು ಅಭ್ಯಾಸ ಹೇಳು ಕೊಡಲಾಗುತ್ತದೆ.

ಯೋಗ ಉಪಯೋಗ: 'ಕಲಿಕೆಗೆ ಪೂರಕವಾಗಿ ಮಾನವನ ದೇಹ ಸ್ಪಂದಿಸಬೇಕು. ಈ ನಿಟ್ಟಿನಲ್ಲಿ ಪ್ರತಿಯೊಂದು ಅಯಾಮದಲ್ಲೂ ಸಕ್ರಿಯ ಚಟುವಟಿ-ಕೆಗೆ ಯೋಗ ಶಿಕ್ಷಣ ಸಹಕಾರಿ. ಆದ್ದರಿಂದ ಈ ಆಧುನಿಕ ಯುಗದಲ್ಲೂ ಶಾಲಾ ಕಾಲೇಜಿನ ಹಂತದಲ್ಲಿ ಮನ್ನಣೆ ಪಡೆದಿದೆ. ಚಿಕ್ಕ ವಯಸ್ಸಿನಲ್ಲಿ ಯೋಗ ಪಾಠ ಕಲಿಯುವುದರಿಂದ ಮಿದಳು, ಕಣ್ಣು ಸೇರಿದಂತೆ ಇತ್ಯಾದಿ ಸೂಕ್ಷ್ಮ ಅಂಗಗಳು ಚುರುಕುಗೊಳ್ಳಲು ಸಹಾಯವಾಗುತ್ತದೆ' ಎಂದು ದೈಹಿಕ ಶಿಕ್ಷಕರಾದ ರಮೇಶ್ ಹೇಳಿದರು.



'ಇಂದು ದೇಶದೆಲ್ಲೆಡೆ ಪ್ರಾಥಮಿಕ, ಪ್ರೌಢ ಶಾಲಾ ಶಿಕ್ಷಣದಲ್ಲಿ ಯೋಗ ಶಿಕ್ಷಣವನ್ನು ಕಡ್ಡಾಯಗೊಳಿಸಲಾಗಿದೆ. ಮನೋನಿಯಂತ್ರಣ, ಇಂದ್ರಿಯ ನಿಗ್ರಹ, ಅಧಿಕ ಕಾರ್ಯೋತ್ಸಾಹ ಮತ್ತು ಧನಾತ್ಮಕ ಚಿಂತನೆ ಮನಸ್ಸಿನಲ್ಲಿ ರೂಪಿಸಲು ಇದರಿಂದ ಸಾಧ್ಯವಾಗುತ್ತದೆ. ಶಿಸ್ತಿನ ಜೀವನ ಮತ್ತು ದೇಹದ ಹಲವಾರು ಅಂಗಗಳು ಕ್ರಿಯಾಶೀಲ ಚಟುವಟಿಕೆಗಳಲ್ಲಿ ತೊಡಗಿರುವುದರಿಂದ ತರಗತಿ, ಬೋಧನಾ ಕಲಿಕೆ, ಏಕಾಗ್ರತೆ ಮತ್ತು ಜ್ಞಾನಶಕ್ತಿ ಮಕ್ಕಳಲ್ಲಿ ಹೆಚ್ಚಾಗುತ್ತದೆ' ಎನ್ನುತ್ತಾರೆ ಯೋಗ ತರಬೇತುದಾರರು .

'ದೇಹವನ್ನು ಆರೋಗ್ಯವಾಗಿಟ್ಟುಕೊಳ್ಳಲು ಯೋಗ ಉತ್ತಮ ಸಹಕಾರಿ. ಯೋಗಾಭ್ಯಾಸದಿಂದ ನಮ್ಮ ಮನಸ್ಸು ಮತ್ತು ದೇಹ ಎರಡನ್ನು ಆರೋಗ್ಯವಾಗಿ-ಟ್ಟುಕೊಳ್ಳಬಹುದು' ಎನ್ನುವುದು ವಿದ್ಯಾರ್ಥಿನಿಯರಾದ 10 ನೇ ತರಗತಿಯ ರಕ್ಷಿತಾ ,ವೈಷ್ಣವಿ, ಅವರ ಮಾತು.

'ಯೋಗದಲ್ಲಿ ಉಸಿರಾಟ ಕ್ರಿಯೆ ಮತ್ತಿತರ ಸಮತೋಲನ ಆಸನಗಳು ಮಿದುಳಿನ ಎರಡು ಕಡೆಗಳಲ್ಲೂ ಸಮತೋಲನ ಕಾಪಾಡುತ್ತದೆ. ಮಿದುಳಿನ ಯೋಚನಾ ಲಹರಿ ಮತ್ತು ಚಟುವಟಿ-ಕೆ ಎರಡನ್ನೂ ಸಮಯೋಚಿತವಾಗಿ ಇಟ್ಟುಕೊಳ್ಳಲು ಅನುಕೂಲವಾಗುತ್ತದೆ' ಎನ್ನುತಾರೆ 8ನೇ ತರಗತಿ ವಿದ್ಯಾರ್ಥಿ ಆಕಾಶ.

ಈ ಸಂದರ್ಭದಲ್ಲಿ ವಸತಿ ಶಾಲೆ ಶಿಕ್ಷಕರಗಳಾದ ರವೀಂದ್ರ , ಕಿರಣಕುಮಾರ ತಳಕವಾಡ್ ವೃಂದಾ ಶೇಟ್,ವೀಣಾ ಗೌಡ್ರ,ಗಾಯತ್ರಿ ಹೀರೆಮಠ ,ಅವಮ್ಮ ಪೋಲಿಸ್ ಪಾಟೀಲ, ಬಾಲಮ್ಮ ಗುಳೇದ ,ಭೋದಕೇತರ ಸಿಬ್ಬಂದಿ ಮಹಾಂತಮ್ಮ, ಬಾಲರಾಜ, ಮಂಜು ಉಪಸ್ಥಿತರಿದ್ದರು. ಮಕ್ಕಳು ಶಿಬಿರದಲ್ಲಿ ಪಾಲ್ಗೊಂಡಿದ್ದರು.

# ಗೌರವಾನ್ವಿತ ಪ್ರಧಾನಮಂತ್ರಿ ನರೇಂದ್ರ ಮೋದಿಜಿಯವರಿಗೆ ಪತ್ರ ಬರೆದ 2500 ವಿದ್ಯಾರ್ಥಿಗಳು: ಶ್ರೀಮತಿ ಉಷಾ ಕುಲಕರ್ಣಿ





ಗಂಗಾವತಿ: ಕೇಂದ್ರ ಸರ್ಕಾರದ 75ನೇ ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವದ ಸವಿನೆನಪಿಗಾಗಿ ಅಂಚೆ ಇಲಾಖೆಯ ಸಹಕಾರದಿಂದ ಗಂಗಾವತಿಯ ಪ್ರಮುಖ ಶಾಲೆಗಳಲ್ಲಿ ಒಂದಾದ 'ಲಿಟಲ್ ಹಾರ್ಟ್ಸ್' ಶಾಲೆಯ 2500 ವಿದ್ಯಾರ್ಥಿಗಳಿಂದ ವಿಶೇಷವಾಗಿ ಅಂಚೆ ಇಲಾಖೆಯ ಚಿನ್ಹೆ ಹಾಗೂ ಅಮೃತ ಮಹೋತ್ಸವದ ಚಿನ್ಹೆಯನ್ನು ಬಳಸಿಕೊಂಡು ಅದ್ದೂರಿಯಿಂದ ಗೌರವಾನ್ವಿತ ಪ್ರಧಾನಮಂತ್ರಿಗಳಿಗೆ ಪತ್ರವನ್ನು ಬರೆಸಲಾಯಿತು.

ಪ್ರಮುಖವಾಗಿ ಎರಡು ವಿಷಯಗಳ ಬಗ್ಗೆ ವಿದ್ಯಾರ್ಥಿಗಳಿಂದ ಪತ್ರ ಬರೆಸಲಾಯಿತು. “ನನ್ನ ದೃಷ್ಟಿಯಲ್ಲಿ 2047 ರಲ್ಲಿ ಭಾರತದ ಸ್ಥಿತಿ ಹೇಗಿರಬೇಕು” ಹಾಗೂ “ಸ್ವಾತಂತ್ರ್ಯ ಸಂಗ್ರಾಮದ ಎಲೆಮರೆಯ ಕಾಯಿಗಳಂತಿದ್ದ ಸ್ವಾತಂತ್ರ್ಯ ಹೋರಾಟಗಾರರ ಸಂಕ್ಷಿಪ್ತ ಜೀವನ ಚರಿತ್ರೆ”.

ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷೆಯ ಯೋಜನೆ ಹಾಗೂ ಅಂಚೆ ಇಲಾಖೆಯ ಸಹಯೋಗದಲ್ಲಿ ಡಿಸೆಂಬರ್-01 ರಿಂದ 20ನೇ ತಾರೀಖಿನವರೆಗೆ 75 ಲಕ್ಷ ಪತ್ರ ಬರೆಯುವ ಅಭಿಯಾನವನ್ನು ಹಮ್ಮಿಕೊಳ್ಳಲಾಗಿದ್ದು, ಇದರಲ್ಲಿ ಈಗನ ವಿದ್ಯಾರ್ಥಿಗಳು ನಾಳಿನ ಪ್ರಜೆಗಳು, ಸ್ವಾತಂತ್ರ್ಯವನ್ನು ಉಳಿಸಿಕೊಂಡು ಹಾಗೂ ಭಾರತವನ್ನು 2047ರ ಒಳಗೆ ವಿಶ್ವಕ್ಕೆ ಗುರುತಿನ ಸ್ಥಾನ ತಂದುಕೊಡುವಂತ ಪ್ರಜೆಗಳು ನೀವಾಗಬೇಕು ಎಂದು ಗಂಗಾವತಿಯ ಅಂಚೆ ಕಛೇಋಇಯ ಪೋಸ್ಟ್ ಮಾಸ್ಟರ್ ಶ್ರೀಮತಿ ಉಷಾ ಕುಲಕರ್ಣಿ ತಿಳಿಸಿದರು ಹಾಗೂ ಸಂಸ್ಥೆಯ ಕಾರ್ಯದರ್ಶಿ ಶ್ರೀ ಜಗನ್ನಾಥ ಆಲಂಪಲ್ಲಿ ಮಾತನಾಡಿ, ಅಂಚೆ ಇಲಾಖೆಯ ಯೋಜನೆಯ ಬಗ್ಗೆ ಹಾಗೂ ಪತ್ರ ಬರೆಯುವ ಕಾರ್ಯಕ್ರಮಕ್ಕೆ ನಮ್ಮ ಶಾಲೆಯನ್ನು ಆಯ್ಕೆ ಮಾಡಿಕೊಂಡಿದ್ದಕ್ಕೆ ಅಂಚೆ ಇಲಾಖೆಗೆ ಧನ್ಯವಾದ ತಿಳಿಸಿದರು ಹಾಗೂ ಮುಖ್ಯೋಪಾಧ್ಯಾಯರಾದ ಶ್ರೀಮತಿ ಪ್ರಿಯಾಕುಮಾರಿಯವರು ಮಾತನಾಡುತ್ತಾ, ಅಂಚೆ ಇಲಾಖೆಯ ಪತ್ರ ಬರೆಸುವ ಅಭಿಯಾನ ಹಾಗೂ ವಿವಿಧ ಯೋಜನೆಗಳ ಕುರಿತಾಗಿ ಮಾಹಿತಿ ನೀಡುವುದರ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಹಾಗೂ ವಿರುಪಾಕ್ಷಪ್ಪ ಶಿರವಾರ ಮಾತನಾಡುತ್ತಾ, “ಲಿಟಲ್ ಹಾರ್ಟ್ಸ್” ಶಾಲೆಯು ವಿಶೇಷ ಹಾಗೂ ನವೀನ ರೀತಿಯ ಕಾರ್ಯಕ್ರಮಕ್ಕೆ ಹೆಸರಾಗಿದೆ ಹಾಗೂ ಜನರಲ್ಲಿ ಹಾಗೂ ಜನಪರ ಯೋಜನೆ, ಜನರಲ್ಲಿ ಮೂಡಿಸುವ ಕೆಲಸ ಮಾತ್ರವಲ್ಲದೇ ವಿಭಿನ್ನ ರೀತಿಯ ಪತ್ರ ಅಭಿಯಾನ ನಡೆಸಿಕೊಟ್ಟಿದ್ದಕ್ಕೆ ಶಾಲೆಯ ಎಲ್ಲ ಸಿಬ್ಬಂದಿಗಳಿಗೂ ಅಭಿನಂದನೆ ಸಲ್ಲಿಸಿದರು.



ಈ ಸಂದರ್ಭದಲ್ಲಿ ಶಾಲೆಯ ಶಿಕ್ಷಕರುಗಳಾದ ಪ್ರದೀಪ, ನೀಲಕಂಠಪ್ಪ, ಶ್ರೀಮತಿ ಯಶೋಧ, ಶ್ರೀಮತಿ ದೀಪಾ, ಶ್ರೀಮತಿ ಲಕ್ಷ್ಮೀ, ಶ್ರೀಮತಿ ವಾಸುಕಿ ಹಾಗೂ ಅಂಚೆ ಇಲಾಖೆಯ ಸಿಬ್ಬಂದಿಗಳಾದ ಕಾರ್ತಿಕ್, ಸೋಮಣ್ಣ ಯಾದವ್, ಬಂಡಿ ಮಾರುತಿ ಹಾಗೂ ಶಾಲೆಯ ಉಳಿದ ಸಿಬ್ಬಂದಿಗಳು ಉಪಸ್ಥಿತರಿದ್ದರು.

**ಶಿರವಾರ ವಿರುಪಾಕ್ಷಪ್ಪ ಕಲಾವಿದರು.**
**ಮೊ.ನಂ : 8147891192**

## ಎಲ್ಲರನ್ನು ಸರಿ ಮಾಡುವುದು ಕೆಲವರ ಚಿತ್ತ ಅವರಿಗೆ

ಗೊತ್ತಿರುವುದಿಲ್ಲಾ ಅವರ ಪಯಣ
ಯಾವ ಕಡೆ ಅಂತ ಯಾಕೆ ಅಂತ
ಗೊಂದಲವ ಇಟ್ಟು ನೋಡುತ್ತ
ಕುಳಿತಿರುವೆ ನೀ..... ಭಗವಂತ.....
ಅತಿಯಾದ ಮಾತಿನಿಂದ
ಮನಸ್ಸು ಹಾಳಾಗುವುದು
ಅತಿಯಾದ ಮೌನದಿಂದ
ಸಂಬಂಧ ಹಾಳಾಗುವುದು
ಮಾತು ಮೌನ ಎರಡು
ಮಿತವಾಗಿದ್ದರೆ, ಜೀವನ
ಸುಲಭವಾಗುವುದು.

**-ಸುವರ್ಣ ಅಂಗಡಿ**

## ಸಾಲವೇ ಹೊನ್ನ ಶೂಲ

ಸಾಲವನು ಕೊಂಬಾಗ ಹಾಲೋಗರ
ಉಂಡಂತೆ,ಸಾಲಿಗರು ಬಂದೆಳೆವಾಗ
ಕಿಬ್ಬನೆಯ ಕೀಲು ಮುರಿದಂತೆ ಸರ್ವಜ್ಞ,

ಎಂಬಂತೆ ಸಾಲವೇ ನೇಣಿನ ಕುಣಿಕೆಯ
ತ್ರಿಶೂಲ,
ಘನತೆ ಗೌರವ ಸ್ನೇಹ ವಿಶ್ವಾಸಗಳ
ಹರಾಜಾಕುವ ಪ್ರಕ್ರಿಯೆಗೆ ಮೂಲ,

ಕೊಟ್ಟೋನು ಕೋಡಂಗಿ ಈಸ್ಕೊಂಡೊನು
ವೀರಭದ್ರ ನಾಣ್ಣುಡಿಗೆ ಆತ್ಮಬಲ,
ಸಾಲವೇ ಶೂಲ,ಸಾಲವೇ ಆತ್ಮಬಲಕ್ಕೆ
ಹಾಲಹಲ,

ರೈತರ ಬದುಕನ್ನು ವಿಚಲಿತಗೊಳಿಸಿ
ಆತ್ಮಹತ್ಯೆಗೆ ಪ್ರಕ್ಷುಬ್ಧ,
ಮನಸ್ಸಿನ ಶಾಂತಿಯನ್ನು ಕಬಳಿಸಿ
ಕೌಟುಂಬಿಕ ಕಲಹಕ್ಕೆ ಉಪಲಬ್ಧ,

ಸಾಲದ ನೆಪವೊಡ್ಡಿ ಮೀಟರ್ ಬಡ್ಡಿಯ
ಕಪಿಮುಷ್ಟಿಗೆ ಸಿಲುಕುವ ಸಾಲಗಾರ,
ಸಾಕ್ಷಿದಾರನ ಸೌಜನ್ಯಕ್ಕೆ
ಸಾಲಗಾರ ಕಟ್ಟುಬಿದ್ದು ದೃತಿಗೆಡುವನು
ಪರಸ್ಪರ

ಕೋವಿಡ್ ಪರಿಸ್ಥಿತಿಯಲ್ಲಿ ಸಾಮಾನ್ಯ
ಜನರ
ರಕ್ತ ಹೀರುವ ದಲ್ಲಾಳಿಗಳಿಗೆ ಹಂಗಾಮ,
ಈ ನಿಟ್ಟಿನಲ್ಲಿ ಸಾಲ ಮಾಡಿ ನಿಯಮ ಬದ್ಧತೆಯ
ಪ್ರಕಾರ ನಡೆದರೆ ಕ್ಷೇಮ,

ಬಡ್ಡಿಯೆಂಬ ಚಕ್ರವ್ಯೂಹದಲ್ಲಿ ಸಿಲುಕುವುದನ್ನು
ಕಡೆಗಾಣಿಸಿ,
ಅನಾಹುತಗಳಿಂದ ದೂರವಿರುವ ಪರಿಯನ್ನು
ಪರಿಪಾಲಿಸಿ ಬದುಕನ್ನು ಸುರಕ್ಷಿತವಾಗಿಸಿ.

-ಬೋ.ಪಾ.ವೆಂಕಟೇಶ್,ಶಾಲಾಶಿಕ್ಷಕರು,
ಬೋಧನಹೊಸಹಳ್ಳಿ.

ಕರುನಾಡ ಕಂದ
ಸಂಪುಟ-1 । ಸಂಚಿಕೆ-4
ದಿನಾಂಕ: 16-12-2021 । ಪುಟಗಳು: 16

# ಅಪ್ಪನೆಡೆಗೆ ಒಂದು ಯಾತ್ರೆ

ಅಪ್ಪನ ಮಾತು ಹಿಡಿಸಲಿಲ್ಲ, ಅಪ್ಪನ ಹಠ ಇಷ್ಟ ಇಲ್ಲ, ಅವರ ನೋಟ ಇಷ್ಟ ಇಲ್ಲ, ಉಪದೇಶವೂ ಇಷ್ಟ ಇಲ್ಲ. ಅವರ ಸಹಭಾಗಿತ್ವವೂ ಬೇಕಿಲ್ಲ. ಅಪ್ಪ ಸದಾ ಅನಗತ್ಯ ಪ್ರಶ್ನೆ ಕೇಳುವ ಅಧಿಕ ಪ್ರಸಂಗಿ. .... ಹೌದು..

ನಾವು ಬೆಳೆದಂತೆ ಅಪ್ಪನ ಬಗೆಗಿನ ನಕಾರಾತ್ಮಕ ಪಟ್ಟಿಯೂ ಬೆಳೆಯತೊಡಗುತ್ತದೆ.

ಮದುವೆಯ ಬಳಿಕ ಅಮ್ಮನ, ಮನೆಯವರ ಜವಾಬ್ದಾರಿಯನ್ನು ಹೆಗಲ ಮೇಲಿರಿಸಿಕೊಂಡವನೇ ಅಪ್ಪ. ಲೌಕಿಕ ಸುಖಲೋಲುಪತೆಗಳಿಗೆ ಐಹಿಕ ಸುಖಾಡಂಬರಗಳಿಗೆ ಕುಟುಂಬಕ್ಕಾಗಿ ತಿಲಾಂಜಲಿ ಇಟ್ಟ ಅಪ್ಪ. ಬದುಕಿನಲ್ಲಿ ತಾಯಿ, ಪತ್ನಿ, ಸಹೋದರ, ಸಹೋದರಿ, ಅತ್ತೆ, ಮಾವ ಇವರೆಲ್ಲರ ಮಧ್ಯೆ ಸಣ್ಣಪುಟ್ಟ ಕಲಹಗಳನ್ನು ಮೆಟ್ಟಿ ನಿಂತು ಸಮದೂಗಿಸಿ ನ್ಯಾಯದ ತಕ್ಕಡಿಯಾಗಿ ಜೀವಿಸುತ್ತಿದ್ದ ಅಪ್ಪ, ಅತ್ತ ವಾಲಬಾರದು,

ಇತ್ತವೂ ವಾಲಬಾರದು.

ಎಲ್ಲರಿಂದಲೂ ಮಾತುಗಳ ಕೇಳುವ ಸಹನಾಮಯಿ ಅಪ್ಪ.......

ಕುಟುಂಬದ ಭದ್ರತೆಗಾಗಿ, ಪ್ರತಿಷ್ಠೆಗಾಗಿ, ಐಕ್ಯತೆಗಾಗಿ, ಸಮಾಧಾನಕ್ಕಾಗಿ ಸಂಕಷ್ಟಗಳನ್ನು ಪ್ರಕಟಿಸದೆ ಹೃದಯದೊಳಗೆ ಅದುಮಿಟ್ಟ ಅಪ್ಪ. ಬೇರೆಬೇರೆ ಉದ್ಯೋಗ, ವಿಧ ವಿಧದ ವೇಷ, ಬೇರೆ ಬೇರೆ ಊರು. ವಿವಾಹವಾಗಿ ಕುಟುಂಬಕ್ಕಾಗಿ ಹಲವಾರು ಸಮಸ್ಯೆಗಳನ್ನು ಸ್ವೀಕರಿಸಿ ಸಣ್ಣದಾದರೂ ಸುಂದರ ಮನೆ ಕಟ್ಟಿಸಿದ ಅಪ್ಪ. ......

ಮಕ್ಕಳು LKG ಯಿಂದ ಉನ್ನತ ವಿದ್ಯಾಭ್ಯಾಸ, ಟ್ಯೂಷನ್ ಹೀಗೆ ಮಕ್ಕಳ ಬಗ್ಗೆ ತುಂಬಾ ಆಸೆ ಆಕಾಂಕ್ಷೆಗಳನ್ನು, ಕನಸುಗಳನ್ನು ಕಟ್ಟಿಕೊಂಡೇ ಅಪ್ಪನ ಜೀವನ ಸವೆದು ಹೋಯಿತು.

ತಾನು ಹರಿದ ಬನಿಯನ್, ಹವಾಯಿ ಚಪ್ಪಲಿ ಧರಿಸಿದರೂ ಮಕ್ಕಳಿಗೆ ಬ್ರಾಂಡೆಡ್ ಐಟಮ್ ಕೊಡಿಸಿದವನು ಅಪ್ಪ......

ವಯಸ್ಸಾದಂತೆ, ಅನಾರೋಗ್ಯ ಪೀಡಿತರಾದಾಗ ಕ್ಷೀಣರಾಗುತ್ತಾರೆ. ಮಕ್ಕಳಿಗೆ ಭಾರ ಎಂದು ಅನಿಸತೊಡಗುತ್ತದೆ.

ಮಕ್ಕಳು ಕೂಡ ಅಮ್ಮನೊಂದಿಗೆ ಮಾತ್ರ ವ್ಯವಹರಿಸುತ್ತಾರೆ. ತನ್ನ ಇಷ್ಟಾರ್ಥಗಳನ್ನೆಲ್ಲ ಬದಿಗಿಟ್ಟು, ಕನಸ್ಸೆಲ್ಲ ನುಚ್ಚುನೂರು ಮಾಡಿ ತನ್ನನ್ನು ಯಾರೂ ಅರ್ಥ ಮಾಡಿಕೊಳ್ಳುವುದಿಲ್ಲ ಎಂಬ ವಿಷಾದ. ಇದು ಕೇವಲ ಒಂದು ಅಪ್ಪನ ಸಮಸ್ಯೆಯಲ್ಲ. ಸುತ್ತಮುತ್ತಲ ಲಕ್ಷಾಂತರ ಅಪ್ಪಂದಿರ ದುಃಖ.......

ಅಮ್ಮನ ಮಹತ್ವವನ್ನು ಎಲ್ಲರೂ ಕೊಂಡಾಡುತ್ತಾರೆ, ಕಣ್ಣೀರಿಡುವ ಅಮ್ಮನನ್ನು ಮಕ್ಕಳು ನೋಡುತ್ತಾರೆ. ಆದರೆ ಕಣ್ಣೀರಿಡುವ ಅಪ್ಪನನ್ನು ಕಾಣುವುದಿಲ್ಲ. ಅಪ್ಪ ಅವರೆದುರು ಕಣ್ಣೀರು ಇಡುವುದೂ ಇಲ್ಲ..

9 ತಿಂಗಳು ಹೊತ್ತ ಅಮ್ಮನ ಕಥೆಯನ್ನು ಮಕ್ಕಳು ಕೇಳುತ್ತಾರೆ. ಹೆರಿಗೆಯ ನೋವು, ಬೆಳೆಸಿದ ಕಷ್ಟ ಇವುಗಳ ಬಗ್ಗೆ ಕತೆ, ಕವನ, ನಾಟಕ, ಬರಹ ಸಾಕಷ್ಟಿದೆ.

ಪತ್ನಿಯ ಗರ್ಭ ಕಾಲದಲ್ಲಿ ಹುಟ್ಟುವ ಮಗುವಿನ ಆರೋಗ್ಯಕ್ಕಾಗಿ ಪೋಷಕಾಂಶ ಆಹಾರ, ಹಣ್ಣುಹಂಪಲು, ವೈದ್ಯರ ಶುಶ್ರೂಷೆ, ಮಕ್ಕಳ ತಜ್ಞರ ಬಳಿ ಓಡಾಡಿದ ಅಪ್ಪನ ಬಗ್ಗೆ ಯಾರೂ ಕೇಳಿರುವುದಿಲ್ಲ. ಆಕೆಯ ಹೆರಿಗೆಯ ಸಮಯದಲ್ಲಿ ಗಾಳಿ ಮಳೆಯನ್ನು ಲೆಕ್ಕಿಸದೆ ಆಸ್ಪತ್ರೆ ಯ ವರಾಂಡದಲ್ಲಿ ಸೊಳ್ಳೆಯ ಕಾಟವನ್ನು ಸಹಿಸಿ ಆಕೆಗೋಸ್ಕರ ಕಾವಲು ನಿಂತು, ನೋವನ್ನು ಅನುಭವಿಸಿದ ಪ್ರೀತಿಯ ಕತೆಯನ್ನು ಕೇಳಿರುವುದಿಲ್ಲ. ಹೇಳಿಯೂ ಇರುವುದಿಲ್ಲ. ರಾತ್ರಿಯನ್ನು ಹಗಲಾಗಿ ಪರಿವರ್ತಿಸಿ ದುಡಿದ ಕಾವಲುಗಾರನ ಕತೆಯನ್ನು ಕೇಳಿರುವುದಿಲ್ಲ......

ಇಷ್ಟೆಲ್ಲಾ ಸಂಕಷ್ಟಗಳನ್ನು ಮನೆ ಮಂದಿಗೆ ಹಂಚಿ ಮನಸ್ಸು ಹಗುರ ಮಾಡೋಣವೆಂದರೆ 'ನಿಮ್ಮ ಪುರಾಣ ಸಾಕು' ಎಂಬ ಪ್ರತ್ಯುತ್ತರ. ಅಪ್ಪನ ಪ್ರೀತಿಯ ಅಳೆಯುವುದು ಅಸಾಧ್ಯದ ಮಾತು. ಪ್ರೀತಿ ಪ್ರಕಟಿಸಲು ತಿಳಿಯದ ಅಪ್ಪ. ಮಕ್ಕಳನ್ನು ತಿದ್ದಲು ಹೊರಟರೆ 'ನಿಮ್ಮ ಹಳೆಯ ಕಾಲವಲ್ಲ' ಎಂದು ಹೇಳುವ ಅಮ್ಮಂದಿರು. ಇದೇ ಕಾರಣದಿಂದ ಅಪ್ಪ ಮನೆಯಲ್ಲಿ ಅನ್ಯನಾಗುತ್ತಾನೆ. ಮನೆಯೊಳಗಡೆ ಪಬ್ಜಿ, ಟಿಕ್‌ಟಾಕ್, ಗೇಮ್ಸ್, ಟಿ.ವಿ.ಸೀರಿಯಲ್‌ಗಳು ನೋಡುವಾಗ ನ್ಯೂಸ್ ನೋಡಲಾಗದ ಸ್ಥಿತಿಯಲ್ಲಿ ಅಪ್ಪ ಮೂಲೆಯಲ್ಲಿ ಯಾವುದೋ ಹಳೆಯ ಪೇಪರ್ ಓದುವಂತೆ ನಟಿಸುತ್ತಾನೆ. ಮಕ್ಕಳು ಅಪ್ಪನಿಗೆ ಮರುತ್ತರ ಕೊಡುವಾಗ ಅವರ ಕಣ್ಣುಗಳನ್ನೊಮ್ಮೆ ನೋಡಿ.

ಸಾಗರದಷ್ಟು ದುಃಖವನ್ನು ಮನಸ್ಸಿನೊಳಗಿಟ್ಟು ಅಭಿಮಾನದಿಂದ ತಲೆ ಎತ್ತಿ ನಡೆಯುವ ಅಪ್ಪನ ಗೌರವ ಮತ್ತು ಸಹನೆಯನ್ನು ತಿಳಿಯಬೇಕಾದರೆ ಪ್ರತೀ ಮಗನೂ ತಂದೆಯಾಗಬೇಕು. ಇದೆಲ್ಲವನ್ನೂ ನೆನೆದು ಪಶ್ಚಾತ್ತಾಪ ಪಡುವ ಹೊತ್ತಿನಲ್ಲಿ ಅಪ್ಪ ಕಾಣದ ಲೋಕಕ್ಕೆ ಯಾತ್ರೆ ಹೊರಟಿರುತ್ತಾನೆ. ಅಪ್ಪಾ, ಅಪ್ಪಾ ಎಂದು ಬೊಬ್ಬಿಟ್ಟು ಕರೆದರೂ ಮರಳಿ ಬಾರದ ಲೋಕಕ್ಕೆ. ಆದರೂ ಅಪ್ಪ ಕೊನೆಯವರೆಗೂ ಮಕ್ಕಳ ಯಶಸ್ಸಿಗಾಗಿಯೇ ಪ್ರಾರ್ಥಿಸುತ್ತಾನೆ. ಕೋಪ ತೋರಿಸುವ ಪ್ರೀತಿಗಾಗಿ ಅದನ್ನೆಲ್ಲಾ ನುಂಗುವ ಹೇಡಿಯಾಗಿದ್ದಾನೆ ಅಪ್ಪ..

– ಸಿದ್ದೀಕ್ ಕಲ್ಲಡ್ಕ. (ಮೂಲ ಮಲಯಾಳಂ.)

# ಅಂಬೇಡ್ಕರ್ ಮಹಾಪರಿನಿರ್ವಾಣ ದಿನ





**ಗಂಗಾವತಿ:** ನಗರದ ನ್ಯಾಯಾಲಯದ ಮುಂದುಗಡೆ ಇರುವ ಡಾ. ಬಾಬಾ ಸಾಹೇಬ್ ಬಿ.ಆರ್. ಅಂಬೇಡ್ಕರ್ ವೃತ್ತದಲ್ಲಿ ಡಾ. ಬಿ.ಆರ್. ಅಂಬೇಡ್ಕರ್‌ರವರ 65ನೇ ವರ್ಷದ ಮಹಾಪರಿನಿರ್ವಾಣ ದಿನವನ್ನು ಕರ್ನಾಟಕ ಪ್ರಗತಿಪರ ಪರಿಸರ ರಕ್ಷಣಾ ಹೋರಾಟ ಸಮಿತಿ ಹಾಗೂ ಸಿಪಿಐಎಂಎಲ್ ಲಿಬರೇಷನ್ ಪಕ್ಷದಿಂದ ಆಚರಿಸಲಾಯಿತು.

ಈ ಸಂದರ್ಭದಲ್ಲಿ ಡಾ. ರಾಜಶೇಖರ ನಾರನಾಳ, ವಕೀಲರಾದ ಸೈಯ್ಯದಾ ಭಾನು, ಶ್ರೀಮತಿ ರುದ್ರಮ್ಮ ಹಾಸಿನಾಳ, ರಮೇಶ ಗಬ್ಬೂರು, ಹುಸೇನಪ್ಪ ಹಂಚಿನಾಳ ವಕೀಲರು ಜೊತೆಗೆ ಪೌರಕಾರ್ಮಿಕರು, ಕಟ್ಟಡ ಕಾರ್ಮಿಕರು, ಆಟೋನಗರ ಮೆಕ್ಯಾನಿಕ್‌ಗಳು ಪಾಲ್ಗೊಂಡಿದ್ದರು.

**ಭಾರದ್ವಾಜ್** ಸಂಚಾಲಕರು.

ನೀನು ಹೃದಯಕ್ಕೆ ಲಗ್ಗೆ ಹಾಕಿರುವೆ
ನಾ ನಿನ್ನ ಒಲವಿಗೆ ತಲೆ ಬಾಗಿರುವೆ

ಜೀವವು ಪ್ರೇಮ ಮಿಡಿತದ ಸೆಳೆತ
ಒಳಗಿನ ಒಡಲ ಹಸಿವಿಗೆ ಕಾದಿರುವೆ

ಗಾಳಿಯಲು ನಿನ್ನ ಧ್ಯಾನದ ಹೊರತಿಲ್ಲ
ದೇಹದಿ ನುಸುಳಿ ಜೀವ ಹಿಂಡುತಿರುವೆ

ಸೋಕಿರುವ ನೋವಿಗೆ ಲೆಕ್ಕ ಸಿಕ್ಕಿಲ್ಲ
ಯಾರ ದೂಷಿಸಲಿ ಒಳಗೆ ಬೆಂದಿರುವೆ

ಹೊತ್ತಿದ ಅಂತರ್ಯಾದ ಅಗ್ನಿಗೆ ಲೆಕ್ಕವಿಲ್ಲ
ಪ್ರೇಮ ಪಾಶದಿ ಸಿಲುಕಿ ನೊಂದಿರುವೆ

ಚುಚ್ಚು ನುಡಿಗಳ ಸಹಿಸಿ ನಡೆಯುತಿರುವೆ
ಅಚ್ಚು ಹಾಕಿ ಅಳುಕದಂತೆ ಮಾಡಿರುವೆ

ನಭದ ತಾರೆಗಳು ನಾಚಿವೆ ನಮ್ಮನು ಕಂಡು
ಲೋಕದ ಕೊಂಕು ಮಾತಿಗೆ ಸೋಲದಿರುವೆ

ಮರುಳನಿರುವನು ಜಗಕೆ ಬೆಳಕು ತೋರಿಸಲು
ನಿನಗಾಗಿ ಧರೆಯಲಿ ಮೌನವಾಗಿ ಬದುಕಿರುವೆ

**–ಮರುಳಸಿದ್ದಪ್ಪ ದೊಡ್ಡಮನಿಹುಲಕೋಟಿ**

## ಮರ್ಕಟದ ಶತ್ರು

ಮನಸ್ಸಿನ ತುಮುಲತೆಯ ವೈಯ್ಯಾರ.
ಏರು-ತಗ್ಗುಗಳ ವಿಭಿನ್ನ ಅಪಾರ.
ಒಳಮನವನ್ನು ಅರಿಯುವ ಶೂರ.
ನಾನೆಂಬ ಭ್ರಮೆಯ ಪದರ. II
ಕೆಟ್ಟದ್ದೋ, ಒಳ್ಳೆಯದೋ ತಿಳಿಯದ ಗೊಂದಲ.
ಸುಖ-ದುಃಖ, ನೋವು-ನಲಿವು ಪೇರಿಸುವ
ಮಂದಾನಿಲ.
ದುಶ್ಚಟವೆಂಬ ದಾಸರ ಸಂಘವೇ ಚಪಲ.
ಮರ್ಕಟದ ಶತ್ರುವೆಂಬ ಮಂದಿರದ ಗೋಪಾಲ.
ಱಱ
ದುಷ್ಟನು ಮರುಳನೂ ಹೌದು.
ಕಷ್ಟವೂ ಸರಿದಾರಿ ಬಂತೆಂದು.
ಸಿಡುಕಿನ ಪಾತ್ರವೂ ಕಿರಿದು.
ಮನುಷ್ಯತ್ವ ಗುಣ ಹಿರಿದು. ಱಱ

**ಕಾವ್ಯನಾಮ : ಅರಸು –**
**ದೇವರಾಜು ಬಿ ಎಸ್. ಹೊಸಹೊಳಲು.**

# ಹದಗೆಟ್ಟಿದೆ ರಸ್ತೆ ದುರಸ್ಥಿಗೆ ಅನುಕೂಲ ಮಾಡಬೇಕೆಂದು ಹಿರಿಯರು ಯುವಕರು ವಿದ್ಯಾರ್ಥಿಗಳು ಅವರು ಆಗ್ರಹ



ರೋಡಲಬಂಡ(ತ)-ಗುರುಗುಂಟಾ ಗ್ರಾಮಗಳ ರಸ್ತೆ ದುರಸ್ಥಿಗಾಗಿ ಆಗ್ರಹಿಸಿದ ಗ್ರಾಮಸ್ಥರು ಹಟ್ಟಿ ಚಿನ್ನದ ಗಣಿ ಸಮೀಪದ ರೋಡಲಬಂಡ ದಿಂದ ಗುರುಗುಂಟಾ ಗ್ರಾಮಗಳಿಗೆ ಸಂಪರ್ಕ ಕಲ್ಪಿಸುವ ರಸ್ತೆಯು ಸಂಪೂರ್ಣ ಹದಗೆಟ್ಟಿದೆ ಇದನ್ನು ಕೂಡಲೇ ರಸ್ತೆ ದುರಸ್ತಿ ಮಾಡಿ ಸಾರ್ವಜನಿಕರಿಗೆ ಅನುಕೂಲ ಮಾಡಬೇಕೆಂದು ರೋಡಲಬಂಡ, ಯಲ್ಲಾಗಟ್ಟಾ, ಮಾಚನೂರ, ಗೌಡೂರು, ಬೆಚಲದೋಡಿ, ಹಾಗೂ ಗುರುಗುಂಟಾ ಗ್ರಾಮಗಳ ಹಿರಿಯರು ಯುವಕರು ವಿದ್ಯಾರ್ಥಿಗಳು ಅವರು ಆಗ್ರಹಿಸಿದರು. ಹಲವು ವರ್ಷಗಳಿಂದ ರಸ್ತೆ ದುರಸ್ತಿ ಇಲ್ಲ.ಸಂಪೂರ್ಣ ರಸ್ತೆ ಕಿತ್ತು ಹೋಗಿ ತಗ್ಗು ಗುಂಡಿಗಳು ನಿರ್ಮಾಣವಾಗಿದೆ. ಇದರಿಂದ ವೃದ್ಧರು ಗರ್ಭಿಣಿಯರು ವಿದ್ಯಾರ್ಥಿಗಳು ದಿನನಿತ್ಯ ವಾಗಿ ರಸ್ತೆಯ ಮುಖಾಂತರ ಹಾದು ಹೋಗುವುದರಿಂದ ಗ್ರಾಮಗಳ ಎಲ್ಲಾ ಜನರಿಗೆ ತುಂಬ ಕಷ್ಟ ಅನುಭವಿಸುವ ಪರಸ್ಥಿತಿ ನಿರ್ಮಾಣ ವಾಗಿದೆ.

ಇನ್ನಾದರೂ ಈ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿ ರಸ್ತೆ ದುರಸ್ತಿಗೆ ಕ್ರಮ ಕೈಗೊಳ್ಳಬೇಕೆಂದು ಸಾರ್ವಜನಿಕರು ಆಗ್ರಹಿಸಿದರು

# ಕೋವಿಡ್ ನಿಯಮಗಳು ರಾಜಕೀಯ ಪಕ್ಷಗಳಿಗೆ ಅನ್ವಯಿಸುವುದಿಲ್ಲ ಏಕೆ?-ಬಸವರಾಜ ಮ್ಯಾಗಳಮನಿ



ಗಂಗಾವತಿ: ದೇಶದಲ್ಲಿ ಕೋವಿಡ್, ಓಮಿಕ್ರಾನ್ 3ನೇ ಅಲೆ ಆರಂಭವಾಗಿದ್ದು, ಕರ್ನಾಟಕದಲ್ಲಿಯೂ ಕೋವಿಡ್ ಪ್ರಕರಣಗಳು ದಿನೇದಿನೇ ಹೆಚ್ಚಳವಾಗುತ್ತಿರುವುದರಿಂದ ಸರ್ಕಾರ ಜಾರಿಗೆ ತಂದಿರುವ ಕೋವಿಡ್ ನಿಯಮಗಳು ರಾಜಕೀಯ ಪಕ್ಷಗಳಿಗೆ ಹಾಗೂ ಜನಪ್ರತಿನಿಧಿಗಳಿಗೆ ಅನ್ವಯಿಸುವುದಿಲ್ಲವೇಕೆ ಎಂದು ಸರ್ವಾಂಗೀಣ ಅಭಿವೃದ್ಧಿ ಹೋರಾಟ ಸಮಿತಿಯ ಜಿಲ್ಲಾ ಅಧ್ಯಕ್ಷರಾದ ಬಸವರಾಜ ಮ್ಯಾಗಳಮನಿ ಸರ್ಕಾರವನ್ನು ಪ್ರಶ್ನಿಸಿದ್ದಾರೆ.

ಈ ಮೂಲಕ ಪತ್ರಿಕಾ ಹೇಳಿಕೆ ನೀಡಿದ ಅವರು ಜನಸಾಮಾನ್ಯರಿಗೆ ವಿಧಿಸುವ ದಂಡಗಳು ಹಾಗೂ ಮದುವೆ, ಅಂತ್ಯಕ್ರಿಯೆ ಇತ್ಯಾದಿಗಳಿಗೆ ಕಟ್ಟುನಿಟ್ಟಿನ ಕ್ರಮಗಳನ್ನು ವಿಧಿಸುತ್ತಾರೆ. ಆದರೆ ರಾಜಕೀಯ ಪಕ್ಷಗಳ ಜನಪ್ರತಿನಿಧಿಗಳ ಸಭೆ, ಸಮಾರಂಭಗಳಿಗೆ ಹಾಗೂ ಚುನಾವಣೆ ಪ್ರಚಾರಗಳಿಗೆ ಈ ನಿಯಮಗಳು ಅನ್ವಯಿಸುವುದಿಲ್ಲ ಏಕೆ? ಎಂಬುದು ಯಕ್ಷಪ್ರಶ್ನೆಯಾಗಿದೆ. ಕೊರೋನಾ ಹೆಚ್ಚಳಕ್ಕೆ ಸರ್ಕಾರವೇ ಕಾರಣವಾಗುತ್ತಿದೆ. ಕೊರೋನಾ ಸಂದರ್ಭದಲ್ಲಿ ಸಾಮಾನ್ಯ ಜನರ ಜೀವನ ಅಸ್ತವ್ಯಸ್ತವಾಗುವುದಕ್ಕೆ ಹಾಗೂ ಆರ್ಥಿಕ ತೊಂದರೆ ಅನುಭವಿಸುವುದಕ್ಕೆ ಸರ್ಕಾರವೇ ಕಾರಣವಾಗುತ್ತಿದೆ. ಯಾವುದೇ ಕಾರಣಕ್ಕೂ ಲಾಕ್‌ಡೌನ್ ಮಾಡುವ ನಿರ್ಧಾರ ಮಾಡಬಾರದು. ಹಾಗೂ ಶಾಲೆಗಳು ಬಂದ್ ಆಗದಂತೆ ನೋಡಿಕೊಳ್ಳುವುದರ ಮೂಲಕ ಮಕ್ಕಳ ಭವಿಷ್ಯದ ಬಗ್ಗೆ ಸರ್ಕಾರ ಚಿಂತನೆ ಮಾಡಬೇಕಾಗಿದೆ ಹಾಗೂ ಆನ್‌ಲೈನ್ ಕ್ಲಾಸ್, ವಿದ್ಯಾಗಮನ, ವಠಾರ ಶಾಲೆಗಳು ಇವುಗಳಿಂದ ಮಕ್ಕಳ ಶಿಕ್ಷಣ ಯಾವುದೇ ರೀತಿ ಪ್ರಯೋಜನವಾಗುವುದಿಲ್ಲ. ಮೊಬೈಲ್ ಬಳಕೆಯಿಂದ ಮಕ್ಕಳ ಮೇಲೆ ದುಷ್ಪರಿಣಾಮ ಬೀರುತ್ತದೆ. ಶಾಲೆಗಳು ಬಂದ್ ಆದಲ್ಲಿ ಮಕ್ಕಳು ಗಲ್ಲಿಗಲ್ಲಿಗಳಲ್ಲಿ, ರಸ್ತೆಗಳಲ್ಲಿ ಅಲೆದಾಡುತ್ತಾರೆ. ಶಾಲೆಗಳಲ್ಲಿ ಕೋವಿಡ್ ನಿಯಮಗಳನ್ನು ಪಾಲಿಸುವುದರಿಂದ ಸುರಕ್ಷಿತ ಸ್ಥಳಗಳಾಗಿರುತ್ತವೆ. ಹೀಗಾಗಿ ಯಾವುದೇ ಕಾರಣಕ್ಕೂ ಶಾಲೆಗಳನ್ನು ಬಂದ್ ಮಾಡದೇ, ನಾಡಿನ ಎಲ್ಲಾ ವರ್ಗದ ಸಾರ್ವಜನಿಕರಿಗೂ ಒಂದೇ ನಿಯಮ ಜಾರಿಗೊಳಿಸಬೇಕು. ಅಲ್ಲದೇ ಬಡಕುಟುಂಬದ ಹಾಗೂ ಬಿ.ಪಿ.ಎಲ್ ಕಾರ್ಡ್ ಹೊಂದಿದ ಕೋವಿಡ್ ಸೋಂಕಿತ ವ್ಯಕ್ತಿಗಳ ಚಿಕಿತ್ಸೆಯ ಅವಧಿಯವರೆಗೆ ಅವರ ಕುಟುಂಬಕ್ಕೆ ಪ್ರತಿದಿನ ರೂ. 500/-ಗಳಂತೆ ಉಪಜೀವನ ಪರಿಹಾರವನ್ನು ಅವರ ಬ್ಯಾಂಕ್ ಖಾತೆಗೆ ಪಾವತಿಸಬೇಕೆಂದು ಸರ್ಕಾರಕ್ಕೆ ಒತ್ತಾಯಿಸಿದ್ದಾರೆ.

ಬಸವರಾಜ ಮ್ಯಾಗಳಮನಿ ಜಿಲ್ಲಾ ಅಧ್ಯಕ್ಷರು, ಸರ್ವಾಂಗೀಣ ಅಭಿವೃದ್ಧಿ ಹೋರಾಟ ಸಮಿತಿ ಮೊ.ನಂ: 9164152522

ಕರುನಾಡ ಕಂದ
ಸಂಪುಟ–1 । ಸಂಚಿಕೆ–4
ದಿನಾಂಕ: 16–12–2021 । ಪುಟಗಳು: 16

## ವಿಜೃಂಭಣೆಯಿಂದ ನಡೆದ ಶ್ರೀ ರಾಮಲಿಂಗೇಶ್ವರ ಮತ್ತು ಸಂತೋಷಮಾತಾ ದೇವಿಗೆ ಲಕ್ಷದೀಪೋತ್ಸವ



ಗಂಗಾವತಿ: ತಾಲೂಕಿನ ಶ್ರೀರಾಮನಗರದ ಸ್ವಾಮಿ ವಿವೇಕಾನಂದ ಸೇವಾ ಸಂಸ್ಥೆ ಹಾಗೂ ಶ್ರೀ ಸಂತೋಷಮಾತಾ ದೇವಸ್ಥಾನ ಟ್ರಸ್ಟ್ ಕಮಿಟಿ (ರಿ) ಶ್ರೀರಾಮನಗರ ಸಹಯೋಗದಲ್ಲಿ ಶ್ರೀ ರಾಮಲಿಂಗೇಶ್ವರ ಮತ್ತು ಶ್ರೀ ಸಂತೋಷಮಾತಾ ದೇವಿಗೆ ಲಕ್ಷದೀಪೋತ್ಸವ ಕಾರ್ಯಕ್ರಮವನ್ನು ದಿನಾಂಕ: 04.12.2021 ಶನಿವಾರ ಸಂಜೆ 6:00 ಗಂಟೆಗೆ ಶ್ರೀರಾಮನಗರದ ಶ್ರೀ ಸಂತೋಷಮಾತಾ ದೇವಸ್ಥಾನದಲ್ಲಿ ವಿಜೃಂಭಣೆಯಿಂದ ಜರುಗಿತು ಎಂದು ಸ್ವಾಮಿ ವಿವೇಕಾನಂದ ಸೇವಾ ಸಂಘದ ಅಧ್ಯಕ್ಷರಾದ ಜಿ. ರಾಮಕೃಷ್ಣ ಪ್ರಕಟಣೆಯಲ್ಲಿ ತಿಳಿಸಿದರು.

ಈ ಕಾರ್ಯಕ್ರಮದಲ್ಲಿ ಬೆಳಿಗ್ಗೆ 12:00 ರಿಂದ 3:00 ರವರೆಗೆ 41ನೇ ವರ್ಷದ ವನಭೋಜನ ಕಾರ್ಯಕ್ರಮವೂ ನಡೆಯಿತು. ಸಂಜೆ: 06:00 ರಿಂದ 8:00 ವರೆಗೆ ಲಕ್ಷದೀಪೋತ್ಸವ ಕಾರ್ಯಕ್ರಮಗಳು ಹಾಗೂ ಶ್ರೀ ಅಯ್ಯಪ್ಪಸ್ವಾಮಿ ಪೂಜಾ ಮತ್ತು ಭಜನೆಗಳು ಜರುಗಿದವು. ಈ ಕಾರ್ಯಕ್ರಮಕ್ಕೆ ಶ್ರೀರಾಮನಗರ ಮತ್ತು ಸುತ್ತಮುತ್ತಲಿನ ಗ್ರಾಮಗಳ ಅನೇಕ ಭಕ್ತಾದಿಗಳು ಆಗಮಿಸಿ, ಲಕ್ಷದೀಪೋತ್ಸವದಲ್ಲಿ ಪಾಲ್ಗೊಂಡು ಯಶಸ್ವಿಗೊಳಿಸಿದರು ಎಂದು ತಿಳಿಸಿದರು.

ಸಮಾಜ ಸೇವಕರು ಹಾಗೂ ಶ್ರೀರಾಮನಗರದ ಸ್ವಾಮಿ ವಿವೇಕಾನಂದ ಸೇವಾ ಸಂಸ್ಥೆಯ ಅಧ್ಯಕ್ಷರಾದ ಜಿ. ರಾಮಕೃಷ್ಣ ಮತ್ತು ಶ್ರೀಮತಿ ದುರ್ಗಾರಾಣಿ ದಂಪತಿಗಳ ವಿವಾಹ ವಾರ್ಷಿಕೋತ್ಸವವು ಇತ್ತೀಚೆಗೆ 38ನೇ ವರ್ಷ ಪೂರೈಸಿದ್ದು, ಇದರ ಅಂಗವಾಗಿ ಶ್ರೀ ಸಂತೋಷಮಾತಾ ದೇವಸ್ಥಾನ ಟ್ರಸ್ಟ್ ಕಮಿಟಿ (ರಿ) ಶ್ರೀರಾಮನಗರ ವತಿಯಿಂದ ದಂಪತಿಗಳಿಗೆ ಸನ್ಮಾನ ಮಾಡಲಾಯಿತು.

ಈ ಕಾರ್ಯಕ್ರಮದಲ್ಲಿ ತಾ.ಪಂ ಮಾಜಿ ಅಧ್ಯಕ್ಷರಾದ ಮಹಮ್ಮದರಫಿ, ರಾಮಲಿಂಗೇಶ್ವರ ದೇವಸ್ಥಾನದ ಅಧ್ಯಕ್ಷರಾದ ಸಿದ್ದಣ್ಣ ಜಕ್ಲಿ, ಶ್ರೀ ವೆಂಕಟರಮಣ ದೇವಸ್ಥಾನದ ಅಧ್ಯಕ್ಷರಾದ ಸತ್ಯನಾರಾಯಣ ದೇಶಪಾಂಡೆ, ಶ್ರೀರಾಮನಗರ ಗ್ರಾ.ಪಂ ಸದಸ್ಯರಾದ ರಾಮಕೃಷ್ಣ, ದೇವಸ್ಥಾನ ಕಮಿಟಿ ಅಧ್ಯಕ್ಷರಾದ ಪೆದ್ದಕಾಪು, ಕಲಿಕಮೂರ್ತಿ ಸೇರಿದಂತೆ ಅನೇಕ ಗ್ರಾಮದ ಮುಖಂಡರು ಭಾಗವಹಿಸಿದ್ದರು.



ಮಾಹಿತಿಗಾಗಿ:ಜಿ. ರಾಮಕೃಷ್ಣ ಅಧ್ಯಕ್ಷರು ಸ್ವಾಮಿ ವಿವೇಕಾನಂದ ಸೇವಾ ಸಂಸ್ಥೆ, ಶ್ರೀರಾಮನಗರ ಮೊ. ನಂ: 9448228738

## ಬೇಳೂರು ರಾಘವೇಂದ್ರ ಶೆಟ್ಟಿ ಅವರಿಂದ ನಿರ್ಗತಿಕರಿಗೆ ಕಂಬಳಿ, ಮಾಸ್ಕ್ ವಿತರಣೆ



ಬೆಂಗಳೂರು : ಕರ್ನಾಟಕ ಕರಕುಶಲ ಅಭಿವೃದ್ಧಿ ನಿಗಮದ ಅಧ್ಯಕ್ಷರಾದ ಬೇಳೂರು ರಾಘವೇಂದ್ರ ಶೆಟ್ಟಿ ಅವರು ತಮ್ಮ ಹುಟ್ಟುಹಬ್ಬದ ನಿಮಿತ್ಯವಾಗಿ ಮೆಜೆಸ್ಟಿಕ್, ಸಿಟಿ ಮಾರ್ಕೆಟ್ ಹಾಗೂ ರಾಜಾ ಮಾರ್ಕೆಟ್‌ಗಳಲ್ಲಿ ರಾತ್ರಿ ಹೊತ್ತು ಮಲಗುತ್ತಿರುವ ಅನಾಥ, ಹಿಂದುಳಿದ ಮತ್ತು ನಿರ್ಗತಿಕರಿಗೆ ಬೆಡ್‌ಸಿಟ್, ಕಂಬಳಿ, ಮಾಸ್ಕ್, ಸ್ಯಾನಿಟೈಸ್ರ್ ನೀಡುವ ಮೂಲಕ ಮಾನವಿಯ ಮೌಲ್ಯಗಳನ್ನು ಮೆರೆದರು. "ಕೇಕ್, ಹಾರ, ಪುಷ್ಪ ಗುಚ್ಛಗಳನ್ನು ಬಳಸಿ ಅದ್ದೂರಿಯಾಗಿ ಹುಟ್ಟು ಹಬ್ಬವನ್ನು ಆಚರಿಸಿಕೊಳ್ಳುವದಕ್ಕಿಂತ, ಇಂತಹ ಬಡವ–ರಿಗೆ ಕೈಲಾದ ಸಹಾಯವನ್ನು ಮಾಡುವುದು ಉತ್ತಮ" ರಾತ್ರಿಯ ಹೊತ್ತು ಚಳಿಯಿಂದ ಬಳಲುತ್ತಿದ ಅದೆಷ್ಟೋ ಮುಖಗಳಲ್ಲಿ ಆನಂದ ಭಾಷ್ಪಗಳು ಉದುರಿದವು. ಈ ಸಂದರ್ಭದಲ್ಲಿ ಸಿರಿ ಮ್ಯೂಜಿಕ್‌ನ ವ್ಯವಸ್ಥಾಪಕರಾದ ಡಾ. ಸುರೇಶ ಚಿಕ್ಕಣ್ಣ ಮತ್ತು ಗಣ್ಯರು, ಆತ್ಮೀಯರು ಪಾಲ್ಗೊಂಡಿದ್ದರು.

## ಗಂಗಾವತಿಯ ಪ್ರಮುಖ ವೃತ್ತಗಳಲ್ಲಿರುವ ತಗ್ಗುಗುಂಡಿಗಳಿಂದ ಹೆಚ್ಚಿನ ಪ್ರಮಾಣದಲ್ಲಿ ಸಂಭವಿಸುತ್ತಿರುವ ಅಪಘಾತಗಳು



ಗಂಗಾವತಿ: ನಗರದ ರಾಣಾಪ್ರತಾಪಸಿಂಗ್ ಸರ್ಕಲ್‌ನ ಸುತ್ತಲೂ ಇರುವ ರಸ್ತೆಗಳಲ್ಲಿ ತಗ್ಗುದಿನ್ನೆಗಳು ಹೆಚ್ಚಾಗಿದ್ದು, ಇದರಿಂದ ಮಳೆ ನೀರು ನಿಂತು ರಸ್ತೆಯಲ್ಲಿ ಸಂಚ–ರಿಸುವ ವಾಹನಗಳು ಹೆಚ್ಚಿನ ಸಂಖ್ಯೆಯಲ್ಲಿ ಅಪಘಾತವಾಗುತ್ತಿದ್ದರೂ ನಗರಸಭೆ ಕಣ್ಣು ಮುಚ್ಚಿ ಕುಳಿತಿದೆ ಎಂದು ಪಬ್ಲಿಕ್ ಪವರ್ ಹೋರಾಟ ಸಮಿತಿಯ ಸಂಸ್ಥಾಪಕ ರಾಜ್ಯಾಧ್ಯಕ್ಷರಾದ ಶ್ರೀ ಆರ್.ಬಿ ಪಾಟೀಲ್ ಪ್ರಕಟಣೆಯಲ್ಲಿ ಖಂಡಿಸಿದರು.

ಅವರು ಇಂದು ರಾಣಾ ಪ್ರತಾಪ ಸಿಂಗ್ ವೃತ್ತದ ಹತ್ತಿರ ಮಾಧ್ಯಮಗಳೊಂದಿಗೆ ನಗರದ ರಸ್ತೆಗಳ ಅವ್ಯವಸ್ಥೆಗಳ ಬಗ್ಗೆ ಬೈಟ್ಸ್ ಕೊಡುತ್ತಾ ಮಾತನಾಡುತ್ತಿದ್ದರು. ಗಂಗಾವತಿ ನಗರವು ಅಮೃತ್ ಸಿಟಿ ಯೋಜನೆಗೆ ಒಳಪಟ್ಟಿದ್ದು, ನಗರದ ಅಭಿವೃದ್ಧಿಗೆ 130 ಕೋಟಿ ವೆಚ್ಚದ ಕ್ರಿಯಾ ಯೋಜನೆಗೆ ಅನುದಾನ ಮಂಜೂರು ಆಗಿರುತ್ತದೆ. ಆದರೆ ನಗರದಲ್ಲಿ ರಾಣಾಪ್ರತಾಪಸಿಂಗ್ ವೃತ್ತ, ಸಿ.ಬಿ.ಎಸ್ ವೃತ್ತ, ಮಹಾವೀರ ವೃತ್ತ, ಗಾಂಧಿ ವೃತ್ತ, ಬಸವಣ್ಣ ವೃತ್ತ, ಸೇವಾಲಾಲ್ ವೃತ್ತ, ಬಸವೇಶ್ವರ ವೃತ್ತ, ಕನಕದಾಸ ವೃತ್ತ ಸೇರಿದಂತೆ ಇನ್ನಿತರ ಪ್ರಮುಖ ವೃತ್ತಗಳ ರಸ್ತೆಗಳಲ್ಲಿ ತಗ್ಗುದಿನ್ನೆಗಳು ಬಿದ್ದು ಸುಮಾರು ತಿಂಗಳುಗಳು ಕಳೆದಿವೆ. ಇದರಿಂದ ಪಾದಾಚಾ–ರಿಗಳು, ಶಾಲಾ ವಿದ್ಯಾರ್ಥಿಗಳು, ಹಿರಿಯ ನಾಗರಿಕರು, ಮಹಿಳೆಯರು ಹಾಗೂ ಗರ್ಭಿಣಿ ಸ್ತ್ರೀಯರು, ಅಂಗವಿಕಲರು, ಸಾರ್ವಜನಿಕರ ಬೈಕ್‌ಗಳು, ಆಟೋಗಳು, ಬಸ್‌ಗಳು, ಲಾರಿಗಳು, ಆಂಬುಲೆನ್ಸ್ ಸಂಚರಿಸುವುದ–ರಿಂದ ಅನೇಕ ಅಪಘಾತಗಳು ಸಂಭವಿಸಿ, ಸಾಕಷ್ಟು ಸವಾರರು ಗಾಯಗೊಂಡು ಕೈಕಾಲು ಮುರಿದುಕೊಂಡ ಪ್ರಕರಣಗಳು ಹೆಚ್ಚಾಗಿವೆ. ಈಗಲಾದರೂ ನಗರಸಭೆಯ ಪೌರಾಯುಕ್ತರು ಎಚ್ಚೆತ್ತುಕೊಂಡು ಕೂಡಲೇ ಎಲ್ಲಾ ವೃತ್ತಗಳ ಹತ್ತಿರ ಹಾಗೂ ಪ್ರಮುಖ ರಸ್ತೆಗಳಲ್ಲಿರುವ ತಗ್ಗುಗಳನ್ನು ಮುಚ್ಚಿ, ನಗರದ ಅಭಿವೃದ್ಧಿಯನ್ನು ವೃದ್ಧಿಸುವ ಮೂಲಕ ಸಾರ್ವಜನಿಕರ ಸಂಚಾರಕ್ಕೆ ಅನುಕೂಲ ಮಾಡಿಕೊಡಬೇಕೆಂದು ಮನವಿ ಮಾಡಿಕೊಂಡರು. ಒಂದುವೇಳೆ ನಗರಸಭೆ ನಿರ್ಲಕ್ಷ್ಯವಹಿಸಿದರೆ ನಗರಸಭೆಯ ಮುಂದೆ ಹಾಗೂ ಪ್ರಮುಖ ವೃತ್ತಗಳಲ್ಲಿ ಮಾನವ ಸರಪಳಿ ಮುಖಾಂತರ ಉಗ್ರ ಪ್ರತಿಭಟನೆ ನಡೆಸಲಾಗುವುದೆಂದು ಎಚ್ಚರಿಸಿದರು.

ಮಾಹಿತಿಗಾಗಿ

**– ಶ್ರೀ ಆರ್.ಬಿ ಪಾಟೀಲ್, ಸಂಸ್ಥಾಪಕ ರಾಜ್ಯಾಧ್ಯಕ್ಷರು 9740421318**

## ಹತ್ತು ಸಾವಿರ ದೀಪ ಹಚ್ಚುವ ಮೂಲಕ ಶ್ರೀ ಮಾರುತೇಶ್ವರ ಕಾರ್ತಿಕೋತ್ಸವ ವಿಜ್ರಂಭಣೆಯಿಂದ ಜರುಗಿತು



ಗದಗ – ತಾಲ್ಲೂಕಿನ ತಿಮ್ಮಾಪೂರ ಗ್ರಾಮದ ಶ್ರೀ ಮಾರುತೇಶ್ವರ ದೇವರ ಕಾರ್ತಿಕೋತ್ಸವ ಕಾರ್ಯಕ್ರಮ ಕಾರ್ತಿಕ ಮಾಸದ ಪುಷ್ಯ ನಕ್ಷತ್ರ ದಿನವಾದ ಡಿಸೆಂಬರ್ 9 ಗುರುವಾರ 10 ಸಾವಿರ ದೀಪಗಳನ್ನು ಹಚ್ಚುವ ಮೂಲಕ ವಿಜ್ರಂಭಣೆಯಿಂದ ನಡೆಯಿತ್ತು .

ಅಂದು ಬೆಳಗ್ಗೆ ಅನೇಕ ಪೂಜಾ ಕೈಂಕರ್ಯಗಳಾದ ಪಂಚಾಮೃತ ಅಭಿಷೇಕ ಹಾಗೂ ರುದ್ರಾಭಿಷೇಕಗಳ ಪೂಜೆ ಸಲ್ಲಿಸಲಾಯಿತು. ಮೂರ್ತಿಗೆ ಹೂವು ಮತ್ತು ಚಿನ್ನಾಭರಣಗಳಿಂದ ಅಲಂಕ–ರಿಸಲಾಗಿತ್ತು. ದೇವಸ್ಥಾನವನ್ನು ವಿದ್ಯುತ್ ದೀಪ ಹಾಗೂ ಹೂವು ಮಾಲೆಗಳಿಂದ ಅಲಂಕರಿಸಿ ರಾತ್ರಿ 9 ಗಂಟೆಗೆ ಪಲ್ಲಕ್ಕಿ ಉತ್ಸವದ ಬಳಿಕ ಸಕಲ ಮಂಗಳಕರ ವಾದ್ಯಗಳಾದ ಡೊಳ್ಳಿ ಮೇಳ ಜಾಂಜ್ ಮೇಳ ಹಾಗೂ ಶಂಖನಾದವನ್ನು ಭಾರಿಸುವ ಮೂಲಕ ಸಾವಿರಾರು ಭಕ್ತರು ಗೋವಿಂದ ಗೋವಿಂದ ಎಂದು ಜಯಗೂಶಗಳನ್ನು ಕೂಗುತ್ತಾ 10 ಸಾವಿರ ದೀಪಗಳನ್ನು ಹಚ್ಚುವ ಮೂಲಕ ಕಾರ್ತಿಕೋತ್ಸವನ್ನು ವಿಜ್ರಂಭಣೆಯಿಂದ ನಡೆಯಿತು.

ಕರುನಾಡ ಕಂದ
ಸಂಪುಟ–1 । ಸಂಚಿಕೆ–4
ದಿನಾಂಕ: 16–12–2021 । ಪುಟಗಳು: 16

# ಬರದ ನಾಡಿನಲ್ಲಿ ಹನಿ ನೀರಾವರಿ ಮೂಲಕ ಚೀಯಾ ಸೀಡ್ ಬೆಳೆ ಬೆಳೆದು ಸೈ ಎನ್ನಿಸಿಕೊಂಡಿರುವ ರೈತನಯಶೋಗಾಥೆ

ರೈತದೇಶದ ನಾಡಿ ಮಿಡಿತ, ನೇಗಿಲ ಯೋಗಿಯ ಬೆವರು ನಮ್ಮ ನಿಮ್ಮೆಲ್ಲರ ಉಸಿರು ಹೊಸ ಕೃಷಿ ತಾಂತ್ರಿಕತೆ ಹೊರಣರೈತಯಶೋಗಾಥೆಯ ಬಗ್ಗೆ ಇಲ್ಲಿದೆ

ನಿಮಗೆಲ್ಲಗೊತ್ತಿರುವ ಹಾಗೇ ಸಿರಿಧಾನ್ಯಗಳಿಗೆ ಭಾರಿಡಿಮ್ಯಾಂಡ್‌ಇದೆ. ಅದರಂತೆ ಕೆಲವೊಂದು ವಿದೇಶಿ ಸಿರಿಧಾನ್ಯಗಳು ಹೆಚ್ಚಿನಜನಪ್ರಿಯತೆ ಪಡೆಂಯುತ್ತಇದ್ದಾವೆ,



ಇದರಲ್ಲಿರುವಅಗಾಧ ಪೋಷಕಾಂಶಗಳಿಂದ ಹೆಚ್ಚಿನ ಬೇಡಿಕೆ ಮತ್ತು ಬೆಲೆ ಕೂಡಉಂಟು.

ಇಂತಹ ವಿಶೇಷ ಬೆಳೆ ಬೆಳೆದಿರುವ ರೈತರ ಹೆಸರುಮಲ್ಲನಗೌಡಎಸ್ ಪಾಟೀಲ್, ಬಾಗಲಕೋಟೆಜಿಲ್ಲೆಯ ಹುನಗುಂದತಾಲ್ಲೂಕಿನತಿವ 'ಸ್ಮಾಪುರಗ್ರಾಮದವರಾದಇವರು. ಬರದ ನಾಡಿನಲ್ಲಿ ಹನಿನೀರಾವರಿ ಮೂಲಕ ಚೀಯಾ ಸೀಡ್ ಬೆಳೆ ಬೆಳೆದು ಸೈ ಎನ್ನಿಸಿಕೊಂಡಿದ್ದಾರೆ ಬನ್ನಿ ಅವರ ಮನೆಯಂಗಳ ( ಮನೆಯ ಹೆಸರುಕೂಡ ನೇಗಿಲ ಯೋಗಿ) ಮುಂಭಾಗದಲ್ಲಿಎರಡುಎಕರೆಜಮೀನಿನಲ್ಲಿ ಬೆಳೆದಿರುವ ಚೀಯಾ ಸೀಡ್ ಬೆಳೆಯ ಬಗ್ಗೆ ಸಂಪೂರ್ಣ ಮಾಹಿತಿ ಈ ಲೇಖನದಲ್ಲಿ.

'ಕಳೆದ 25 ವರ್ಷದಿಂದರೈತ ವೃತ್ತಿಯಲ್ಲಿತೊಡಗಿಸಿಕೊಂಡಿದ್ದೆನೆ ಎಂದಿಗೂ ನಾನು ಕೃಷಿಯಲ್ಲಿ ಸೋತಿದ್ದೆಇಲ್ಲಎಂದು ಹೇಳುವ ಅವರು ಸಾಂಪ್ರದಾಯಿಕಕೃಷಿಯೊಂದಿಗೆ ವಿದೇಶಿ ಗಿಡ ಮೂಲಿಕೆಯಚೀಯಾ ಸೀಡ್ ಸಸಿ ಬೆಳೆಯುವ ಮೂಲಕ ಎಲ್ಲರಲ್ಲೂಅಚ್ಚರಿ ಮೂಡಿಸಿದ್ದಾರೆ.

ಏನಿದು ಈ ಚೀಯಾ ಸೀಡ್ ಮತ್ತುಇದರ ಬೇಸಾಯದಕ್ರಮ

ಈ ಭಾರಿಅತಿ ಹೆಚ್ಚು ಬೇಡಿಕೆಇರುವಚಿಂ–ಯಾ ಬೀಜಗಳನ್ನು ( ಇದು ಮೂಲತಹ: ಮೆಕ್ಸಿಕೊ ಮತ್ತುದಕ್ಷಿಣಅಮೆರಿಕದಿಂದ ಬಂದಂತಹವಲಸೆ ಬೆಳೆ ) ಇದೊಂದುಗಿಡ ಮೂಲಿಕೆ ಸಸ್ಯವಾಗಿದ್ದು ಹೆಚ್ಚಿನ ನಾರಿನ ಅಂಶಗಳನ್ನು ಇದು ಒಳಗೊಂಡಿದೆ. ಅತ್ಯಂತಕಡಿಮೆ ಫಲವತ್ತತೆಇರುವ ಮಣ್ಣಿನಲ್ಲೂಇದರ ಬೇಸಾಯ ಸಾಧ್ಯ.

ಸಸಿಗಳನ್ನು ನಾಟಿ ಮಾಡಿದ 80 ರಿಂದ 95 ದಿನಗಳಲ್ಲಿ ಬೆಳೆ ಕಟಾವಿಗೆ ಸಿದ್ಧವಾಗಲಿದೆ ಪ್ರತಿಎಕರೆಗೆ 3 ರಿಂದ 4 ಕ್ವಿಂಟಾಲ್ ಇಳುವರಿ ಕೊಡಲಿದೆ .ಕರ್ನಾಟಕದಲ್ಲಿ ಮುಂಗಾರು ಮತ್ತು ಹಿಂಗಾರಿನಲ್ಲಿಇದರ ಬೇಸಾಯ ಕೈಗೊಳ್ಳಬಹುದು. ಕಡಿಮೆ ನೀರಿನಲ್ಲೂ ಹುಲುಸಾಗಿ ಬೆಳೆಯುವ ಶಕ್ತಿ ಇದರಲ್ಲಿದೆ.

ಮೆಕ್ಸಿಕೊ ಮತ್ತುದಕ್ಷಿಣಅಮೆರಿಕಾದಿಂದ ವಲಸೆ ಬಂದಿರುವಗಿಡ ಮೂಲಿಕೆಯಾಗಿರುವ ಸಸ್ಯ ಪ್ರಪಂಚದದ್ಯಾಂತ ಬೇಡಿಕೆಯಾಗಿದೆ. ಇದರಲ್ಲಿರುವಔಷಧಿಯ ಗುಣಗಳು ಬಹಳ ಮುಖ್ಯವಾಗಿದ್ದು ಈ ಚೀಯಾ ಬೀಜಗಳು ಹೆಚ್ಚಿನ ಪೋಷಕಾಂಶಗಳಿಂದ ಕೂಡಿದೆ, ಮುಖ್ಯವಾಗಿ ಹೆಚ್ಚಿನ ನಾರಿನಾಂಶದಿಂದಕೂಡಿದೆ ಪ್ರತಿ ಶತ 30 ರಿಂದ 35 ಪರ್ಸೆಂಟ್ ನಾರಿನಾಂಶದಿಂದಕೂಡಿದೆ, ಪ್ರೋಟಿನ್ ಶೇಕಡಾ 20 ಪರ್ಸೆಂಟ್, ಎಣ್ಣೆ ಅಂಶ 30 ಪರ್ಸೆಂಟ್ ಹಾಗೂ ಅದರಜೊತೆಗೆ ಒಮೇಗಾ 3 ಫ್ಯಾಟಿ ಆಸಿಡ್, ಆಮ್ಲವಿದೆಇದು ನಮ್ಮದೇಹದಲ್ಲಿಉತ್ಪತ್ತಿಯಾಗುವುದಿಲ್ಲ ಈ ಸಸ್ಯದ ಮೂಲಕ ಮಾತ್ರ ಪಡೆಯಲಿಕ್ಕೆ ಸಾಧ್ಯವಾಗುತ್ತಿದೆ ಮತ್ತುಇದರ ಮತ್ತೊಂದು ವಿಶೇಷತೆ–ಎಂದರೆಇದರಲ್ಲಿ ಸಂಪತ್ತು ಭರಿತ ಖನೀಜಂಶಗಳನ್ನು ಹೊಂದಿದೆಅದರಲ್ಲೂಕ್ಯಾಲ್ಸಿಯಂ ಹಾಲಿಗಿಂತಐದು ಪಟ್ಟು ಹೆಚ್ಚಿದೆಇನ್ನು ಮ್ಯಾಗ್ನಶಿಯಂ, ಒಳಗೊಂಡ ದೇಹಕ್ಕೆ ಬೇಕಾಗುವ ಎಲ್ಲರೀತಿಯ ಖನೀಜಗಳು ಇದರಿಂದದೊರೆಯುತ್ತದೆ

## ಹನಿ ನೀರಾವರಿಅಧಿಕ ಇಳುವರಿ ...

### ಏಷ್ಯಾದದೊಡ್ಡ ಹನಿ ನೀರಾವರಿಯೋಜನೆ – ರಾಮಥಾಳ –ಮರೋಳ ಡ್ರಿಪ್‌ಇರಿಗೇಷನ್ ಪ್ರಾಜೇಕ್ಟ್

ಕೃಷ್ಣ ಭಾಗ್ಯ ಜಲ ನಿಗಮ ವ್ಯಾಪ್ತಿಯಲ್ಲಿ ಈ ಯೋಜನೆಜಾರಿ,ಕೃಷಿ ಇಲಾಖೆ, ಕರ್ನಾಟಕ ಸರ್ಕಾರಕೂಡ ಈ ಯೋಜನೆಯ ಭಾಗೀದಾರರು. ನೀರಾವರಿ ಕಂಪನಿ: ನೇಟಾಫಿಮ್ ಮತ್ತುಎಂಇಐಎಲ್.( ವೆಸ್ಟ್‌ರ್ನ್ ಪ್ಯಾಕೇಜ್.) ಡಿಮ್ಯಾಕ್ ಅನುಷ್ಠಾನ ಘಟಕ( ಹನಿಯಿಂದ ನೇರ ಮಾರುಕಟ್ಟೆ ಕೃಷಿ ಕಾರಿಡಾರ್) ಮೂಲಕ ರೈತರು ಬೆಳೆಯುವ ಬೆಳೆಗಳಿಗೆ ದಲ್ಲಾಳಿ ಮುಕ್ತ ಮಾರುಕಟ್ಟೆಕಲ್ಪಿಸುತ್ತಿದ್ದಾರೆ. ನೇಟಾಫಿಮ್ ವ್ಯಾಪ್ತಿಯಲ್ಲಿ ಬರುವ ಬಾಗಲಕೋಟೆಜಿಲ್ಲೆಯ ಹುನಗುಂದತಾಲ್ಲೂಕಿನತಿಮ್ಮಾಪುರಗ್ರಾಮದ ಮಲ್ಲನಗೌಡಎಸ್ ಪಾಟೀಲ್‌ಅವರು ಹನಿ ನೀರಾವರಿ ಮೂಲಕ ಬರದ ನಾಡಿನಲ್ಲಿಚೀಯಾ ಸೀಡ್ ಬೆಳೆದಿರುವ ಅವರೊಂದಿಗೆನಡೆಸಿದಸಂಕ್ಷಿಪ್ತ ಸಂದರ್ಶನಇಲ್ಲಿದೆ

ಈ ವಿನೂತನ ಬೆಳೆ ಇಂದುಅಂತರರಾಷ್ಟ್ರೀಯ ಬೆಳೆ ಎಂದು ಮಾನ್ಯತೆ ಪಡೆದಿದೆ. ಮೂರು–ರೀತಿಯಚೀಯಾ ಬೀಜಗಳನ್ನು ನೋಡಬಹುದು ಮೊದಲನೇಯದುಕಪ್ಪು, ಬಿಳಿ ಹಾಗೂ ಬೂದು ಬಣ್ಣದಲ್ಲಿ ಸಿಗುತ್ತದೆ.

ಇದೊಂದು ಮೂರರಿಂದ ಮೂರುವರೆ ತಿಂಗಳಿನಲ್ಲಿ ಬೆಳೆಯಬಹುದಾದ ಬೆಳೆ ಪ್ರತಿಯೊಂದು ಎಲೆ, ಬೇರುಕಾಂಡ ಬಹಳಷ್ಟು ಉಪಯೋಗಗಳಿಂದ ಕೂಡಿದೆ. ಮೈಸೂರಿನ ಸಿಎಫ್‌ಟಿಆರ್‌ಐ ಉತ್ತಮ ತಳಿಯ ಅಭಿವೃದ್ಧಿ ಪಡಿಸಿದ್ದಾರೆ ಇದನ್ನು ನೋಡಿ ನಾನು ಮೈಸೂರಿನಿಂದತಂದುಎರಡು–ಎಕರೆ ಭೂಮಿಯಲ್ಲಿ ಬೇಸಾಯ ಮಾಡಿದ್ದಿನಿ ಎನ್ನುತ್ತಾರೆಮಲ್ಲನಗೌಡ ಪಾಟೀಲ್‌ಅವರು.

ಒಟ್ಟಾರೆ ಹೆಚ್ಚು ಪೋಷಕಾಂಶಗಳನ್ನು ಒಳಗೊಂಡಿರುವ ಈ ಸಸ್ಯಕಡಿಮೆಅವಧಿಯಲ್ಲಿ ಬರದ ನಾಡಿನಲ್ಲೂಕೂಡಉತ್ಕೃಷ್ಟವಾಗಿ ಬೆಳೆಯಬಹುದು, ರೈತರಿಗೆ ವರವಾಗುವುದರಲ್ಲಿಯಾವುದೇರೀತಿಯ ಸಂಶಯವಿಲ್ಲ.

ಇದು ಹೆಚ್ಚಿನ ಪೋಷಕಾಂಶಗಳೊಂದಿಗೆ ಒಮೇಗಾ 3 ಕೂಡಇದರಲ್ಲಿ ಹೆಚ್ಚಿದೆಇದರೊಂದಿಗೆ ಕೆಲವೊಂದು ರೋಗಗಳಿಗೆ ರಾಮಬಾಣ–ಕೂಡಇದಾಗಿದೆ. ಈಗಾಗಿ ಮಾರುಕಟ್ಟೆಯಲ್ಲಿಇದರ ಬೆಲೆ ಕೆಜಿಗೆ 1000 ರೂಪಾಯಿವರೆಗೆಇದೆ.

ಇವುಗಳ ಬೇಸಾಯಕ್ಕೆ ಫಲವತ್ತದಾ ಭೂಮಿ



ಬೇಕಾಗಿಲ್ಲ ಮತ್ತು ಬರದ ಪರಿಸ್ಥಿಯನ್ನು ತಡೆದು ಬೆಳೆಯುವ ಶಕ್ತಿ ಇರುವುದರಿಂದ ಮಳೆಯಾಶ್ರಿತ ರೈತರಿಗೂಇದು ವರದಾನವಾಗಿದೆಎಂದರೆತಪ್ಪಲ್ಲ.

**ಚೀಯಾ ಸೀಡ್ ಬೇಸಾಯದಕ್ರಮದ ಬಗ್ಗೆ ಹೆಚ್ಚಿನ ಮಾಹಿತಿ ಪಡೆಯಲುದೂರವಾಣಿ ಸಂಖ್ಯೆ: 9901566905 ಸಂಪರ್ಕಿಸಬಹುದು.**

# 'ಹಳ್ಳಿಯ ಜನ ಮೌಢ್ಯತೆಯ ಬಿಟ್ಟು ಸತ್ಯ ದರ್ಶನದ ಕಡೆ'

ದಕ್ಷಿಣಕರ್ನಾಟಕದಒಂದು ಚಿಕ್ಕ ಹಳ್ಳಿಯ ಭಾಗದಲ್ಲಿ ಬಡ ಕುಟುಂಬದಲ್ಲಿ ಜನಿಸಿದ ಮ್ಯಾಗಳ ಮನೆ ಕರೆಪ್ಪ ಅವನ ತಾಯಿ ಕರಿಯವ್ವ ಅದರ ಜೊತೆಗೆ ಅವನ ಮಕ್ಕಳು ಗವಿಯಪ್ಪ , ಮತ್ತು ಮಲ್ಲಮ್ಮ ಮಗಳು ಜೀವನ ನಡೆಸುತ್ತಿದ್ದ ಆತನ್ನು ತನ್ನ ವೃತ್ತಿ ಯಾದ ಕಮ್ಮಾರಿಕೆ ಮಾಡುತ್ತಿದ್ದ ಹೀಗೆ ಜೀವನ ನಡೆಸುತ್ತಿದ್ದ ಒಂದು ದಿನ ಅಚಾನಕ್ ವಿಷಯವನ್ನು ತಿಳಿದು ಗಾಬರಿಯಾದ ಏನು ಆ ವಿಷಯ ಅಂ–ದರೆ ಏನು ಅವನಿಗೆ ತಿಳಿಯದೇ ಮನೆಗೆ ಬಂದು ನೋಡಿದ ಇಬ್ಬರು ಮಕ್ಕಳಿಗೆ ಈ ಯಾವ ರೋಗ ಬಂದಿದೆ ಎಂದು ತಿಳಿಯದು . ಅವರ ಮನೆಗೆ ಒಂದೇ ಅಲ್ಲ ಆ ಹಳ್ಳಿಯಲ್ಲಿ ಕೂಡ ಕೆಲವು ಮನೆಗೆ ಇಂತಹ ರೋಗ ಬಂದು ವಕ್ಕರಿಸಿತು ಆ ಊರಿನ ಜನರಿಗೆ ಏನು ಮಾಡಬೇಕು ಏನು ದೋಚಿದ ಆಯಿತು ಒಮ್ಮೆ ಊರಿನ ಆಚೆ ಇರುವ ಎಷ್ಟೋ ವರ್ಷ ತೆರೆಯದೇ ಇರುವ ಮಾರೆಮ್ಮನ ದೇವಸ್ಥಾನವು ಬೇಗನೆ ತೆಗೆಯಬೇಕು ,ಎಂದು ಆಲೋಚಿಸ ತೊಡಗಿದರು ಇದಕ್ಕೆ ಪ್ರತಿಯಾಗಿ ಊರಿನ ಪಂಚಾಯಿತಿ ಕಟ್ಟೆಗೆ ಬಂದು ಸೇರಿ ಎಲ್ಲರೂ ಒಂದು ತೀರ್ಮಾನವನ್ನು ತೆಗೆದುಕೊಳ್ಳಬೇಕು ಎಂದು ತಿಳಿಸಿದರು .ಹಾಗೆಯೇ ತೀರ್ಮಾನಗಳು ತೆಗೆದುಕೊಂಡು ಆ ಊರಿನ ಆಚೆ ಇರುವ ಮಾರೆಮ್ಮ ದೇವಸ್ಥಾನ ತೆಗೆದು ವಿಜೃಂಭಣೆಯಿಂದ ಊರಿನ ಜನರು ಎಲ್ಲರೂ ಸೇರಿ ಪೂಜೆ ಪುನಸ್ಕಾರಗಳನ್ನು ನೆರವೇರಿಸಿದರು .ಇಷ್ಟೇ ಅಲ್ಲ ದೇವಿಗೆ ನೈವೇದ್ಯ ರೂಪದಲ್ಲಿ ಕೋಣ , ಮೇಕೆ ,ಈ ಪ್ರಾಣಿಗಳನ್ನು ಬಲಿ ಕೊಡಲಾಯಿತು .ಇದಕ್ಕೆ ಕಾರಣ ತಾಯಿ ಮುನಿಸಿಕೊಂಡಳು ಎಂದು ಅಲ್ಲಿನ ಜನ ನಂಬಿದ್ದರು ಆದರೆ ಮೂಢನಂಬಿಕೆ , ಮೌಢ್ಯತೆಗೆಳನು , ಹಳೆಯ ಪದ್ಧತಿ , ನಂಬಿ ಕುಳಿತುಕೊಂಡಿದ್ದರು ಅಲ್ಲಿನ ಜನ ಆದರೆ ಪ್ರಾಣಿ ಬಲಿ ಕೊಡುವುದು ಅಕ್ಷಮ್ಯ ಅಪರಾಧ ,ಅದರ ಬದಲು ಆ ಊರಿನ ಜನ ಇದನ್ನೆಲ್ಲ ಬಿಟ್ಟು ಇದಕ್ಕೆ ಏನು ಕಾರಣ ಮೊದಲು ಕಲಿಯಬೇಕು ಇಷ್ಟೊತ್ತಿಗೆ ಆ ಹಳ್ಳಿ ಯಲ್ಲಿ ಕೈ ಮೀರಿ ಹೋಗುವ ಸನ್ನಿವೇಶ ಕಂಡು ಬಂದಿದೆ ಕ–ರಿಯಪ್ಪ ಇಬ್ಬರು ಮಕ್ಕಳನ್ನು ಸಾವಿಗೆ ದೂಡಲು ಆಗಿ–ತ್ತು ನಂತರ ಮತ್ತೊಮ್ಮೆ ಕೆಲವು ದಿನಗಳ ಆದ ಮೇಲೆ ಆ ಮೂಢನಂಬಿಕೆ ನಂಬಿ ಕುಳಿತಿದ್ದರು .ಎಲ್ಲೋ ದೂರದ ಹಳ್ಳಿಯಿಂದ ಬಂದ ಒಬ್ಬ ದೇವ ಮನುಷ್ಯ ಅಂತಹ ನಂಬಬಹುದು ಅಂತಹ ನಾವು ಅಂ–ದುಕೊಳ್ತೀವಿ ಆದರೆ ಹಳ್ಳಿಯ ಜನ ಅವನು ಹೇಳುವ ಮಾತುಗಳನ್ನು ಯಾರೂ ಕೇಳುವ ಸ್ಥಿತಿಯಲ್ಲಿರಲಿಲ್ಲ ಮತ್ತೊಮ್ಮೆ ಅದೇ ದೇವಿಗೆ ಪೂಜೆ 'ಕೋಣ ,ಕುರಿ , ಕೋಳಿ ,ಬಲಿ ನೀಡುತ್ತಿದ್ದರು.

ಆದರೆ ಆ ಊರಿನ ಸಾವಿನ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಾಗ ತೊಡಗಿತು ಎಲ್ಲರೂ ಸೇರಿ ಒಂದು ತೀರ್ಮಾನಕ್ಕೆ ಬಂದರು ಆ ದೈವ ಮನುಷ್ಯನ ಹುಡುಕಿಕೊಂಡು ಹೋದರು ಆದರೆ ಊರಿನ ಉತ್ತರ ಭಾಗದಲ್ಲಿ ಒಂದು ಬಂಡೆಯ ಮೇಲೆ ಕುಳಿತು ಜಪಿಸುತ್ತಿದ್ದ ಅದೇ ಆ ಊರಿನ ದೇವತೆಯನ್ನು ಒಂದೊಮ್ಮೆ ನೀನು ಹೇಳುವ ಮಾತುಗಳನ್ನು ನಾವು ಕೇಳಿರಲಿಲ್ಲ ಈಗ ಹೇಳುವ ಮಾತುಗಳು ಎಲ್ಲರೂ ಸೂಕ್ಷ್ಮವಾಗಿ ಕೇಳುತ್ತವೆ. ಹೇಳ ತೊಡಗಿದ ನೀವು ಮಾಡುವುದು ಸರಿ ಆದರೆ ಅದರಲ್ಲಿ ಕೆಲವು ಮೌಢ್ಯತೆ ಗಳಿಗೆ, ಮೂಢ ನಂಬಿಕೆಗಳಿಗೆ, ಮುಖ ಮಾಡಿದ್ದಿರಿ ಅದನ್ನು ಬಿಟ್ಟು ಬಿಡಿ , ಹಿಂಗಾದ್ರ ಪ್ರಾಣಿಗಳನ್ನು ಬಲಿ ಕೊಡುವುದು ಅದರ ಬದಲಾಗಿ ಆ ದೇವಿಗೆ ಪೂಜೆ ಮಾಡುವಾಗ ಗುಡಿಯನ್ನು ಸಿಂಗಾರಿ ಊರಿನ ಎಲ್ಲಾ ಮನೆಗಳಲ್ಲಿ ತಳ್ಳಿರುತೋರಣಗಳಿಂದ ಸಿಂಗರಿಸಿ ಪ್ರತಿಯೊಬ್ಬರ ಮನೆಯಲ್ಲಿ ಆ ದೇವಿಗೆ ಮನಸ್ ಪೂರಕವಾಗಿ ನಮ್ಮ ಊರಿನ ಸಮಸ್ಯೆಯು ಎಲ್ಲಾ ದೂರವಾಗಲಿಎಂದು ಅವರ ಅವರ ಮನೆಯಲ್ಲಿ ಇದ್ದ ಪದಾರ್ಥಗಳಿಂದ ನೈವೇದ್ಯೆ ಯನ್ನು ಮಾಡಿ ಮಾರಮ್ಮನ ಗುಡಿಗೆ ತಂದು ಎಲ್ಲರ ಸಮ್ಮುಖ ದೇವಿಗೆ ಪ್ರಾರ್ಥಿಸಿ ಎಂದು ತಿಳಿಸಿದನು .ಹೀಗೆ ಆ ಊರಿನ ಜನ ಮಾಡಿದರು ಎಲ್ಲಾ ಸಮಸ್ಯೆ ಆ ಊರಿನಲ್ಲಿ ಬಿಟ್ಟು ಹೋಗಿತ್ತು .ಆಗ ಆ ಒಬ್ಬ ಮನುಷ್ಯನಿ0ದಆ ಊರಿನ ಜೀವನರಲ್ಲಿ ಮೌಢ್ಯತೆ ,ಮೂಢನಂಬಿಕೆ ,ಅಸಾಂಪ್ರದಾಯಿಕತೆ,–ಎಲ್ಲ ಕಳೆಯಿತು .ಹೀಗಿರುವಾಗ ಮೊದಲು ನಾವು ಯಾವುದಾದರೂ ಸಮಸ್ಯೆಯಲ್ಲಿ ಕಂಡು ಬಂದಾಗ ಯಾರಾದರೂ ಸಲಹೆ ಸೂಚನೆಗಳನ್ನು ಕೊಟ್ಟಾಗ ಮೊದಲು ನಾವು ಸೂಕ್ಷ್ಮವಾಗಿ ಆಲೋಚಿ ನಂತರ ಅವುಗಳನ್ನು ಸ್ವೀಕರಿ ಪಾಲಿಸಿ ನಮ್ಮ ಸಮಸ್ಯೆಯನ್ನು ವಿಮುಕ್ತಿಗೊಳಿಸಲ??ಸಾಧ್ಯ .

**ಲೇಖಕ :– ಕೆ .ಮಹೇಂದ್ರ ಶಿಕ್ಷಕ**

KARUNADA KANDA, Fortnightly, Published and Owned by Karibasappa Baligar, At & Post: Gunnal-583237, Tq: Yalaburga, Dist: Koppal. Printed at Manohar printery , Azad road CBT HUBLI, Dist. Dharwad -580 020 email-karunadakanda33@gmail.com, Ph:9986366909, 9742776385. KARKAN/2021/27600. Editor: Basavaraj Baligar.